ಗುರುವಾರ, ಆಗಸ್ಟ್ 11, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 222 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗಾಗಿ ಐಬಿಪಿಎಸ್ ಸ್ಪರ್ಧಾತ್ಮಕ ಪರೀಕ್ಷೆ ನಡೆಸುತ್ತಿದೆ. ಪರೀಕ್ಷೆ ವಿವರ ಹಾಗೂ ಸಿದ್ಧತೆ ಕುರಿತ ಮಾಹಿತಿ ಇಲ್ಲಿದೆ



ರಕ್ಷಾ ಬಂಧನ ಹಬ್ಬದ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,817 ▼	17,535 ▲	₹ 54,150 (ಬೆಂಗಳೂರು) ▲	₹ 60,200 (ಬೆಂಗಳೂರು) ▼	79.25 ▲

ಕೇಂದ್ರದಲ್ಲಿ 2024ರಲ್ಲೂ ಅಧಿಕಾರಕ್ಕೆ ಬರುತ್ತಾರೆಯೇ: ಬಿಹಾರ ಸಿ.ಎಂ ಪ್ರಶ್ನೆ

ಮೋದಿಗೆ ನಿತೀಶ್ ಸವಾಲು

ಪ್ರಜಾವಾಣಿ ವಾರ್ತೆ

ಪಟ್ನಾ: ಬಿಜೆಪಿ ಮೈತ್ರಿಯನ್ನು ತೊರೆದು ವಿರೋಧ ಪಕ್ಷಗಳ ಮಹಾಮೈತ್ರಿಕೂಟದ ಜತೆಗೆ ಸರ್ಕಾರ ರಚಿಸಿದ ಬೆನ್ನಲ್ಲೇ ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಅವರು, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸವಾಲು ಹಾಕಿದ್ದಾರೆ. '2024ರಲ್ಲಿ ಅವರು ಅಧಿಕಾರಕ್ಕೆ ಬರುತ್ತಾರೆಯೇ' ಎಂದು ನಿತೀಶ್ ಪ್ರಶ್ನಿಸಿದ್ದಾರೆ.

ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮದ ನಂತರ ಮಾಧ್ಯಮ ಪ್ರತಿನಿಧಿಗಳ ಜತೆ ಅವರು ಮಾತನಾಡಿದ್ದಾರೆ. 'ನಮ್ಮ ಭವಿಷ್ಯ ಏನು ಎಂಬುದು ಈಗಿನ ಪ್ರಶ್ನೆಯಲ್ಲ. ಬದಲಿಗೆ 2014ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದವರು, 2024ರಲ್ಲೂ ಅಧಿಕಾರದಲ್ಲೇ ಇರುತ್ತಾರೆಯೇ ಎಂಬುದು ಈಗ ಕೇಳಬೇಕಾಗಿರುವ ಪ್ರಶ್ನೆ. ಅವರು ತಲೆಕೆಡಿಸಿಕೊಳ್ಳಬೇಕಿರುವುದು 2024ರ ಬಗ್ಗೆ, ನನ್ನ ಕುರಿತು ಅಲ್ಲ' ಎಂದು ನಿತೀಶ್ ಹೇಳಿದ್ದಾರೆ.

'ನಾನು ಪ್ರಧಾನಿ ಹುದ್ದೆಯ ಆಕಾಂಕ್ಷಿಯಲ್ಲ' ಎಂದು ನಿತೀಶ್ ಸ್ಪಷ್ಟಪಡಿಸಿದ್ದಾರೆ. 'ಆದರೆ, ಬಿಜೆಪಿ ವಿರುದ್ಧ ಹೋರಾಡುತ್ತಿರುವ ಎಲ್ಲಾ ವಿರೋಧ ಪಕ್ಷಗಳನ್ನು ನಾನು ಒಗ್ಗೂಡಿಸುತ್ತೇನೆ' ಎಂದು ಅವರು ಹೇಳಿದ್ದಾರೆ. ಬಿಜೆಪಿಯ ಸಖ್ಯವನ್ನು ತೊರೆದು, ಬಿಹಾರದ ವಿರೋಧ ಪಕ್ಷಗಳ ಜತೆಗೆ ಸರ್ಕಾರ ರಚಿಸಿದ ನಿತೀಶ್ ಅವರ ನಡೆಯನ್ನು



ಪಟ್ನಾದಲ್ಲಿ ಬುಧವಾರ ಬಿಹಾರದ ಉಪ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ತೇಜಸ್ವಿ ಯಾದವ್ ಅವರನ್ನು ಮುಖ್ಯಮಂತ್ರಿ ನಿತೀಶ್ ಕುಮಾರ್ ಅಭಿನಂದಿಸಿದರು —ಪಿಟಿಐ ಚಿತ್ರ

ದೇಶದ ಬಹುತೇಕ ಪ್ರತಿಪಕ್ಷಗಳು ಸ್ವಾಗತಿಸಿವೆ. ದೇಶದ ರಾಜಕಾರಣದಲ್ಲಿ ಇದೊಂದು ಮಹತ್ವದ ಬದಲಾವಣೆ ಎಂದು ವಿರೋಧ ಪಕ್ಷಗಳ ಹಲವು ನಾಯಕರು ಹೇಳಿದ್ದಾರೆ.

ಬಿಜೆಪಿಯಲ್ಲಿ ಈಗಿನ ಸ್ಥಿತಿ ಸರಿಯಾಗಿಲ್ಲ ಎಂದು ನಿತೀಶ್ ಆರೋಪಿಸಿದ್ದಾರೆ. 'ವಾಜಪೇಯಿ–ಅಡ್ವಾಣಿ ಅವರ ಕಾಲದ ಬಿಜೆಪಿಯ ದಿನಗಳು ಉತ್ತಮವಾಗಿದ್ದವು. ಪ್ರಧಾನಿಯಾಗಿದ್ದ ವಾಜಪೇಯಿ ಅವರಿಂದ ನಮಗೆ ಮಾರ್ಗದರ್ಶನ ದೊರೆಯುತ್ತಿತ್ತು. ಆದರೆ ಬಿಜೆಪಿಯ ಈಗಿನ ದಿನಗಳು ಅದಕ್ಕೆ ಸಂಪೂರ್ಣ ವ್ಯತಿರಿಕ್ತವಾಗಿವೆ' ಎಂದು ಅವರು ಹೇಳಿದ್ದಾರೆ.

'2020ರ ವಿಧಾನಸಭಾ ಚುನಾವಣೆಯ ಫಲಿತಾಂಶ ಬಂದ ನಂತರ ಮುಖ್ಯಮಂತ್ರಿಯಾಗಿ ಮುಂದುವರಿಯಲು ನಾನು ಬಯಸಿರಲಿಲ್ಲ. ಆದರೆ, ಬಿಜೆಪಿಯ ಒತ್ತಡಕ್ಕೆ ಮಣಿದು ಮುಖ್ಯಮಂತ್ರಿಯಾದೆ. ಅದಕ್ಕಾಗಿ ಪಶ್ಚಾತ್ತಾಪ ಪಡುತ್ತೇನೆ. ಆದರೆ, ನಿನ್ನೆ ಬಿಜೆಪಿಯನ್ನು ದೂರ ತಳ್ಳಿದ ನಂತರ ಆರಾಮವಾಗಿ ಇದ್ದೇನೆ' ಎಂದು ಅವರು ಹೇಳಿದ್ದಾರೆ.

ಇನ್ನಷ್ಟು ಸುದ್ದಿಗಳು 11

ಎಂಟನೇ ಬಾರಿ ಮುಖ್ಯಮಂತ್ರಿ

ಬಿಹಾರದ ಮುಖ್ಯಮಂತ್ರಿಯಾಗಿ ನಿತೀಶ್ ಕುಮಾರ್ ಅವರು ಬುಧವಾರ ಎಂಟನೇ ಬಾರಿಗೆ ಪ್ರಮಾಣ ವಚನ ಸ್ವೀಕರಿಸಿದರು. ರಾಜಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಆರ್‌ಜೆಡಿ ಮುಖ್ಯಸ್ಥ ತೇಜಸ್ವಿ ಯಾದವ್ ಅವರು ಉಪಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಒಟ್ಟು ಏಳು ಪಕ್ಷಗಳ ಮಹಾಮೈತ್ರಿಕೂಟದ ಈ ಸರ್ಕಾರದಲ್ಲಿ ಸಚಿವ ಸಂಪುಟದ ಸದಸ್ಯರ ಸಂಖ್ಯೆ 35ರಷ್ಟು ಇರಲಿದೆ ಎನ್ನಲಾಗಿದೆ. ಮೈತ್ರಿಕೂಟದ ಯಾವ ಪಕ್ಷಕ್ಕೆ ಎಷ್ಟು ಸಚಿವ ಸ್ಥಾನ ಸಿಗಲಿದೆ ಎಂಬುದು ಇನ್ನೂ ಅಂತಿಮವಾಗಿಲ್ಲ. ಆದರೆ, ಪ್ರಮುಖ ಖಾತೆಗಳನ್ನು ಜೆಡಿಯು ಉಳಿಸಿಕೊಳ್ಳಲಿದೆ ಮತ್ತು ಮೈತ್ರಿಕೂಟದಲ್ಲೇ ಅತ್ಯಂತ ದೊಡ್ಡ ಪಕ್ಷವಾಗಿರುವ ಆರ್‌ಜೆಡಿಗೆ ಹೆಚ್ಚಿನ ಸಚಿವ ಸ್ಥಾನಗಳು ಸಿಗಲಿವೆ ಎಂದು ಮೂಲಗಳು ಹೇಳಿವೆ. ಕಾಂಗ್ರೆಸ್‌ಗೂ ನಾಲ್ಕು ಖಾತೆಗಳು ದೊರೆಯಲಿದೆ ಎನ್ನಲಾಗಿದೆ.

243 ಸ್ಥಾನಗಳಿರುವ ಬಿಹಾರ ವಿಧಾನಸಭೆಯಲ್ಲಿ ಈಗ ಒಂದು ಸ್ಥಾನ ತೆರವಾಗಿದೆ. ಹೀಗಾಗಿ ವಿಧಾನಸಭೆಯ ಗಾತ್ರ 242ಕ್ಕೆ ಕುಸಿದಿದೆ. ಸರ್ಕಾರ ರಚನೆಗೆ 122 ಶಾಸಕರ ಬೆಂಬಲ ಬೇಕಿದೆ. ಆದರೆ ಜೆಡಿಯು ನೇತೃತ್ವದ ಮಹಾಮೈತ್ರಿಕೂಟದ ಒಟ್ಟು ಶಾಸಕರ ಸಂಖ್ಯೆ 164ರಷ್ಟಿದೆ.

'ಇ.ಡಿ, ಸಿಬಿಐಗೆ ಹೆದರುವುದಿಲ್ಲ'

'ನಾವು ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಸಿಬಿಐಗೆ ಹೆದರುವುದಿಲ್ಲ' ಎಂದು ಜೆಡಿಯು ರಾಷ್ಟ್ರೀಯ ಅಧ್ಯಕ್ಷ ಲಲನ್ ಸಿಂಗ್ ಹೇಳಿದ್ದಾರೆ.

'ವಿರೋಧ ಪಕ್ಷಗಳ ವಿರುದ್ಧ ಬಿಜೆಪಿಯು, ಕೇಂದ್ರದ ತನಿಖಾ ಸಂಸ್ಥೆಗಳನ್ನು ಛೂ ಬಿಡುತ್ತದೆ. ಆದರೆ, 'ದೊಡ್ಡ ಕಂಪನಿ'ಗಳನ್ನು ನಡೆಸುತ್ತಿರುವವರು ಅಂತಹ ಸಂಸ್ಥೆಗಳಿಗೆ ಹೆದರಬೇಕು. ಸಂಸದರಾಗಿ, ಶಾಸಕರಾಗಿ ವೇತನ ಪಡೆಯುವವರು ಹಾಗೂ ನ್ಯಾಯಬದ್ಧ ವ್ಯವಹಾರದಿಂದ ಆದಾಯ ಪಡೆಯುವವರು ಆ ಸಂಸ್ಥೆಗಳಿಗೆ ಹೆದರಬೇಕಿಲ್ಲ' ಎಂದು ಅವರು ಹೇಳಿದ್ದಾರೆ. 'ಅರುಣಾಚಲ ಪ್ರದೇಶದಲ್ಲಿ ನಾವು ಬಿಜೆಪಿ ಸರ್ಕಾರಕ್ಕೆ ಬೆಂಬಲ ನೀಡಿದ್ದೆವು. ಆದರೆ, ಬಿಜೆಪಿ ನಮ್ಮ ಶಾಸಕರನ್ನೆಲ್ಲಾ ತನ್ನತ್ತ ಸೆಳೆದುಕೊಂಡಿತು. ಅವರಿಂದ ನಾವು ಮೈತ್ರಿಧರ್ಮದ ಪಾಠ ಕೇಳಬೇಕಾಗಿಲ್ಲ' ಎಂದು ಅವರು ಹೇಳಿದ್ದಾರೆ.

ಅನುಭವ ಮಂಟಪ
ಪಶ್ಚಿಮ ಘಟ್ಟದ ರಕ್ಷಣೆಗೆ ಪರ್ಯಾಯಗಳೇನು?

ಒಳ ಪುಟಗಳು

ಚಿನಕುರಳಿ
ಪ್ರಕಾಶ್ ಶೆಟ್ಟಿ



ಟೆಂಡರ್ ಅವ್ಯವಹಾರದ ಕುರಿತು ವರದಿ– ನಡೆಯದ ತನಿಖೆ

ಬಯೊಮೆಡಿಕಲ್ ಉಪಕರಣ: ₹12 ಕೋಟಿ ನಷ್ಟ?

• ಸಚ್ಚಿದಾನಂದ ಕುರಗುಂದ

ಪ್ರಜಾವಾಣಿ ವಿಶೇಷ

ಬೆಂಗಳೂರು: ಆರೋಗ್ಯ ಇಲಾಖೆಯಲ್ಲಿನ ಬಯೊಮೆಡಿಕಲ್ ಉಪಕರಣಗಳ ನಿರ್ವಹಣೆಯಲ್ಲಿ ಸರ್ಕಾರದ ಬೊಕ್ಕಸಕ್ಕೆ ₹12.51 ಕೋಟಿಗೂ ಹೆಚ್ಚು ನಷ್ಟ ಮತ್ತು ಟೆಂಡರ್ ಪ್ರಕ್ರಿಯೆಯಲ್ಲಿ ಅಕ್ರಮಗಳು ನಡೆದಿದ್ದರೂ ತನಿಖೆ ನಡೆಸಲು ಸರ್ಕಾರ ಮುಂದಾಗಿಲ್ಲ.

ಇದೇ 8ರಂದು ನಡೆದ ಆರೋಗ್ಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲೂ ಈ ವಿಷಯದ ಬಗ್ಗೆ ಚರ್ಚಿಸಲಾಗಿದ್ದು, ಸಂಬಂಧಪಟ್ಟ ಕಡತಗಳನ್ನು ಪರಿಶೀಲಿಸಲು ಸಚಿವರಿಗೆ ಕಳುಹಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಈ ಪ್ರಕರಣದ ಕುರಿತು ಹಿರಿಯ ಅಧಿಕಾರಿಯೊಬ್ಬರು ಸಮಗ್ರ ವರದಿ ಸಿದ್ಧಪಡಿಸಿ ಇಲಾಖೆಗೆ ಸಲ್ಲಿಸಿದ್ದರು. ಆದರೆ, ಇದುವರೆಗೆ ತನಿಖೆಗೆ ಆದೇಶ ನೀಡಿಲ್ಲ ಅಥವಾ ಲೋಪವೆಸಗಿದ ಅಧಿಕಾರಿಗಳ ವಿರುದ್ಧ ಯಾವುದೇ ರೀತಿ ಕ್ರಮಗಳನ್ನು ತೆಗೆದು ಕೊಳ್ಳುವ ಗೋಜಿಗೆ ಹೋಗಿಲ್ಲ. ಬದಲಾಗಿ, ಟೆಂಡರ್ ಪಡೆದ ಕಂಪನಿ ಗಳಿಗೆ ಬಿಲ್ ಪಾವತಿಸುವಂತೆ ಒತ್ತಡ ಹೇರುವ ಪ್ರಯತ್ನಗಳು ನಡೆಯುತ್ತಿವೆ ಎಂದು ಇಲಾಖೆ ಮೂಲಗಳು ತಿಳಿಸಿವೆ.

'ಬಯೊಮೆಡಿಕಲ್ ಉಪಕರಣಗಳ ನಿರ್ವಹಣೆಯ ಟೆಂಡರ್ ಪ್ರಕ್ರಿಯೆಯನ್ನು ಆರೋಗ್ಯ ಇಲಾಖೆಯ ಕೆಲವು ಅಧಿಕಾರಿಗಳು ಬೇಜವಾಬ್ದಾರಿಯಿಂದ ನಿರ್ವಹಿಸಿದ್ದಾರೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿನ ಪಾರದರ್ಶಕತೆ (ಕೆಟಿಟಿಪಿ) ಕಾಯ್ದೆಯನ್ನು ಉಲ್ಲಂಘಿಸಿದ್ದರಿಂದ ಬೊಕ್ಕಸಕ್ಕೆ ಅಪಾರ ನಷ್ಟವಾಗಿದೆ. ಹೀಗಾಗಿ, ಈ ಪ್ರಕರಣದ ಬಗ್ಗೆ ಸಮಗ್ರ ಪರಿಶೀಲನೆ ಕೈಗೊಳ್ಳುವ ಅಗತ್ಯವಿರುವುದರಿಂದ ತನಿಖಾ ಸಂಸ್ಥೆಗೆ ವಹಿಸುವುದು ಸೂಕ್ತವಾಗಿದೆ' ಎಂದೂ ವರದಿ ಪ್ರತಿಪಾದಿಸಿದೆ.

ಪರೀಕ್ಷಾ ಕಿಟ್‌ಗಳು, ಎಕ್ಸ್‌–ರೇ ಯಂತ್ರಗಳು ಸೇರಿ ಹಲವು ಬಯೊ ಮೆಡಿಕಲ್ ಉಪಕರಣಗಳನ್ನು ಆಸ್ಪತ್ರೆಯಲ್ಲಿ ನಿರ್ವಹಿಸಲಾಗುತ್ತಿದೆ. ರಾಜ್ಯದಲ್ಲಿನ ಎಲ್ಲ ಆರೋಗ್ಯ ಕೇಂದ್ರಗಳಲ್ಲಿನ ವಿವಿಧ ವೈದ್ಯಕೀಯ ಉಪಕರಣಗಳ ನಿರ್ವಹಣೆ ಮತ್ತು ದುರಸ್ತಿಗಾಗಿ 2017ರ ಮಾರ್ಚ್ 15ರಿಂದ ಆರಂಭವಾಗಿದ್ದ ಈ ಟೆಂಡರ್ ಪ್ರಕ್ರಿಯೆ ಹಣಕಾಸು ಇಲಾಖೆ ಅನುಮೋದನೆ ಪಡೆಯುವುದು ಸೇರಿ ವಿವಿಧ ಕಾರಣಗಳಿಂದ ವಿಳಂಬವಾಯಿತು. 2 ವರ್ಷಗಳ ನಂತರ ಟೆಂಡರ್ ಪ್ರಕ್ರಿಯೆ ಆರಂಭವಾಯಿತು. 'ಆರೋಗ್ಯ ಇಲಾಖೆಯಲ್ಲಿನ ಬಯೊಮೆಡಿಕಲ್ ಉಪಕರಣಗಳನ್ನು ಮೂರು ವರ್ಷ ನಿರ್ವಹಣೆ ಮಾಡಲು ₹53.96 ಕೋಟಿ ಮೊತ್ತಕ್ಕೆ ಟೆಂಡರ್ ನಿಗದಿಯಾಗಿತ್ತು. ರಾಷ್ಟ್ರೀಯ ಆರೋಗ್ಯ ಅಭಿಯಾನ (ಎನ್‌ಎಚ್‌ಎಂ) ಅನುದಾನದ ಅಡಿಯಲ್ಲಿ ಜಾರಿಗೊಳಿಸಲು ಸರ್ಕಾರ ಒಪ್ಪಿಗೆ ನೀಡಿತ್ತು. ಸಕಾರಣ ವಿಲ್ಲದೇ, ಈ ಮೊತ್ತವನ್ನು ₹74.98 ಕೋಟಿಗೆ ಹೆಚ್ಚಿಸಿ ಟೆಂಡರ್ ನೀಡ ಲಾಯಿತು. ಅನುಮೋದನೆ ನೀಡಿದ ಮೊತ್ತ ಕ್ಕಿಂತಲೂ ಶೇ 40ರಷ್ಟು ಹೆಚ್ಚಾಗಿತ್ತು' ಎಂದು ವರದಿ ಹೇಳಿದೆ.

'ನಿರ್ವಹಣೆ ಮಾಡಬೇಕಿದ್ದ 28 ಸಾವಿರ ಬಯೊ ಮೆಡಿಕಲ್ ಉಪಕರಣಗಳ ಆಸ್ತಿ ಮೌಲ್ಯವನ್ನು ಮೊದಲ ವರ್ಷಕ್ಕೆ ₹137.20 ಕೋಟಿ ಎಂದು ನಿಗದಿಪಡಿಸಿದ್ದು ಸಹ ಅಚ್ಚರಿ ಮೂಡಿಸಿದೆ. ನಂತರ, 'ಟಿವಿಎಸ್ ಲಾಜಿಸ್ಟಿಕ್ಸ್ ಸರ್ವಿಸಸ್'ಗೆ ನೀಡಿದ ಗುತ್ತಿಗೆ ಮತ್ತು ಕಾರ್ಯಾದೇಶದಲ್ಲಿ ಆಸ್ತಿ ಮೌಲ್ಯವನ್ನು ದುರುದ್ದೇಶದಿಂದ ₹316.83 ಕೋಟಿ ಎಂದು ನಮೂದಿಸಲಾಯಿತು. ಇದರಿಂದ, ₹9.55 ಕೋಟಿಗೆ ನೀಡಬೇಕಾಗಿದ್ದ ಗುತ್ತಿಗೆಯನ್ನು ₹22.06 ಕೋಟಿಗೆ ನೀಡಲಾಯಿತು. ಈ ಮೂಲಕ ಸರ್ಕಾರದ ಬೊಕ್ಕಸಕ್ಕೆ ₹12.51 ಕೋಟಿ ನಷ್ಟವಾಗಿದೆ' ಎಂದೂ ವರದಿ ವಿವರಿಸಿದೆ.

'ಹೆಚ್ಚುವರಿ ಹಣ ನೀಡುವ ಪ್ರಶ್ನೆ ಇಲ್ಲ'


'ಇದು ಹಿಂದಿನ ಸರ್ಕಾರದ ಅವಧಿಯಲ್ಲಿ ನೀಡಿದ್ದ ಗುತ್ತಿಗೆ ಪ್ರಕರಣ. ನಿಗದಿತ ಅವಧಿಯಲ್ಲಿ ಯೋಜನೆ ಪೂರ್ಣಗೊಳಿಸದ ಕಾರಣಕ್ಕಾಗಿ ಕಂಪನಿಗೆ ನೀಡಬೇಕಾದ ಹಣವನ್ನು ತಡೆಹಿಡಿಯಲಾಗಿದೆ. ಕೋವಿಡ್ ಬಳಿಕ ಕೆಲಸ ಮುಗಿಸಿದ್ದರೂ ಹಣ ನೀಡಿಲ್ಲ. ಕಂಪನಿಯವರು ಬಾಕಿ ನೀಡುವಂತೆ ಸರ್ಕಾರಕ್ಕೆ ಮನವಿ ನೀಡಿದ್ದ ಹಿನ್ನೆಲೆಯಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾನೂನು ಇಲಾಖೆ ಅಭಿಪ್ರಾಯ ಕೋರಲಾಗಿದೆ. ಅವರಿಗೆ ನೀಡಬೇಕಾದ ಹಣವನ್ನೇ ತಡೆಹಿಡಿದಿರುವಾಗ ಹೆಚ್ಚುವರಿ ಹಣ ನೀಡುವ ಪ್ರಶ್ನೆ ಎಲ್ಲಿದೆ?'

—**ಡಾ. ಕೆ.ಸುಧಾಕರ್**, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ

ನೂಪುರ್ ವಿರುದ್ಧ ಎಫ್‌ಐಆರ್: ದೆಹಲಿಗೆ ವರ್ಗಾಯಿಸಲು 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): ಟಿ.ವಿ. ಕಾರ್ಯಕ್ರಮವೊಂದರಲ್ಲಿ ಪ್ರವಾದಿ ಮಹಮ್ಮದ್ ಅವರ ಕುರಿತು ಆಕ್ಷೇಪಾರ್ಹ ಹೇಳಿಕೆ ನೀಡಿದ್ದ ಬಿಜೆಪಿಯ ಮಾಜಿ ವಕ್ತಾರೆ ನೂಪುರ್ ಶರ್ಮಾ ಅವರ ವಿರುದ್ಧ ದೇಶದಾದ್ಯಂತ ದಾಖಲಾಗಿರುವ ಎಲ್ಲ ಎಫ್‌ಐಆರ್‌ಗಳನ್ನು ಒಗ್ಗೂಡಿಸಿ ದೆಹಲಿ ಪೊಲೀಸರಿಗೆ ವರ್ಗಾಯಿಸುವಂತೆ ಸುಪ್ರೀಂ ಕೋರ್ಟ್ ಬುಧವಾರ ನಿರ್ದೇಶನ ನೀಡಿದೆ. ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜೆ.ಬಿ. ಪಾರ್ದಿವಾಲಾ ಅವರನ್ನೊಳಗೊಂಡ ನ್ಯಾಯಪೀಠವು, ದೆಹಲಿ ಪೊಲೀಸರಿಂದ ತನಿಖೆ ಮುಗಿಯುವವರೆಗೆ ನೂಪುರ್ ಶರ್ಮಾ ಅವರಿಗೆ ಮಧ್ಯಂತರ ರಕ್ಷಣೆಯನ್ನು ವಿಸ್ತರಿಸಿದೆ.

ವರವರ ರಾವ್‌ಗೆ 'ಸುಪ್ರೀಂ' ಜಾಮೀನು



ನವದೆಹಲಿ (ಪಿಟಿಐ): ಭೀಮಾ–ಕೋರೆಗಾಂವ್ ಪ್ರಕರಣದಲ್ಲಿ ಆರೋಪಿಯಾಗಿರುವ ಸಾಮಾಜಿಕ ಹೋರಾಟಗಾರ, ಕವಿ ಪಿ.ವರವರರಾವ್ ಅವರಿಗೆ ವೈದ್ಯಕೀಯ ಕಾರಣಕ್ಕೆ ಸುಪ್ರೀಂ ಕೋರ್ಟ್ ಬುಧವಾರ ಜಾಮೀನು ಮಂಜೂರು ಮಾಡಿದೆ.

ನ್ಯಾಯಮೂರ್ತಿಗಳಾದ ಯು.ಯು. ಲಲಿತ್, ಅನಿರುದ್ಧ ಬೋಸ್ ಹಾಗೂ ಸುಧಾಂಶು ಧುಲಿಯಾ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

'ಮಧ್ಯಂತರ ಜಾಮೀನನ್ನು ಹಿಂಪಡೆಯುವಷ್ಟರ ಮಟ್ಟಿಗೆ ವರವರ ರಾವ್ ಅವರ ಆರೋಗ್ಯ ಸುಧಾರಿಸಿಲ್ಲ. ಹೀಗಾಗಿ, ವೈದ್ಯಕೀಯ ಕಾರಣಗಳ ಆಧಾರದ ಮೇಲೆ ಅರ್ಜಿದಾರರು ಜಾಮೀನು ಪಡೆಯಲು ಅರ್ಹರಾಗಿದ್ದಾರೆ' ಎಂದು ನ್ಯಾಯಪೀಠ ಹೇಳಿತು.

ಸಾರಿಗೆ ಇಲಾಖೆಯಲ್ಲಿ ತೆರಿಗೆ ಗೋಲ್‌ಮಾಲ್

ಅಳತೆ ಕಡಿಮೆ ತೋರಿಸಿ ವಂಚನೆ!

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ತೆರಿಗೆ ವಂಚಿಸಲು ಹಲವು ಕಳ್ಳದಾರಿಗಳನ್ನು ಸಾರಿಗೆ ಇಲಾಖೆ ಅಧಿಕಾರಿಗಳೇ ವಾಹನ ಮಾಲೀಕರಿಗೆ ಹುಡುಕಿಕೊಟ್ಟಿರುವುದು ವಿಚಾರಣೆಯಿಂದ ಪತ್ತೆಯಾಗಿದೆ. ವಾಹನಗಳ ತಳ ಅಳತೆಯನ್ನು ಕಡಿಮೆ ನಮೂದಿಸಿ ಸರ್ಕಾರಕ್ಕೆ ವಂಚಿಸಿರುವ ಹಲವು ಪ್ರಕರಣಗಳು ದೃಢಪಟ್ಟಿವೆ.

ಪ್ರಯಾಣಿಕರನ್ನು ಸಾಗಿಸುವ ಬಸ್‌ಗಳು, ಮ್ಯಾಕ್ಸಿಕ್ಯಾಬ್‌ಗಳು ಸೇರಿದಂತೆ ವಾಣಿಜ್ಯ ಉದ್ದೇಶಕ್ಕೆ ಬಳಸುವ ವಾಹನಗಳಿಗೆ ಪ್ರತಿ ಮೂರು ತಿಂಗಳಿಗೊಮ್ಮೆ ತೆರಿಗೆ ಪಾವತಿಸಬೇಕು. ವಾಹನಗಳ ಉದ್ದ ಮತ್ತು ಅಗಲ ಆಧರಿಸಿ ತೆರಿಗೆ ನಿಗದಿ ಮಾಡಲಾಗಿದೆ. ವಾಹನದ ಅಳತೆಯನ್ನೇ (ಫ್ಲೋರ್ ಏರಿಯಾ) ಕಡಿಮೆ ದಾಖಲಿಸಿ ವಾಹನ ಮಾಲೀಕರಿಗೆ ಅನುಕೂಲ ಮಾಡಿಕೊಡುವ ಕಲೆಯನ್ನು ಅಧಿಕಾರಿಗಳು ಸಿದ್ಧಿಸಿಕೊಂಡಿದ್ದಾರೆ. ಸಾರಿಗೆ ಇಲಾಖೆಯ ಎಲ್ಲಾ ಸೇವೆಯನ್ನೂ ಆನ್‌ಲೈನ್ ಮಾಡಿದ್ದರೂ ಅಕ್ರಮ ದಾರಿಗಳನ್ನು ಸಾರಿಗೆ ಇಲಾಖೆ ಅಧಿಕಾರಿಗಳೇ ಕಂಡುಕೊಂಡಿದ್ದಾರೆ ಎಂಬುದಕ್ಕೆ ಈ ಪ್ರಕರಣ ಸಾಕ್ಷಿಯಾಗಿದೆ ಎಂಬುದನ್ನು ವರದಿಯೇ ಹೇಳಿದೆ.

ತೆರಿಗೆ ವಂಚನೆ ಹೇಗೆ?: ವಾಹನದ ಒಳಭಾಗದ ಅಳತೆ 21 ಅಡಿ ಇದ್ದರೆ ಆ ವಾಹನಕ್ಕೆ ತ್ರೈಮಾಸಿಕ ₹52,448 ತೆರಿಗೆ ಪಾವತಿಸಬೇಕು. ಸರ್ವರ್‌ನಲ್ಲಿ ವಾಹನದ ಅಳತೆಯನ್ನು ಕಡಿಮೆ ನಮೂದಿಸಿದರೆ ತೆರಿಗೆ ಮೊತ್ತವೂ ಕಡಿಮೆಯಾಗುತ್ತದೆ. 17.1 ಅಡಿ ಎಂದು ನಮೂದಿಸಿ ₹42,708 ಪಾವತಿ ಮಾಡಿಸಿಕೊಳ್ಳಲಾಗಿದೆ. ಇದರಿಂದ ಪ್ರತಿ ವಾಹನದಿಂದ ₹9,740 ನಷ್ಟು ಸರ್ಕಾರಕ್ಕೆ ಖೋತಾ ಆಗಿದೆ. ಎಲೆಕ್ಟ್ರಾನಿಕ್ ಸಿಟಿ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಈ ರೀತಿಯ 12 ಪ್ರಕರಣ ಪತ್ತೆಯಾಗಿವೆ. ಈ ಬಗ್ಗೆ ವ್ಯಕ್ತಿಯೊಬ್ಬರು ನೀಡಿದ್ದ ದೂರು ಆಧರಿಸಿ ಸಾರಿಗೆ ಆಯುಕ್ತರು 2022ರ ಜನವರಿಯಲ್ಲಿ ತನಿಖೆಗೆ ಆದೇಶಿಸಿದ್ದರು. ತನಿಖೆ ಪೂರ್ಣಗೊಂಡಿದ್ದು, ವಾಹನ ಮಾಲೀಕರೊಂದಿಗೆ ಸಾರಿಗೆ ಇಲಾಖೆ ಸಿಬ್ಬಂದಿ ಕೈಜೋಡಿಸಿ ತೆರಿಗೆ ವಂಚಿಸಿರುವುದು ಬಹಿರಂಗವಾಗಿದೆ. 'ಮ್ಯಾಕ್ಸಿಕ್ಯಾಬ್‌ಗಳು ಹೆಚ್ಚಿನ ಸಂಖ್ಯೆಯಲ್ಲಿ ಇರುವ ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಇಂಥ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಸಾಧ್ಯತೆ ಇದೆ' ಎನ್ನಲಾಗಿದೆ.

'ತಪ್ಪಿತಸ್ಥರ ವಿರುದ್ಧ ಕ್ರಮ ಆಗಿಲ್ಲ ಏಕೆ'

'ಪ್ರಾಥಮಿಕ ತನಿಖಾ ವರದಿಯನ್ನು ಸಾರಿಗೆ ಆಯುಕ್ತರು ಏಪ್ರಿಲ್‌ನಲ್ಲೇ ಪಡೆದುಕೊಂಡಿದ್ದು, ಈವರೆಗೆ ಯಾರ ವಿರುದ್ಧವೂ ಕ್ರಮಕೈಗೊಂಡಿಲ್ಲ. ಹೆಚ್ಚಿನ ತನಿಖೆ ನಡೆಸಬೇಕು ಮತ್ತು ತಪ್ಪಿತಸ್ಥ ಸಿಬ್ಬಂದಿಯನ್ನು ವಜಾ ಮಾಡಬೇಕು' ಎಂದು ಆಮ್ ಆದ್ಮಿ(ಎಎಪಿ) ಪಕ್ಷದ ರಾಜ್ಯ ಘಟಕದ ಜಂಟಿ ಕಾರ್ಯದರ್ಶಿ ದರ್ಶನ್ ಜೈನ್ ಆಗ್ರಹಿಸಿದರು.

'ಎಲೆಕ್ಟ್ರಾನಿಕ್ ಸಿಟಿ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ನಡೆದಿರುವುದು ಅಕ್ರಮ ಕೇವಲ ಉದಾಹರಣೆಯಷ್ಟೆ. ಎಲ್ಲಾ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲೂ ಈ ರೀತಿಯ ಅಕ್ರಮಗಳು ನಡೆದಿರುತ್ತವೆ. ಬೊಕ್ಕಸಕ್ಕೆ ವರಮಾನ ಸೋರಿಕೆ ಆಗುವುದನ್ನು ತಪ್ಪಿಸಲು ಮತ್ತು ಭ್ರಷ್ಟರಿಗೆ ಶಿಕ್ಷೆ ಕೊಡಿಸಲು ಉನ್ನತ ಮಟ್ಟದ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದರು.



ಭೂಕುಸಿತ... ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ತೋಳೂರುಶೆಟ್ಟಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹರಪಳ್ಳಿ ಗ್ರಾಮದಲ್ಲಿ ಭೂಕುಸಿತ ಸಂಭವಿಸಿದೆ

ತೆರಿಗೆ ಪರಿಷ್ಕರಣೆಗೆ ಗ್ರಾಮ ಆಸ್ತಿ ಸಮೀಕ್ಷೆ?

ಕೃಷಿಯೇತರ ಎಲ್ಲ ಆಸ್ತಿಗಳನ್ನೂ ತೆರಿಗೆ ವ್ಯಾಪ್ತಿಗೆ ತರುವ ಉದ್ದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಕೃಷಿಯೇತರ ಭೂಮಿ, ಕಟ್ಟಡಗಳ ಸಮೀಕ್ಷೆ ನಡೆಸಿ, ವೈಜ್ಞಾನಿಕವಾಗಿ ತೆರಿಗೆ ನಿಗದಿ ಮಾಡಲು ಸರ್ಕಾರ ಆದೇಶ ಹೊರಡಿಸಿದ್ದು, 3 ತಿಂಗಳ ಗಡುವು ನೀಡಿದೆ.

ತುಮಕೂರು ಜಿಲ್ಲೆಯ 330 ಪಂಚಾಯಿತಿಗಳಲ್ಲಿ ಈಗಾಗಲೇ ಪ್ರಾಯೋಗಿಕವಾಗಿ ಸಮೀಕ್ಷೆ ನಡೆಸಲಾಗಿದೆ. ತೆರಿಗೆ ವ್ಯಾಪ್ತಿಯಿಂದ ಹೊರಗೆ ಉಳಿದ ಎಲ್ಲ ಆಸ್ತಿಗಳಿಗೂ ತೆರಿಗೆ ನಿಗದಿ ಮಾಡಲಾಗಿದೆ. ಇದೇ ಮಾದರಿಯನ್ನು ರಾಜ್ಯದ ಇತರೆ ಜಿಲ್ಲೆಗಳ 5,619 ಪಂಚಾಯಿತಿಗಳಲ್ಲೂ ಅನುಸರಿಸಲು ನಿರ್ಧರಿಸಲಾಗಿದೆ.

ಆಸ್ತಿಗಳ ಸಮೀಕ್ಷೆಗೆ ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯಿತಿಗಳ ಸಂಕೇತ ಒಳಗೊಂಡ ಮುದ್ರಿತ ವಿಶಿಷ್ಟ ಗುರುತಿನ ಕ್ರಮಸಂಖ್ಯೆ ಒಳಗೊಂಡ ನಮೂನೆಗಳನ್ನು ಬಳಸಬೇಕು. ಸಮೀಕ್ಷೆ ಖಾತರಿಗೆ ಪಂಚಾಯತ್‌ರಾಜ್ ಆಯುಕ್ತಾಲಯದ ಹಾಲೋಗ್ರಾಮ್‌ಗಳನ್ನು ಕಡ್ಡಾಯವಾಗಿ ಬಳಸಬೇಕು. ಆಸ್ತಿ ಸಮೀಕ್ಷೆಯ ಖರ್ಚುಗಳನ್ನು ಪಂಚಾಯಿತಿಗಳು ತಮ್ಮ ಸ್ವಂತ ನಿಧಿ, 14 ಅಥವಾ 15ನೇ ಹಣಕಾಸು ಅನುದಾನದಲ್ಲಿ ಬಳಸಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

ಪಂಚತಂತ್ರ 2.0ನಲ್ಲಿ ಆಸ್ತಿಗಳ ಮಾಲೀಕರು ಸ್ವಯಂಚಾಲಿತ ತೆರಿಗೆ ಲೆಕ್ಕಾಚಾರದ ಮೂಲಕ ತೆರಿಗೆ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಈ ಸ್ವತ್ತು ತಂತ್ರಾಂಶ ಅಳವಡಿಸಿರುವುದರಿಂದ ಮಾಲೀಕರು ಆಸ್ತಿ ದಾಖಲೆಗಳನ್ನು ಸುಲಭವಾಗಿ ಪಡೆದುಕೊಳ್ಳಬಹುದು. ಈ ಸಮೀಕ್ಷೆ ಕಾರ್ಯ ಯಶಸ್ವಿಯಾಗಿ ಪೂರ್ಣಗೊಳಿಸಲು ಪಂಚಾಯತ್‌ರಾಜ್ ಆಯಕ್ತಾಲಯದ ನಿರ್ದೇಶಕರನ್ನು ರಾಜ್ಯ ನೋಡಲ್ ಅಧಿಕಾರಿಯಾಗಿ, ಜಿಲ್ಲಾ ಪಂಚಾಯಿತಿ ಅಭಿವೃದ್ಧಿ ಕಾರ್ಯದರ್ಶಿಗಳನ್ನು ಜಿಲ್ಲಾ ನೋಡಲ್ ಅಧಿಕಾರಿಗಳಾಗಿ ನಿಯೋಜಿಸಲಾಗಿದೆ.

ಆಸ್ತಿ ಸಮೀಕ್ಷೆ ಹೇಗೆ?

ಪ್ರತಿ ಗ್ರಾಮದ ಮನೆಮನೆಗೆ ತೆರಳಿ ಸಮೀಕ್ಷೆ ನಡೆಸಬೇಕು. ಕೈಗಾರಿಕಾ ಪ್ರದೇಶಗಳಲ್ಲಿ ಅಧಿಕಾರಿಗಳ ಜತೆ ಜಂಟಿ ಸಮೀಕ್ಷೆ ನಡೆಸಬೇಕು. ನಿಗದಿತ ನಮೂನೆಯಲ್ಲಿ ಆಸ್ತಿಗಳು, ಮಾಲೀಕರ ವಿವರ ಸಂಗ್ರಹಿಸಬೇಕು. ಗ್ರಾಮ ಠಾಣಾ, ಭೂ ಪರಿವರ್ತಿತ ಜಮೀನು, ವಿನ್ಯಾಸ ನಕ್ಷೆ ಅನುಮೋದಿತ ಬಡಾವಣೆ, ಸರ್ಕಾರದ ವಸತಿ ಯೋಜನೆ, ಸಾರ್ವಜನಿಕ ಆಸ್ತಿಗಳನ್ನು ಪ್ರತ್ಯೇಕವಾಗಿ ದಾಖಲಿಸಬೇಕು. ಎಲ್ಲ ದಾಖಲೆಗಳ ಪ್ರತಿಗಳನ್ನು ಸಂಗ್ರಹಿಸಬೇಕು. ಮಾಲೀಕರ ಸಮ್ಮುಖದಲ್ಲೇ ದಾಖಲೆಗಳ ವಿವರ ಹಾಗೂ ಅವರ ಆಸ್ತಿ ತೆರಿಗೆ ದೃಢೀಕರಿಸಬೇಕು. ಕ್ರಮಬದ್ಧ ಆಸ್ತಿ ವಿವರಗಳನ್ನು ನಮೂನೆ 9 ಹಾಗೂ 11 'ಎ' ನಲ್ಲಿ, ಕ್ರಮ ಬದ್ಧವಲ್ಲದ ಆಸ್ತಿಗಳ ವಿವರಗಳನ್ನು 11 'ಬಿ' ನಲ್ಲಿ ದಾಖಲಿಸಬೇಕು. ನಂತರ ಇಲಾಖೆಯ ಪಂಚತಂತ್ರ 2.0ದಲ್ಲಿ ಅಳವಡಿಸಬೇಕು.

ದೇಶೀಯ ವಿಮಾನ ಪ್ರಯಾಣ ದರ ಮಿತಿ 31ರಿಂದ ರದ್ದು

ನವದೆಹಲಿ (ಪಿಟಿಐ): ದೇಶೀಯ ವಿಮಾನ ಪ್ರಯಾಣ ದರಗಳ ಮೇಲೆ ಹೇರಲಾಗಿದ್ದ ಮಿತಿಯನ್ನು ಆಗಸ್ಟ್ 31 ರಿಂದ ತೆಗೆದು ಹಾಕಲಾಗುವುದು ಎಂದು ಕೇಂದ್ರ ವಿಮಾನಯಾನ ಸಚಿವಾಲಯ ಬುಧವಾರ ಹೇಳಿದೆ.

'ವಿಮಾನ ಇಂಧನಕ್ಕೆ (ಎಟಿಎಫ್) ಇರುವ ದೈನಂದಿನ ಬೇಡಿಕೆ ಹಾಗೂ ದರಗಳ ವಿಶ್ಲೇಷಣೆ ನಂತರ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ' ಎಂದು ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಟ್ವೀಟ್ ಮಾಡಿದ್ದಾರೆ.

ಕೋವಿಡ್ ಪಿಡುಗಿನ ಹಿನ್ನೆಲೆಯಲ್ಲಿ ಜಾರಿಗೊಳಿಸಲಾಗಿದ್ದ ಲಾಕ್‌ಡೌನ್ ಅನ್ನು 2020ರ ಮೇ 25ರಂದು ತೆರವು ಮಾಡಲಾಗಿತ್ತು.

ದೇಶೀಯ ವಿಮಾನಗಳ ಹಾರಾಟಕ್ಕೂ ಚಾಲನೆ ನೀಡಲಾಗಿತ್ತಲ್ಲದೇ ಪ್ರಯಾಣದ ಅವಧಿಯ ಆಧಾರದಲ್ಲಿ ದರಗಳ ಮೇಲೆ ಮಿತಿ ಹೇರಲಾಗಿತ್ತು. ಈಗ ಎರಡು ವರ್ಷಗಳ ನಂತರ ಈ ಮಿತಿಯನ್ನು ತೆಗೆದು ಹಾಕಲಾಗುತ್ತಿದೆ.

ಕೆಪಿಟಿಸಿಎಲ್ ಪರೀಕ್ಷೆಯಲ್ಲಿ ಅಕ್ರಮ: ಅಭ್ಯರ್ಥಿ ಬಂಧನ



ಸಿದ್ದಪ್ಪ ಮದಿಹಳ್ಳಿ

ಗೋಕಾಕ (ಬೆಳಗಾವಿ ಜಿಲ್ಲೆ): ಕಳೆದ ಭಾನುವಾರ ನಡೆದ ಕೆಪಿಟಿಸಿಎಲ್ ಕಿರಿಯ ಸಹಾಯಕರ ನೇಮಕಾತಿ ಪರೀಕ್ಷೆಯಲ್ಲಿ ಸ್ಮಾರ್ಟ್‌ವಾಚ್ ಬಳಸಿ ಅಕ್ರಮ ಎಸಗಿದ ಆರೋಪದ ಮೇಲೆ ಸಿದ್ದಪ್ಪ ಮದಿಹಳ್ಳಿ (20) ಎಂಬಾತನನ್ನು ಬುಧವಾರ ಬಂಧಿಸಲಾಗಿದೆ.

ಈ ಬಗ್ಗೆ ಗೋಕಾಕ ನಗರ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸಲಾಗಿದೆ. 'ಆರೋಪಿಯು ಮೂಡಲಗಿ ತಾಲ್ಲೂಕಿನ ನಾಗನೂರು ಗ್ರಾಮದವನಾಗಿದ್ದು ಗೋಕಾಕ ನಗರದ ಪರೀಕ್ಷಾ ಕೇಂದ್ರವೊಂದರಲ್ಲಿ ಈತ ಅಕ್ರಮ ಎಸಗಿದ್ದು ಖಾತ್ರಿಯಾಗಿದೆ. ಆಗಸ್ಟ್ 7ರಂದು ನಡೆದ ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ ಎಂದು ಕೆಲ ಅಭ್ಯರ್ಥಿಗಳು ಮಾಹಿತಿ ನೀಡಿದರು.

ಪರೀಕ್ಷಾ ಕೊಠಡಿಯ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಿದಾಗ, ಆರೋಪಿ ಕೈಯಲ್ಲಿ ಸ್ಮಾರ್ಟ್‌ವಾಚ್ ಇರುವುದು ಗೊತ್ತಾಗಿದೆ. ಆ ವಾಚ್‌ನಲ್ಲಿರುವ ಮಿನಿ ಕ್ಯಾಮೆರಾ ಬಳಸಿ ಪ್ರಶ್ನೆಪತ್ರಿಕೆಯ ಫೋಟೊ ತೆಗೆದು ಹೊರಗೆ ರವಾನಿಸಿದ ಬಗ್ಗೆಯೂ ಮಾಹಿತಿ ಸಿಕ್ಕಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸಂಜೀವ್ ಪಾಟೀಲ 'ಪ್ರಜಾವಾಣಿ'ಗೆ ತಿಳಿಸಿದರು.

'ಪ್ರಶ್ನೆ ಪತ್ರಿಕೆಯ ಫೋಟೊವನ್ನು ಯಾರಿಗೆ ಕಳುಹಿಸಿದ್ದ, ಎಲ್ಲಿಗೆ ಕಳುಹಿಸಿದ್ದ ಮತ್ತು ಅಲ್ಲಿಂದ ಮರಳಿ ಉತ್ತರಗಳನ್ನು ಹೇಗೆ ಪಡೆದುಕೊಂಡಿದ್ದಾನೆ ಎಂಬುದರ ಬಗ್ಗೆ ತಾಂತ್ರಿಕ ಪರಿಣತರಿಂದ ಪರಿಶೀಲನೆ ನಡೆದಿದೆ. ಜತೆಗೆ, ಈ ಅಕ್ರಮದಲ್ಲಿ ಸಿದ್ದಪ್ಪ ಒಬ್ಬನೇ ಇದ್ದಾನೋ ಅಥವಾ ಇತರರೂ ಇದೇ ಮಾರ್ಗ ಅನುಸರಿಸಿದ್ದಾರೋ ಎಂಬ ಬಗ್ಗೆಯೂ ನಿಖರ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ಎಸ್ಪಿ ತಿಳಿಸಿದರು.

'ಡಿವೈಎಸ್‌ಪಿ ನೇತೃತ್ವದಲ್ಲಿ ತಕ್ಷಣ ಎರಡು ತಂಡಗಳನ್ನು ರಚಿಸಲಾಗಿದೆ. ಮೂಲ ಎಲ್ಲಿದೆ ಎಂಬುದನ್ನೂ ಜಾಲಾಡಲಾಗುತ್ತಿದೆ. ಅಕ್ರಮ ಎಸಗಿದ ಯಾರೂ ತಪ್ಪಿಸಿಕೊಳ್ಳಲು ಬಿಡುವುದಿಲ್ಲ' ಎಂದರು.



ವಾರದಲ್ಲಿ 8,230 ಪ್ರಕರಣ


ಬೆಂಗಳೂರು: ನಗರದಲ್ಲಿ ಕಳೆದೊಂದು ವಾರದಿಂದ ಪ್ರತಿನಿತ್ಯ ಸಾವಿರಕ್ಕೂ ಅಧಿಕ ಪ್ರಕರಣಗಳು ದೃಢಪಡುತ್ತಿದ್ದು, ಏಳು ದಿನಗಳಲ್ಲಿ 8,230 ಮಂದಿ ಕೋವಿಡ್ ಪೀಡಿತರಾಗಿದ್ದಾರೆ.


ಬುಧವಾರ 1,058 ಪ್ರಕರಣಗಳು ದೃಢಪಟ್ಟಿವೆ. ಸೋಂಕಿತರಲ್ಲಿ ಹೊಸದಾಗಿ 1,342 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 18.47 ಲಕ್ಷಕ್ಕೆ ತಲುಪಿದೆ. ಸೋಂಕಿತರಲ್ಲಿ 18.23 ಲಕ್ಷ ಮಂದಿ ಈವರೆಗೆ ಗುಣಮುಖರಾಗಿದ್ದಾರೆ. ಸದ್ಯ ನಗರದಲ್ಲಿ 7,049 ಸಕ್ರಿಯ ಪ್ರಕರಣಗಳಿವೆ. ಸೋಂಕಿತರಲ್ಲಿ 35 ಮಂದಿ ಸಾಮಾನ್ಯ ಹಾಸಿಗೆಗಳಲ್ಲಿ ಚಿಕಿತ್ಸೆಗೆ ಒಳಗಾಗಿದ್ದಾರೆ. 13 ಮಂದಿ ಐಸಿಯು, ಐವರು ಎಚ್‌ಡಿಯು ಹಾಗೂ ಒಬ್ಬರು ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಉಳಿದವರು ಮನೆ ಆರೈಕೆಯಲ್ಲಿಯೇ ಚೇತರಿಸಿಕೊಳ್ಳುತ್ತಿದ್ದಾರೆ.

ಕಳೆದ 7 ದಿನಗಳಲ್ಲಿ 1.11 ಲಕ್ಷ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ಸೋಂಕಿತರಾಗಿದ್ದವರಲ್ಲಿ 9,189 ಮಂದಿ ವಾರದ ಅವಧಿಯಲ್ಲಿ ಚೇತರಿಸಿಕೊಂಡಿದ್ದಾರೆ. ನಾಲ್ವರು ಕೋವಿಡ್‌ನಿಂದ ಮೃತಪಟ್ಟಿರುವುದು ದೃಢಪಟ್ಟಿದೆ. ಅಧಿಕ ಸಕ್ರಿಯ ಪ್ರಕರಣಗಳನ್ನು ಹೊಂದಿರುವ ದೇಶದ ಮಹಾನಗರಗಳಲ್ಲಿ ಬೆಂಗಳೂರು ದ್ವಿತೀಯ ಸ್ಥಾನದಲ್ಲಿದೆ. ದೆಹಲಿಯಲ್ಲಿ 7,400ಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿದ್ದು, ಮೊದಲ ಸ್ಥಾನದಲ್ಲಿದೆ.

ದೆಹಲಿ: ದೃಢಪ್ರಮಾಣ ಶೇ 17ಕ್ಕೆ ಏರಿಕೆ

ದೆಹಲಿಯಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬಂದಿದ್ದು, ದೃಢಪ್ರಮಾಣ ಬುಧವಾರ ಶೇ 17.83ಕ್ಕೆ ಹೆಚ್ಚಳವಾಗಿದೆ. ಹೊಸದಾಗಿ 2,146 ಪ್ರಕರಣಗಳು ವರದಿಯಾಗಿದ್ದು, 8 ಜನರು ಮೃತಪಟ್ಟಿದ್ದಾರೆ ಎಂದು ಮೂಲಗಳು ಹೇಳಿವೆ.





ಸಿಇಟಿ: ನೋಂದಣಿ ಸಂಖ್ಯೆ ವ್ಯತ್ಯಾಸವಿರುವ ಅಭ್ಯರ್ಥಿಗಳ ಪಟ್ಟಿ ಶೀಘ್ರ ಪ್ರಕಟ

ಅಭ್ಯರ್ಥಿಗಳ ದಾಖಲೆ ಪರಿಶೀಲನೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ 2022-23ನೇ ಶೈಕ್ಷಣಿಕ ಸಾಲಿನ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹತೆ ಪಡೆದಿರುವ (ಸಿಇಟಿ) ಅಭ್ಯರ್ಥಿಗಳ ದಾಖಲೆಗಳ ಪರಿಶೀಲನಾ ಕಾರ್ಯ ಆರಂಭಿಸಿದೆ.

ವಿದ್ಯಾರ್ಥಿಗಳ ನೋಂದಣಿ ಸಂಖ್ಯೆ ಆಧರಿಸಿ, ಜಾತಿ, ಆದಾಯ ಪ್ರಮಾಣಪತ್ರ, ಹೈದರಾಬಾದ್ ಮೀಸಲಾತಿ ಪ್ರಮಾಣ ಪತ್ರಗಳ ಪರಿಶೀಲನೆ ಆನ್‌ಲೈನ್ ಮೂಲಕ ನಡೆಸಲಾಗುತ್ತಿದೆ. ನೋಂದಣಿ ಸಂಖ್ಯೆಯಲ್ಲಿ ವ್ಯತ್ಯಾಸವಿದ್ದರೆ ಅಂತಹ ಅಭ್ಯರ್ಥಿಗಳ ಪಟ್ಟಿಯನ್ನು ಶೀಘ್ರ ಪ್ರಕಟಿಸಲಾಗುವುದು. ನಂತರ ತಿದ್ದುಪಡಿ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ಮಾಹಿತಿ ನೀಡಿದ್ದಾರೆ.

2,10,829 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಜುಲೈ 31ರಂದು ಫಲಿತಾಂಶ ಪ್ರಕಟವಾಗಿತ್ತು. ಎಂಜಿನಿಯರಿಂಗ್ ಕೋರ್ಸ್‌ಗೆ 1,71,656 ವಿದ್ಯಾರ್ಥಿಗಳು, ಕೃಷಿಗೆ 1,39,968, ಪಶುಸಂಗೋಪನೆಗೆ 1,42,820 ಯೋಗ ಮತ್ತು ನ್ಯಾಚುರೋಪತಿಗೆ 1,42,750 ಹಾಗೂ ಬಿ.ಫಾರ್ಮಾಗೆ 1,74,568 ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದರು. ಆ.5ಕ್ಕೆ ನಿಗದಿಯಾಗಿದ್ದ ದಾಖಲಾತಿ ಪರಿಶೀಲನಾ ಕಾರ್ಯ, ಆ.10ರಿಂದ ಆರಂಭವಾಗಿದೆ.

ಕಾಮೆಡ್–ಕೆ ಕೌನ್ಸೆಲಿಂಗ್ ವೇಳಾಪಟ್ಟಿ

ಕರ್ನಾಟಕದ ವೈದ್ಯಕೀಯ, ಎಂಜಿನಿಯರಿಂಗ್ ಮತ್ತು ದಂತ ಕಾಲೇಜುಗಳ ಒಕ್ಕೂಟ (ಕಾಮೆಡ್–ಕೆ) ಸೀಟುಗಳ ಹಂಚಿಕೆಗಾಗಿ ಆನ್‌ಲೈನ್ ಕೌನ್ಸೆಲಿಂಗ್ ವೇಳಾಪಟ್ಟಿ ಬಿಡುಗಡೆ ಮಾಡಿದೆ.

ಆ.30ರಂದು ಸೀಟ್ ಮ್ಯಾಟ್ರಿಕ್ಸ್ ಪರಿಶೀಲನೆ, ಸೆ.1ರಿಂದ 4ರವರೆಗೆ ಅರ್ಹ ಅಭ್ಯರ್ಥಿಗಳಿಗೆ ನೋಂದಣಿ, ಸೆ.2ರಿಂದ 5ರವರೆಗೆ ಆಯ್ಕೆಗೆ ಅವಕಾಶ ನೀಡಲಾಗಿದೆ. 6 ಮತ್ತು 7ರಂದು ಸೀಟು ಹಂಚಿಕೆ ಪ್ರಕ್ರಿಯೆ, 8ರಂದು ಹಂಚಿಕೆ ಫಲಿತಾಂಶಗಳನ್ನು ಪ್ರಕಟಿಸಲಾಗುವುದು. 9ರಿಂದ 13ರವರೆಗೆ ಪ್ರವೇಶ ಪ್ರಕ್ರಿಯೆ ನಡೆಸಲಾಗುವುದು. ಎರಡನೇ ಸುತ್ತು 17ರಿಂದ ಆರಂಭವಾಗುವ ಸಾಧ್ಯತೆ ಇದೆ ಎಂದು ಪ್ರಕಟಣೆ ತಿಳಿಸಿದೆ.

ಬಿಜೆಪಿ ಚುನಾವಣಾ ವಾರ್ ರೂಂಗೆ ಕಟೀಲ್‌ರಿಂದ ಚಾಲನೆ

‘ಬಿಎಸ್‌ವೈ, ಬೊಮ್ಮಾಯಿ ನೇತೃತ್ವದಲ್ಲಿ ಚುನಾವಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ವಿಧಾನಸಭಾ ಚುನಾವಣೆಯನ್ನು ಬಿ.ಎಸ್.ಯಡಿಯೂರಪ್ಪ ಮಾರ್ಗದರ್ಶನದಲ್ಲಿ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ಎದುರಿಸುತ್ತೇವೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದ್ದಾರೆ.


ವಿಧಾನಸಭೆ ಚುನಾವಣೆಗಾಗಿ ಮಲ್ಲೇಶ್ವರದ ಕೆನರಾ ಯೂನಿಯನ್ ಬಳಿ ಬಿಜೆಪಿ ವಾರ್‌ರೂಂಗೆ ಚಾಲನೆ ನೀಡಿ, ಅವರು ಸುದ್ದಿಗಾರರ ಜತೆ ಮಾತನಾಡಿದರು.

ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಪಕ್ಷದಲ್ಲಿ ಯಾವುದೇ ಹಂತದಲ್ಲೂ ಚರ್ಚೆ ಆಗಿಲ್ಲ. ಅವಧಿಪೂರ್ಣಗೊಳ್ಳುವವರೆಗೆ ಅವರೇ ಮುಖ್ಯಮಂತ್ರಿಯಾಗಿ ಮುಂದುವರೆಯಲಿದ್ದಾರೆ ಎಂದು ನಳಿನ್ ಕುಮಾರ್ ಕಟೀಲ್ ಅವರು ಹೇಳಿದರು.

‘ರಾಜ್ಯದಲ್ಲಿ ಅತಿವೃಷ್ಟಿಯಿಂದ ಹತ್ತಾರು ಜನರ ಸಾವು ಮತ್ತು ಹತ್ತಾರು ಜಿಲ್ಲೆಗಳು ಪ್ರವಾಹದಲ್ಲಿರುವ ಸಂದರ್ಭದಲ್ಲಿ ₹100 ಕೋಟಿ ಖರ್ಚು ಮಾಡಿ ಸಿದ್ದರಾಮೋತ್ಸವ ಮಾಡಿರುವುದು ಜನರ ಅಸಮಾಧಾನಕ್ಕೆ ಕಾರಣವಾಗಿದೆ. ತಮ್ಮ ತಪ್ಪನ್ನು ಮುಚ್ಚಿಕೊಳ್ಳಲು ಕಾಂಗ್ರೆಸ್ ಪಕ್ಷ ಮುಖ್ಯಮಂತ್ರಿ ಬದಲಾವಣೆ ಕುರಿತು ಟ್ವೀಟ್ ಮಾಡಿ ಗೊಂದಲ ಮೂಡಿಸುತ್ತಿದೆ’ ಎಂದು ಆಕ್ಷೇಪ ವ್ಯಕ್ತಪಡಿಸಿದರು.

‘ಬಿಜೆಪಿ ಮುಂದಿನ ಚುನಾವಣೆ ದೃಷ್ಟಿಯಿಂದ ಪೇಜ್ ಕಮಿಟಿಯಿಂದ ಆರಂಭಿಸಿ ಬೂತ್ ಸಶಕ್ತೀಕರಣ ಕಾರ್ಯವನ್ನು ಪೂರ್ಣಗೊಳಿಸಿದ್ದೇವೆ. ಚುನಾವಣೆಗೆ ಕಾರ್ಯಕರ್ತರನ್ನು ಸೈನಿಕರ ರೀತಿಯಲ್ಲಿ ಸಿದ್ಧತೆ ನಡೆಸಿದ್ದೇವೆ. ಮತಗಟ್ಟೆಯಲ್ಲೂ ವಾರ್ ರೂಂಗಳು ಆರಂಭಗೊಂಡಿವೆ. ಇಲ್ಲಿನ ವಾರ್ ರೂಂ ಮೂಲಕ ಜಿಲ್ಲೆ, ಜಿಲ್ಲೆಯಿಂದ ಮಂಡಲ, ಮಂಡಲದಿಂದ ಮತಗಟ್ಟೆವರೆಗೆ, ಮತಗಟ್ಟೆಯಿಂದ ಕಾರ್ಯಕರ್ತ, ಅಲ್ಲಿಂದ ಮತದಾರರನ್ನು ಸಂಪರ್ಕಿಸುವ ಕಾರ್ಯ ಯೋಜನೆ ಅನುಷ್ಠಾನಕ್ಕೆ ತರಲಾಗುತ್ತಿದೆ’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯರಾದ ಎನ್.ರವಿಕುಮಾರ್, ಕೆ.ಎಸ್. ನವೀನ್, ರಾಜ್ಯ ಕಾರ್ಯಾಲಯ ಕಾರ್ಯದರ್ಶಿ ಲೋಕೇಶ್ ಅಂಬೆಕಲ್ಲು ಅವರು ಭಾಗವಹಿಸಿದ್ದರು.



ಬಿಜೆಪಿ ಚುನಾವಣಾ ವಾರ್ ರೂಂ ಅನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಉದ್ಘಾಟಿಸಿದರು. ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನಾ, ರಾಜ್ಯಸಭಾ ಸದಸ್ಯ ಜಗ್ಗೇಶ್ ಇದ್ದರು.



ಗೌರವ್ ಗುಪ್ತ ಕೆ–ರೈಡ್ ವ್ಯವಸ್ಥಾಪಕ ನಿರ್ದೇಶಕ



ಬೆಂಗಳೂರು: ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಅವರಿಗೆ ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಗಮದ(ಕೆ-ರೈಡ್) ವ್ಯವಸ್ಥಾಪಕ ನಿರ್ದೇಶಕ ಹುದ್ದೆಯ ಹೆಚ್ಚುವರಿ ಜವಾಬ್ದಾರಿಯನ್ನು ಸರ್ಕಾರ ನೀಡಿದೆ.

ಉಪನಗರ ರೈಲು ಯೋಜನೆ ಅನುಷ್ಠಾನಗೊಳಿಸುತ್ತಿರುವ ಕೆ-ರೈಡ್ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಅಮಿತ್ ಗರ್ಗ್ ಅವಧಿ ಇತ್ತೀಚೆಗೆ ಪೂರ್ಣಗೊಂಡಿತ್ತು. ‘2025ರ ಅಕ್ಟೋಬರ್ ವೇಳೆಗೆ ಉಪನಗರ ರೈಲು ಯೋಜನೆ ಕಾಮಗಾರಿ ಪೂರ್ಣಗೊಳ್ಳಬೇಕಿದೆ. ಸಿವಿಲ್ ಕಾಮಗಾರಿ ಯಾವುದೇ ಮಾರ್ಗದಲ್ಲೂ ಇನ್ನೂ ಆರಂಭವಾಗಿಲ್ಲ. ಆದ್ದರಿಂದ ಗೌರವ್ ಗುಪ್ತ ಅವರ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಬೆಂಗಳೂರಿನ ಜನ ಆದಷ್ಟು ಬೇಗ ಉಪನಗರ ರೈಲುಗಳಲ್ಲಿ ಸಂಚರಿಸುವಂತೆ ಅವರು ಮಾಡಲಿ’ ಎಂದು ರೈಲ್ವೆ ಹೋರಾಟಗಾರರು ಆಶಿಸಿದ್ದಾರೆ.

ಪೆಟ್ರೋಲ್‌ನಲ್ಲಿ ಶೇ 20ರಷ್ಟು ಎಥೆನಾಲ್

ಪಾಣಿಪತ್ (ಹರಿಯಾಣ) (ಪಿಟಿಐ): ಪೆಟ್ರೋಲ್‌ನಲ್ಲಿ ಶೇಕಡ 20ರಷ್ಟು ಎಥೆನಾಲ್ ಬೆರೆಸಿ ಮುಂದಿನ ವರ್ಷದ ಏಪ್ರಿಲ್‌ನಿಂದ ಆಯ್ದ ಪೆಟ್ರೋಲ್ ಬಂಕ್‌ಗಳಲ್ಲಿ ಮಾರಾಟ ಮಾಡಲಾಗುತ್ತದೆ ಎಂದು ಕೇಂದ್ರ ತೈಲ ಸಚಿವ ಹರದೀಪ್ ಪುರಿ ಹೇಳಿದ್ದಾರೆ.

ದೇಶದಲ್ಲಿ ಈಗ ಪೆಟ್ರೋಲ್‌ಗೆ ಶೇಕಡ 10ರಷ್ಟು ಎಥೆನಾಲ್ ಬೆರೆಸಲಾಗುತ್ತಿದೆ. ಶೇ 20ರಷ್ಟು ಎಥೆನಾಲ್ ಮಿಶ್ರಣವಿರುವ ಪೆಟ್ರೋಲ್ ಪೂರೈಕೆಯನ್ನು 2025ರೊಳಗೆ ಮಾಡುವ ಗುರಿ ಹೊಂದಲಾಗಿದೆ.

ಸುದ್ದಿ 2 ನಿಮಿಷ

ಅನಧಿಕೃತ ಕಟ್ಟಡ: ಸರ್ಕಾರಕ್ಕೆ ನೋಟಿಸ್ ಜಾರಿಗೆ ಆದೇಶ

ಬೆಂಗಳೂರು: ‘ನಗರದಲ್ಲಿ ಅನಧಿಕೃತ ಕಟ್ಟಡಗಳ ನಿರ್ಮಾಣ ತಡೆಯಲು ವಿಫಲರಾಗುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲು ಬಿಬಿಎಂಪಿ ಕಾಯ್ದೆ-2020ರ ಕಲಂ 252ರ ಅಡಿಯಲ್ಲಿ ಶಿಕ್ಷೆ ಪ್ರಮಾಣ ನಿಗದಿಪಡಿಸಲು ನಿರ್ದೇಶಿಸಬೇಕು’ ಎಂದು ಕೋರಿರುವ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ವಕೀಲ ಎಸ್. ಉಮಾಪತಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ, ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆ ಮುಂದೂಡಿದೆ.

ಮನವಿ ಏನು?: ‘ಬೆಂಗಳೂರು ನಗರದಲ್ಲಿ ಕಟ್ಟಡ ಬೈ-ಲಾಗಳನ್ನು ಉಲ್ಲಂಘಿಸಿ ಚರಂಡಿ, ಕೆರೆ, ಪಾದಚಾರಿ ಮಾರ್ಗಗಳನ್ನು ಒತ್ತುವರಿ ಮಾಡಲಾಗುತ್ತಿದೆ. ಈ ನಿಟ್ಟಿನಲ್ಲಿ ಅನಧಿಕೃತ ಕಟ್ಟಡಗಳ ನಿರ್ಮಾಣಕ್ಕೆ ಕಾರಣರಾಗುವ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸುವ ನಿಟ್ಟಿನಲ್ಲಿ ಶಿಕ್ಷೆಯ ಪ್ರಮಾಣ ನಿಗದಿಪಡಿಸಲು ರಾಜ್ಯ ಸರ್ಕಾರ ಹಾಗೂ ಬಿಬಿಎಂಪಿಗೆ ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ.

ಹುಂಡೈ ಟಕ್ಸನ್ ಬುಕಿಂಗ್ ಆರಂಭ



ಬೆಂಗಳೂರಿನ ಅದ್ವೈತ ಹುಂಡೈ ಷೋರೂಂನಲ್ಲಿ ಹುಂಡೈ ಟಕ್ಸನ್ ಬಿಡುಗಡೆ ಮಾಡಲಾಯಿತು. ಚಿತ್ರ ನಟಿ ನೇಹಾ ಸಕ್ಸೇನಾ, ಅದ್ವೈತ ಮ್ಯಾನೇಜ್‌ಮೆಂಟ್‌ನ ಸಂಜೀತ್ ಮತ್ತು ಅದ್ವೈತ ಹುಂಡೈನ ಮಾರಾಟ ಮತ್ತು ಮಾರುಕಟ್ಟೆ ವಿಭಾಗದ ನಿರ್ದೇಶಕ ಎಲ್‌.ಎನ್‌. ಅಜಯ್ ಸಿಂಗ್ ಇದ್ದರು.

ಬೆಂಗಳೂರು: ಹುಂಡೈ ಮೋಟರ್ ಇಂಡಿಯಾ ಕಂಪನಿಯು ಹೊಸ ಟಕ್ಸನ್ ಎಸ್‌ಯುವಿಯ ಬುಕಿಂಗ್ ಆರಂಭಿಸಿದೆ. ₹ 25 ಸಾವಿರ ಪಾವತಿಸಿ ಬುಕಿಂಗ್ ಮಾಡಬಹುದು ಎಂದು ಕಂಪನಿ ಹೇಳಿದೆ.

125 ನಗರಗಳಲ್ಲಿ ಇರುವ 246 ಮಳಿಗೆಗಳ ಮೂಲಕ ಟಕ್ಸನ್ ವಾಹನ ಕಾಯ್ದಿರಿಸಬಹುದು. ಪ್ಲಾಟಿನಂ, ಸಿಗ್ನೆಚರ್ ಎಂಬ ಎರಡು ಆವೃತ್ತಿಗಳಲ್ಲಿ ಇದು ಲಭ್ಯವಿದೆ. ಪ್ಲಾಟಿನಂ ಆವೃತ್ತಿಯಲ್ಲಿ ಗ್ರಾಹಕರಿಗೆ 45ಕ್ಕೂ ಹೆಚ್ಚಿನ ಸ್ಟ್ಯಾಂಡರ್ಡ್ ಸುರಕ್ಷತಾ ವೈಶಿಷ್ಟ್ಯಗಳು ಇರಲಿವೆ. ಸಿಗ್ನೆಚರ್ ಆವೃತ್ತಿಯಲ್ಲಿ 60ಕ್ಕೂ ಅಧಿಕ ಸುರಕ್ಷತಾ ವೈಶಿಷ್ಟ್ಯಗಳು ಇವೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

‘ವಾರ್ಡ್ ಮೀಸಲು: 16ರವರೆಗೆ ಅಖೈರು ಬೇಡ’

ಬೆಂಗಳೂರು: ‘ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವಾರ್ಡ್‌ಗಳ ಪುನರ್ ರಚನೆಗೆ ಸಂಬಂಧಿಸಿದ ವಾರ್ಡ್‌ವಾರು ಮೀಸಲು ಪಟ್ಟಿಯನ್ನು ಇದೇ 16ರ ತನಕ ಅಂತಿಮಗೊಳಿಸಬಾರದು’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಕುರಿತಂತೆ ಸಲ್ಲಿಸಲಾಗಿರುವ ಎಂಟಕ್ಕೂ ಹೆಚ್ಚು ಅರ್ಜಿಗಳು ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ ಬುಧವಾರ ವಿಚಾರಣೆಗೆ ನಿಗದಿಯಾಗಿದ್ದವು. ಅರ್ಜಿದಾರರ ಪರ ವಾದ ಆಲಿಸಿದ ನ್ಯಾಯಪೀಠ, ಯಾವುದೇ ಮಧ್ಯಂತರ ಆದೇಶ ನೀಡಲು ನಿರಾಕರಿಸಿ, ಪ್ರತಿವಾದಿಗಳಾದ ರಾಜ್ಯ ಸರ್ಕಾರ, ರಾಜ್ಯ ಚುನಾವಣಾ ಆಯೋಗ ಮತ್ತು ಬಿಬಿಎಂಪಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

ಪ್ರತಿವಾದಿಗಳಿಗೆ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿದ ನ್ಯಾಯಪೀಠವು ವಿಚಾರಣೆಯನ್ನು ಇದೇ 16ಕ್ಕೆ ಮುಂದೂಡಿದೆ. ಅಲ್ಲಿಯವರೆಗೂ ವಾರ್ಡ್‌ವಾರು ಮೀಸಲು ಪಟ್ಟಿ ಅಂತಿಮಗೊಳಿಸಬಾರದು ಎಂದು ಸರ್ಕಾರಕ್ಕೆ ಮೌಖಿಕ ನಿರ್ದೇಶನ ನೀಡಿದೆ.

ಮನವಿ ಏನು?: ‘ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ಬಿಬಿಎಂಪಿ ವಾರ್ಡ್‌ಗಳನ್ನು ಪುನರ್ ರಚಿಸಿ 2022ರ ಜುಲೈ 14ರಂದು ಸರ್ಕಾರ ಹೊರಡಿಸಿರುವ ಅಧಿಸೂಚನೆ ರದ್ದುಪಡಿಸಬೇಕು. ವಾರ್ಡ್‌ಗಳನ್ನು ಹೊಸದಾಗಿ ರಚಿಸಲು ನಿರ್ದೇಶಿಸಬೇಕು. ಕೆ.ಆರ್. ಮಾರ್ಕೆಟ್ ವಾರ್ಡ್ ಮರುರಚನೆ ಮಾಡಬೇಕು. ಈ ಅರ್ಜಿ ಇತ್ಯರ್ಥಗೊಳ್ಳುವತನಕ ಬಿಬಿಎಂಪಿ ಚುನಾವಣೆಗೆ ಅಧಿಸೂಚನೆ ಹೊರಡಿಸದಂತೆ ಚುನಾವಣಾ ಆಯೋಗಕ್ಕೆ ನಿರ್ದೇಶಿಸಬೇಕು’ ಎಂಬುದು ಅರ್ಜಿದಾರರು ಕೋರಿಕೆ.

ಚಿತ್ರಾವಳಿ



‘ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಾಯಕತ್ವ ಪ್ರಶಸ್ತಿ’ಯನ್ನು ಪ್ರಿನ್ಸ್ ಜುವೆಲರಿ ಕಂಪನಿಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಪ್ರಿನ್ಸ್‌ಸನ್ ಜೋಸ್ ಅವರಿಗೆ ಫ್ಯುಯೆಲ್ ಸಂಸ್ಥೆಯ ಸಿಇಒ ಕೇತಾನ್ ದೇಶಪಾಂಡೆ ಅವರು ನವದೆಹಲಿಯಲ್ಲಿ ಈಚೆಗೆ ನಡೆದ ‘ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಶೃಂಗ ಮತ್ತು ಪ್ರಶಸ್ತಿ – 2022’ ಕಾರ್ಯಕ್ರಮದಲ್ಲಿ ಪ್ರದಾನ ಮಾಡಿದರು.



ಮುಂಬೈನಲ್ಲಿ ಈಚೆಗೆ ನಡೆದ ರಿಟೇಲ್ ಜುವೆಲರ್ ಇಂಡಿಯಾ ಅವಾರ್ಡ್ಸ್ ಕಾರ್ಯಕ್ರಮದಲ್ಲಿ ಜೋಯಾಲುಕ್ಕಾಸ್ ಕಂಪನಿಯ ಎಂ.ಡಿ. ಆಲುಕ್ಕಾಸ್ ವರ್ಗೀಸ್ ಜಾಯ್ (ಮಧ್ಯದಲ್ಲಿರುವವರು) ಪ್ರಶಸ್ತಿ ಸ್ವೀಕರಿಸಿದರು. ಜೋಯಾಲುಕ್ಕಾಸ್ ಕಂಪನಿಗೆ ವರ್ಷದ ಅತ್ಯುತ್ತಮ ವಿವಾಹ ವಜ್ರಾಭರಣ ಹಾಗೂ ಅತ್ಯುತ್ತಮ ಟಿ.ವಿ. ಅಭಿಯಾನ ಪ್ರಶಸ್ತಿ ದೊರೆತಿದೆ. ಇತ್ರಾ, ದುಬೈ ಕಂಪನಿಯ ಮಾರ್ಕ್ ಕರ್ಟಿಸ್ ಹಾಗೂ ರಿಟೇಲ್ ಜುವೆಲರ್ ಇಂಡಿಯಾ ಮ್ಯಾಗಜೀನ್‌ನ ಸಂಪಾದಕಿ ಸೋಮಾ ಭಟ್ಟ ಚಿತ್ರದಲ್ಲಿದ್ದಾರೆ.

3M INDIA LIMITED

CIN: L31300KA1987PLC013543, Regd Office: 48-51, Electronics City, Hosur Road, Bengaluru - 560100 Website: www.3m.com/in

Extract of the Standalone and Consolidated Financial Results for the quarter ended 30 June 2022

(Rs. in Lakhs, except per share data, unless otherwise stated)

Particulars	Standalone			Consolidated		
	3 months ended 30 June 2022 (Unaudited)	3 months ended 30 June 2021 (Unaudited)	12 months ended 31 March 2022 (Audited)	3 months ended 30 June 2022 (Unaudited)	3 months ended 30 June 2021 (Unaudited)	12 months ended 31 March 2022 (Audited)
Total income from operations (including other income)	90,073.92	69,661.46	3,11,301.92	95,505.16	75,186.32	3,37,295.68
Net Profit for the period (before tax, Exceptional and / or Extraordinary items)	10,772.29	3,763.54	35,969.60	11,310.00	4,051.09	36,751.81
Net Profit for the period before tax (after Exceptional and / or Extraordinary items)	10,772.29	3,763.54	35,969.60	11,310.00	4,051.09	36,751.81
Net Profit for the period after tax	8,024.55	2,796.10	26,617.51	8,425.93	3,009.59	27,197.11
Total comprehensive income for the period [Comprising Profit / (Loss) for the period (after tax) and other comprehensive income (after tax)]	8,052.02	2,732.25	26,727.38	8,457.75	2,936.59	27,324.37
Equity share capital	1,126.51	1,126.51	1,126.51	1,126.51	1,126.51	1,126.51
Reserves (excluding revaluation reserves as per Ind AS)	-	-	2,47,751.61	-	-	2,17,230.77
Earnings per share (in Rs.) (of Rs. 10/- each)						
a) Basic (in Rs.)	71.23	24.82	236.28	74.80	26.72	241.43
b) Diluted (in Rs.)	71.23	24.82	236.28	74.80	26.72	241.43

Notes:

1. The above standalone and consolidated financial results of 3M India Limited and its subsidiary, 3M Electro & Communication India Private Limited (hereafter refer to as the 'Group') have been reviewed by the Audit Committee and approved by the Board of Directors on 10 August 2022.
2. The above is an extract of the detailed format for the unaudited financial results for the quarter ended 30 June 2022 filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The full format for the unaudited financial results for the quarter ended 30 June 2022 are available on the BSE Limited website (www.bseindia.com), the National Stock Exchange of India Limited website (www.nseindia.com) and on the Company's website https://www.3mindia.in/3M/en_IN/company-in/about-3m/financial-facts-local/).
3. The financial results of the Company have been prepared in accordance with Indian Accounting Standards (Ind AS) as notified by the Ministry of Corporate Affairs pursuant to Section 133 of the Companies Act, 2013 read with Rule 3 of the Companies (Indian Accounting Standard) Rules 2015, as amended and in terms of Regulation 33 of the SEBI (Listing Obligations and Disclosure Requirements) Rules, 2015.

By Order of the Board
For 3M India Limited

Ramesh Ramadurai
Managing Director

Place: Bengaluru
Date: 10 August 2022

ಹೈಟೆನ್ಶನ್ ತಂತಿ ವರ್ಷಾಂತ್ಯಕ್ಕೆ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಾದ್ಯಂತ ವಿದ್ಯಾರ್ಥಿ ನಿಲಯಗಳ ಮೇಲೆ ಹಾದು ಹೋಗಿರುವ 7,478 ಹೈಟೆನ್ಷನ್ ತಂತಿಗಳ ಪೈಕಿ 6,589 ಲೇನ್‌ಗಳನ್ನು ತೆರವುಗೊಳಿಸಲಾಗಿದೆ' ಎಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ (ಕೆಪಿಟಿಸಿಎಲ್) ಹೈಕೋರ್ಟ್‌ಗೆ ತಿಳಿಸಿದೆ.

ಈ ಕುರಿತಂತೆ ಹೈಕೋರ್ಟ್ ದಾಖಲಿಸಿಕೊಂಡಿರುವ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯ ಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕೆಪಿಟಿಸಿಎಲ್ ಪರ ವಕೀಲ ಎಸ್. ಶ್ರೀರಂಗ ಅವರು, 'ಬಾಕಿ ಇರುವ 889 ಲೇನ್‌ಗಳನ್ನು ಈ ವರ್ಷದ ಡಿಸೆಂಬರ್ 31ರೊಳಗೆ ತೆರವುಗೊಳಿಸಲಾಗುವುದು' ಎಂದು ತಿಳಿಸಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠವು, 'ಸುರಕ್ಷಾ ಕ್ರಮದ ಶಿಫಾರಸುಗಳನ್ನು ಸಲ್ಲಿಸಲು 2021ರ ಸೆಪ್ಟೆಂಬರ್ 6ರಂದು ಹೈಕೋರ್ಟ್ ನೀಡಿರುವ ಆದೇಶದ ಬಗ್ಗೆ ಅನುಪಾಲನಾ ವರದಿ ಸಲ್ಲಿಸಿ' ಎಂದು ನಿರ್ದೇಶಿಸಿ ವಿಚಾರಣೆಯನ್ನು ಮುಂದೂಡಿತು.

ಕೊಪ್ಪಳದ ಬನ್ನಿಕಟ್ಟಿ ಬಳಿಯ ಬಿಸಿಎಂ ವಿದ್ಯಾರ್ಥಿ ನಿಲಯದಲ್ಲಿ 2019ರ ಆಗಸ್ಟ್ 15ರಂದು ಧ್ವಜಸ್ತಂಭ ತೆರವುಗೊಳಿಸುವ ವೇಳೆ ವಿದ್ಯುತ್ ತಂತಿ ತಗುಲಿ ಐವರು ವಿದ್ಯಾರ್ಥಿಗಳು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲಿಸಿಕೊಳ್ಳಲಾದ ಅರ್ಜಿ ಇದಾಗಿದೆ.

ಯುವಿಸಿಇ ಆಡಳಿತ ಮಂಡಳಿಗೆ ಮುತ್ತುರಾಮನ್ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದ (ಯುವಿಸಿಇ) ಆಡಳಿತ ಮಂಡಳಿಯ ಮೊದಲ ಅಧ್ಯಕ್ಷರಾಗಿ ಟಾಟಾ ಸ್ಟೀಲ್ಸ್ ಮಾಜಿ ಅಧ್ಯಕ್ಷ ಮುತ್ತುರಾಮನ್ ಅವರನ್ನು ನೇಮಿಸಲಾಗಿದೆ.

ರಾಜ್ಯ ಸರ್ಕಾರದ ಶಿಫಾರಸು ಆಧಾರದ ಮೇಲೆ ರಾಜ್ಯಪಾಲರು ಬುಧವಾರ ಈ ಬಗ್ಗೆ ಅಧಿಸೂಚನೆ ಹೊರಡಿಸಿದ್ದಾರೆ. ಮುತ್ತುರಾಮನ್ ಅವರ ಕಾರ್ಯಾವಧಿಯು ನೇಮಕಾತಿಯ ದಿನದಿಂದ ಮುಂದಿನ ನಾಲ್ಕು ವರ್ಷಗಳ ಅವಧಿಯಾಗಿರುತ್ತದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

78 ವರ್ಷದ ಮುತ್ತುರಾಮನ್ ಅವರು ಟಾಟಾ ಇಂಟರ್‌ನ್ಯಾಷನಲ್ ಸಂಸ್ಥೆಯ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಐಐಟಿ ಮದ್ರಾಸ್‌ನ ಹಳೆಯ ವಿದ್ಯಾರ್ಥಿಯಾಗಿರುವ



ಮುತ್ತುರಾಮನ್ ಅವರನ್ನು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಅಭಿನಂದಿಸಿದರು

ಮುತ್ತುರಾಮನ್ ಅವರಿಗೆ 2012ರಲ್ಲಿ ಪದ್ಮಭೂಷಣ ಪ್ರಶಸ್ತಿ ಪ್ರದಾನ ಮಾಡಲಾಗಿದೆ.

ಸರ್‌ಎಂ.ವಿಶ್ವೇಶ್ವರಯ್ಯ ಅವರು 1917ರಲ್ಲಿ ಆರಂಭಿಸಿದ ಈ ಕಾಲೇಜು ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿತ್ತು. ಐಐಟಿ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಉದ್ದೇಶದಿಂದ ಈ ಕಾಲೇಜಿಗೆ ಸ್ವಾಯತ್ತತೆ ನೀಡಲಾಯಿತು. ಹೀಗಾಗಿ, ಉನ್ನತ ಶಿಕ್ಷಣ ಇಲಾಖೆ ಆಡಳಿತ ಮಂಡಳಿಯನ್ನು ರಚಿಸಿದೆ.

'ಸರ್ಕಾರವು ಯುವಿಸಿಇ ಯನ್ನು ಉತ್ಕೃಷ್ಟ ಸಂಸ್ಥೆಯನ್ನಾಗಿ ಬೆಳೆಸಲು ತೀರ್ಮಾನಿಸಿದ್ದು, ಮುತ್ತುರಾಮನ್ ಅವರ ಅನುಭವವು ನೆರವಿಗೆ ಬರಲಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದ್ದಾರೆ.

'ಯುವಿಸಿಇಗೆ ಸಂಪೂರ್ಣ ಸ್ವಾಯತ್ತತೆ ನೀಡುವ ಸರ್ಕಾರದ ಪ್ರಕ್ರಿಯೆಯ ಮೊದಲ ಭಾಗವಾಗಿ ಈ ನೇಮಕ ಮಾಡಲಾಗಿದೆ. ರಾಜ್ಯ ಮಟ್ಟದಲ್ಲಿ ಈ ರೀತಿಯ ಕ್ರಾಂತಿಕಾರಕ ತೀರ್ಮಾನ ಆಗಿರುವುದು ಇದೇ ಮೊದಲು. ಮುಂದಿನ ದಿನಗಳಲ್ಲಿ ಅಧ್ಯಕ್ಷರ ನೇಮಕದ ವಿಷಯದಲ್ಲಿ ಸರ್ಕಾರದ ಪಾತ್ರ ಹೆಚ್ಚಾಗಿ ಇರುವುದಿಲ್ಲ. ಹಾಲಿ ಇರುವ ಅಧ್ಯಕ್ಷರೇ ಅವರ ಉತ್ತರಾಧಿಕಾರಿಯನ್ನು ನೇಮಕ ಮಾಡಲಿದ್ದಾರೆ. ಇದು ಐಐಎಂ, ಐಐಟಿ ಮಾದರಿಯಲ್ಲಿ ಇರುತ್ತದೆ' ಎಂದಿದ್ದಾರೆ.

ಬ್ಯಾಕ್‌ಲಾಗ್ 60 ಹುದ್ದೆಗಳಿಗೆ ಮುಂಬಡ್ತಿ: ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಿರಿಯ ತರಬೇತಿ ಅಧಿಕಾರಿ ವೃಂದದಿಂದ ತರಬೇತಿ ಅಧಿಕಾರಿ ವೃಂದಕ್ಕೆ ಪರಿಶಿಷ್ಟ ಜಾತಿಯ (ಎಸ್‌ಸಿ) 48 ಮತ್ತು ಪರಿಶಿಷ್ಟ ವರ್ಗದ (ಎಸ್‌ಟಿ) 12 ಬ್ಯಾಕ್‌ಲಾಗ್ ಹುದ್ದೆಯಲ್ಲಿರುವವರಿಗೆ ಮುಂಬಡ್ತಿ ನೀಡುವಂತೆ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ಆಯುಕ್ತರಿಗೆ ಸೂಚಿಸಬೇಕು' ಎಂದು ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘ ಮನವಿ ಸಲ್ಲಿಸಿದೆ.

'ಈಗಾಗಲೇ ಗುರುತಿಸಿರುವ ಬ್ಯಾಕ್‌ಲಾಗ್ ಹುದ್ದೆಗಳಲ್ಲಿರುವವರಿಗೆ ಮುಂಬಡ್ತಿ ನೀಡುವಂತೆ ಸಮಾಜ ಕಲ್ಯಾಣ ಇಲಾಖೆ ಆಯುಕ್ತರು ಆಗಸ್ಟ್ 1ರಂದೇ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ಆಯುಕ್ತರಿಗೆ ಪತ್ರ ಬರೆದು ಸೂಚಿಸಿದರೂ ಯಾವುದೇ ಕ್ರಮ ಆಗಿಲ್ಲ' ಎಂದು ಪತ್ರದಲ್ಲಿ ಸಂಘದ ಅಧ್ಯಕ್ಷ ಡಿ. ಚಂದ್ರಶೇಖರಯ್ಯ ಅವರು ಉಲ್ಲೇಖಿಸಿದ್ದಾರೆ.

'ಎಸ್‌ಸಿ, ಎಸ್‌ಟಿ ನೌಕರರಿಗೆ ಮುಂಬಡ್ತಿಯಲ್ಲಿ ಮೀಸಲಾತಿ ಹಾಗೂ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಅನ್ಯಾಯ ಮಾಡಿದರೆ ಆರ್ಥಿಕ ಮತ್ತು ಸಾಮಾಜಿಕ ನಷ್ಟ ಉಂಟು ಮಾಡಿದಂತಾಗುತ್ತದೆ. ಈ ಪ್ರಕರಣವು ದೌರ್ಜನ್ಯ ತಡೆ ಕಾಯ್ದೆಯ ವ್ಯಾಪ್ತಿಗೆ ಬರುತ್ತದೆ. ಹೀಗಾಗಿ ಮುಂಬಡ್ತಿ ನೀಡುವಾಗ 1978ರ ಆದೇಶದಂತೆ ಹಾಗೂ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವಾಗ 2015 ಮಾರ್ಚ್ 3ರ ಆದೇಶದಂತೆ ಮೀಸಲಾತಿ ಮತ್ತು ರೋಸ್ಟರ್ ಪಾಲನೆ ಕಡ್ಡಾಯವಾಗಿದೆ. ಹೀಗಾಗಿ, ಮೀಸಲಾತಿ ಮತ್ತು ರೋಸ್ಟರ್ ಪಾಲಿಸಿ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ಆಯುಕ್ತರಿಗೆ ಸೂಚಿಸಬೇಕು' ಎಂದೂ ಅವರು ಮನವಿ ಮಾಡಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ಆಯುಕ್ತರಾದ ಕೆ. ಜ್ಯೋತಿ, 'ತರಬೇತಿ ಅಧಿಕಾರಿ ವೃಂದದಲ್ಲಿ ಸಾಕಷ್ಟು ಹುದ್ದೆಗಳು ಖಾಲಿ ಇವೆ. ಶೀಘ್ರದಲ್ಲಿ ಮುಂಬಡ್ತಿ ನೀಡಲು ಇಲಾಖಾ ಪದೋನ್ನತಿ ಸಭೆ ನಡೆಸಲಾಗುವುದು. ಬ್ಯಾಕ್ ಲಾಗ್ ಹುದ್ದೆಯಲ್ಲಿರುವವರಿಗೆ ಅನ್ಯಾಯ ಆಗದಂತೆ ಹಾಗೂ ಎಲ್ಲ ನಿಯಮಗಳನ್ನು ಪಾಲಿಸಿ ಮುಂಬಡ್ತಿ ನೀಡಲಾಗುವುದು' ಎಂದರು.

'ವೀಸಾ ಅವಧಿ ಮುಗಿದರೂ ನೆಲೆಸಿದ ವಿದೇಶಿಗರ ಗಡಿಪಾರು'

ಬೆಂಗಳೂರು: 'ವೀಸಾ ಅವಧಿ ಮುಗಿದರೂ ದೇಶದಲ್ಲಿಯೇ ಉಳಿದುಕೊಳ್ಳುತ್ತಿರುವ ವಿದೇಶಿ ವಲಸಿಗರು, ದೇಶ ವಿರೋಧಿ ಕೃತ್ಯಗಳಲ್ಲಿ ತೊಡಗಿಸಿಕೊಳ್ಳುವ ಅಪಾಯ ಇದೆ. ಹೀಗಾಗಿ, ಅವರನ್ನು ಗಡಿಪಾರು ಮಾಡಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕು' ಎಂದು ಇಲಾಖೆಯ ಅಧಿಕಾರಿಗಳಿಗೆ ಗೃಹ ಸಚಿವ ಆರಗ ಜ್ಞಾನೇಂದ್ರ ಸೂಚಿಸಿದರು.

ಅಕ್ರಮ ವಿದೇಶಿ ವಲಸಿಗರನ್ನು ಹಿಡಿದಿಡುವ ದಿಗ್ಬಂಧನ ಕೇಂದ್ರದ ಸಾಮರ್ಥ್ಯವನ್ನು ಇಮ್ಮಡಿಗೊಳಿಸುವ ಕುರಿತು ಚರ್ಚಿಸಲು ಬುಧವಾರ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಅವರು ಈ ಸೂಚನೆ ನೀಡಿದರು. ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಕೂಡಾ ಸಭೆಯಲ್ಲಿದ್ದರು.

ಅಕ್ರಮ ವಿದೇಶಿ ವಲಸಿಗರಿಗೆ ತಾತ್ಕಾಲಿಕ ವಸತಿ ಕಲ್ಪಿಸುವ 'ದಿಗ್ಬಂಧನ ಕೇಂದ್ರ'ದ ವಾಸವನ್ನು ವಿಸ್ತರಿಸಿ ಸಾಮರ್ಥ್ಯ ಹೆಚ್ಚಿಸುವ ಕುರಿತು ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಸಭೆಯಲ್ಲಿ ಪ್ರಸ್ತಾಪಿಸಿದರು. 'ಅಕ್ರಮ ಬಾಂಗ್ಲಾದೇಶಿ ನಾಗರಿಕರೂ ಸೇರಿದಂತೆ ಇತರ ದೇಶಗಳ ವಲಸಿಗರನ್ನು, ಕಾನೂನಿನಂತೆ ಬಂಧಿಸಿ, ಯಾವುದೇ ಕಾರಾಗೃಹಗಳಲ್ಲಿ ಇಡದೆ, ಅವರಿಗೆಂದೇ ಇರುವ ದಿಗ್ಬಂಧನ ಕೇಂದ್ರದಲ್ಲಿ ವಸತಿ ಕಲ್ಪಿಸಬೇಕಿದೆ. ಆದರೆ, ನೆಲಮಂಗಲದಲ್ಲಿ ಮಾತ್ರ ದಿಗ್ಬಂಧನ ಕೇಂದ್ರ ಕಾರ್ಯಾಚರಿಸುತ್ತಿದ್ದು, ಅಲ್ಲಿ ಸ್ಥಳಾವಕಾಶದ ಕೊರತೆ ಇದೆ' ಎಂದು ಹೇಳಿದರು.

'ದಿಗ್ಬಂಧನ ಕೇಂದ್ರದ ಸಾಮರ್ಥ್ಯ ವಿಸ್ತರಣೆಗೆ ಸಮಾಜ ಕಲ್ಯಾಣ ಇಲಾಖೆ ಅನುದಾನ ಒದಗಿಸಬೇಕು. ಅನುದಾನ ಬಿಡುಗಡೆ ವಿಳಂಬ ಆಗದಂತೆ ಕ್ರಮ ಕೈಗೊಳ್ಳಬೇಕು' ಎಂದು ಸಚಿವ ಕೋಟ ಅವರ ಬಳಿ ಗೃಹ ಸಚಿವರು ವಿನಂತಿಸಿದರು. ಈ ಪ್ರಸ್ತಾವನೆಯನ್ನು ಆದ್ಯತೆಯಲ್ಲಿ ಪರಿಗಣಿಸಲಾಗುವುದು ಎಂದು ಕೋಟ ಭರವಸೆ ನೀಡಿದರು.

ಬೆಂಗಳೂರು ನಗರ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಇದ್ದರು.





ದೇಶದ ಆರು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಖಾಲಿ ಇರುವ ಪ್ರೊಬೆಷನರಿ ಆಫೀಸರ್ಸ್/ ಮ್ಯಾನೇಜ್‌ಮೆಂಟ್ ಟ್ರೈನಿ ಹುದ್ದೆಗಳ ಭರ್ತಿಗಾಗಿ ಐಬಿಪಿಎಸ್ ಸಂಸ್ಥೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸುತ್ತಿದೆ. ಪರೀಕ್ಷೆಯ ವಿವರ ಇಲ್ಲಿದೆ.



ಬ್ಯಾಂಕ್ ಉದ್ಯೋಗ ಪರೀಕ್ಷೆಗೆ ತಯಾರಾಗಿ

ಆರ್. ಕೆ. ಬಾಲಚಂದ್ರ

ದೇಶದಾದ್ಯಂತ ಆರು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಖಾಲಿ ಇರುವ 6,432 ಪ್ರೊಬೆಷನರಿ ಆಫೀಸರ್ಸ್/ ಮ್ಯಾನೇಜ್‌ಮೆಂಟ್ ಟ್ರೈನಿ ಹುದ್ದೆಗಳ ಭರ್ತಿಗಾಗಿ ಬ್ಯಾಂಕ್ ಸಿಬ್ಬಂದಿ ನೇಮಕಾತಿ ಸಂಸ್ಥೆ(ಐಬಿಪಿಎಸ್) ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುತ್ತಿದೆ. ಪೂರ್ವಭಾವಿ ಪರೀಕ್ಷೆ, ಮುಖ್ಯ ಪರೀಕ್ಷೆ ಮತ್ತು ಸಂದರ್ಶನದ ಮೂಲಕ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಒಟ್ಟು ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಯವರಿಗೆ(ಎಸ್.ಸಿ) 996, ಪರಿಶಿಷ್ಟ ಪಂಗಡದವರಿಗೆ(ಎಸ್‌ಟಿ) 483, ಹಿಂದುಳಿದ ವರ್ಗದವರಿಗೆ (ಒಬಿಸಿ) 1741, ಸಾಮಾನ್ಯ ವರ್ಗದವರಿಗೆ 2,596 ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ(ಇಡಬ್ಲುಎಸ್) 616 ಹುದ್ದೆಗಳನ್ನು ಮೀಸಲಿಡಲಾಗಿದೆ.

ಕರ್ನಾಟಕದ 14 ಜಿಲ್ಲಾ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಪೂರ್ವಭಾವಿ ಪರೀಕ್ಷೆ ಮತ್ತು 3 ಜಿಲ್ಲಾ ಕೇಂದ್ರಗಳಲ್ಲಿ ಮುಖ್ಯಪರೀಕ್ಷೆ ನಡೆಯಲಿದೆ. ಇದೇ ಮೊದಲ ಬಾರಿಗೆ ಚಿಕ್ಕಬಳ್ಳಾಪುರ ಹಾಗೂ ತುಮಕೂರು ಜಿಲ್ಲೆಗಳಲ್ಲೂ ಪೂರ್ವಭಾವಿ ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದೆ.

ನೆನಪಿಡಿ: ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ನಮೂನೆಯಲ್ಲಿರುವ ಬ್ಯಾಂಕಿನ ಆದ್ಯತೆ ಆಯ್ಕೆಯ ಆದೇಶ ಕ್ರಮವನ್ನು ಅಗತ್ಯವಾಗಿ ಸೂಚಿಸಬೇಕು. ಹಾಗೆಯೇ, ಒಬಿಸಿ ವರ್ಗಕ್ಕೆ ಸೇರಿದ ಆದರೆ ಕೆನೆ ಪದರದ ಅಡಿಯಲ್ಲಿ ಬರುವ ಅಭ್ಯರ್ಥಿಗಳು ಒಬಿಸಿ ಮೀಸಲಾತಿಗೆ ಅರ್ಹರಾಗಿರುವುದಿಲ್ಲ. ಅವರು ಅರ್ಜಿ ನಮೂನೆಯಲ್ಲಿ ತಮ್ಮ ವರ್ಗವನ್ನು ಸಾಮಾನ್ಯ ಎಂದು ಸೂಚಿಸಬೇಕು. ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ಅಭ್ಯರ್ಥಿಯು ಕಾಲಕಾಲಕ್ಕೆ 'ಕೆನೆಪದರ ರಹಿತ' (Non cremy layer) ಎಂಬ ಷರತ್ತಿನೊಂದಿಗೆ ಒಬಿಸಿ ಪ್ರಮಾಣಪತ್ರವನ್ನು ಹೊಂದಿರಬೇಕು.

ಯಾವ ಬ್ಯಾಂಕಿನಲ್ಲಿ ಎಷ್ಟು ಹುದ್ದೆ?

ಬ್ಯಾಂಕ್ ಹೆಸರು	ಒಟ್ಟು
ಕೆನರಾ ಬ್ಯಾಂಕ್	2,500
ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ	2094
ಯುಕೊ ಬ್ಯಾಂಕ್	550
ಬ್ಯಾಂಕ್ ಆಫ್ ಇಂಡಿಯಾ	535
ಪಂಜಾಬ್ ನ್ಯಾಷನಲ್ ಬ್ಯಾಂಕ್	500
ಪಂಜಾಬ್ & ಸಿಂಧ್ ಬ್ಯಾಂಕ್	253
ಒಟ್ಟು	6,432

ಅಭ್ಯರ್ಥಿಗಳ ಆಯ್ಕೆ ವಿಧಾನ

ಮೊದಲ ಹಂತದಲ್ಲಿ ಪೂರ್ವಭಾವಿ ಪರೀಕ್ಷೆ (ಪ್ರಿಲಿಮ್ಸ್) ನಡೆಯಲಿದೆ. ಬೆಳಗಾವಿ, ಬೆಂಗಳೂರು, ಬೀದರ್,ದಾವಣಗೆರೆ, ಧಾರವಾಡ ಕಲಬುರ್ಗಿ, ಹಾಸನ, ಹುಬ್ಬಳ್ಳಿ, ಮಂಡ್ಯ, ಮಂಗಳೂರು, ಮೈಸೂರು, ಶಿವಮೊಗ್ಗ ಮತ್ತು ಉಡುಪಿಯಲ್ಲಿ ಪೂರ್ವಭಾವಿ ಪರೀಕ್ಷೆ ಪರೀಕ್ಷಾ ಕೇಂದ್ರಗಳಿರುತ್ತವೆ. ಪ್ರತಿ ಪರೀಕ್ಷೆಯಲ್ಲೂ ಕನಿಷ್ಠ ಅಂಕಗಳಿಸಬೇಕು. ಅಂದರೆ ಒಟ್ಟಾರೆ ಹೆಚ್ಚು ಅಂಕಗಳಿಸುವುದು ಮುಖ್ಯ. ಸೆಕ್ಷನಲ್ ಕಟ್ ಆಫ್ ಅಂಕದ ಜೊತೆಯಲ್ಲಿ ಒವರಾಲ್ ಕಟ್ ಆಫ್ ಇಲ್ಲದೆ ಇರುವುದರಿಂದ ವಿದ್ಯಾರ್ಥಿಗಳಿಗೆ ಇದು ಅನುಕೂಲ.

ಈ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಮುಖ್ಯ ಪರೀಕ್ಷೆಗೆ ಅರ್ಹತೆ ಪಡೆಯುತ್ತಾರೆ. ಎರಡು ಹಂತಗಳಲ್ಲಿ ಆನ್‌ಲೈನ್ ಮೂಲಕ ಮುಖ್ಯ ಪರೀಕ್ಷೆ ನಡೆಯಲಿದೆ. ಬೆಂಗಳೂರು, ಹುಬ್ಬಳ್ಳಿ ಮತ್ತು ಮಂಗಳೂರಿನಲ್ಲಿ ಮಾತ್ರ ಪರೀಕ್ಷಾ ಕೇಂದ್ರಗಳಿರುತ್ತವೆ. ಮೂರು ಗಂಟೆ ಅವಧಿಯ ಈ ಮುಖ್ಯ ಪರೀಕ್ಷೆಯಲ್ಲಿ 200 ಅಂಕಗಳಿಗೆ 155 ಪ್ರಶ್ನೆಗಳನ್ನು ಕೇಳಲಾಗುತ್ತದೆ. ಯಾವ ವಿಷಯ, ಎಷ್ಟು ಅಂಕ, ಎಷ್ಟು ಸಮಯ- ಎಲ್ಲ ವಿವರಗಳು ಈ ಕೆಳಗಿನ ಕೋಷ್ಟಕದಲ್ಲಿದೆ.

ಎಲ್ಲ ಪ್ರಶ್ನೆಗಳು ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಇರುತ್ತವೆ. ತಪ್ಪು ಉತ್ತರಕ್ಕೆ ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಳಲ್ಲಿ ಆಯಾ ವಿಷಯಕ್ಕೆ ಪ್ರತಿ ಪ್ರಶ್ನೆಗೆ ನಿಗದಿ ಪಡಿಸಿದ ಅಂಕದಿಂದ 0.25 ಅಂಕವನ್ನು ಕಳೆಯಲಾಗುತ್ತದೆ. ಪ್ರಶ್ನೆಗೆ ಉತ್ತರಿಸದಿದ್ದರೆ, ಯಾವುದೇ ರೀತಿಯ ದಂಡವಿರುವುದಿಲ್ಲ.

ಮುಖ್ಯ ಪರೀಕ್ಷೆ ಮುಗಿಯುತ್ತಿದ್ದಂತೆಯೇ 25 ಅಂಕಗಳಿಗೆ ಇಂಗ್ಲಿಷ್ ಭಾಷೆಗೆ ಸಂಬಂಧಿಸಿದಂತೆ ವಿವರಣಾತ್ಮಕ ಪರೀಕ್ಷೆ (ಡಿಸ್ಕ್ರಿಪ್ಟಿವ್ ಟೆಸ್ಟ್) ನಡೆಸಲಾಗುತ್ತದೆ. ಇದರಲ್ಲಿ ಪತ್ರ ಬರಹ ಮತ್ತು ಪ್ರಬಂಧ ರಚನೆಯ ಎರಡು ಪ್ರಶ್ನೆಗಳಿರುತ್ತವೆ. 30 ನಿಮಿಷಗಳ ಅವಧಿಯ ಈ ಪರೀಕ್ಷೆಯನ್ನು ಅಭ್ಯರ್ಥಿಗಳು ಕಂಪ್ಯೂಟರ್‌ನಲ್ಲಿಯೇ ಬರೆಯಬೇಕು.

ಈ ಬಾರಿಯ ಬಹು ಮುಖ್ಯ ಬದಲಾವಣೆ

ಇಂಗ್ಲಿಷ್ ಭಾಷೆಯ ವಿವರಣಾತ್ಮಕ ಪೇಪರ್ (ಪತ್ರ ಬರವಣಿಗೆ ಮತ್ತು ಪ್ರಬಂಧ) ಅನ್ನು ಸ್ವಯಂಚಾಲಿತ ಸ್ಕೋರಿಂಗ್ ಮೂಲಕ ಮೌಲ್ಯಮಾಪನ ಮಾಡಲಾಗುತ್ತದೆ. ಬರವಣಿಗೆಯ ಪ್ರಾವೀಣ್ಯಕ್ಕೆ ಸಂಬಂಧಿಸಿದಂತೆ ವೈಶಿಷ್ಟ್ಯಗಳನ್ನು ಗುರುತಿಸುವುದು ಇದರ ಕಾರ್ಯವಿಧಾನವಾಗಿದೆ. ಆಂಗ್ಲ ಭಾಷೆಯಲ್ಲಿ ಹಾಗೂ ಬರವಣಿಗೆಯಲ್ಲಿ ಪರೀಕ್ಷೆ ಬರೆಯುವವರ ಪ್ರಾವೀಣ್ಯವನ್ನು ವಸ್ತುನಿಷ್ಠ ರೀತಿಯಲ್ಲಿ ಮೌಲ್ಯಮಾಪನ ಮಾಡುವ ವಿಶಿಷ್ಟ ವಿಧಾನವಾಗಿದೆ. ಈ ಎರಡೂ ಪರೀಕ್ಷೆಗಳಲ್ಲಿ ಬ್ಯಾಂಕ್ ನಿಗದಿಪಡಿಸಿದಷ್ಟು ಅಂಕ ಪಡೆದವರು ಮಾತ್ರ ಮೂರನೇ ಹಂತಕ್ಕೆ ಅರ್ಹರಾಗುತ್ತಾರೆ.

ಅಭ್ಯರ್ಥಿಯು ಆನ್‌ಲೈನ್ ಮುಖ್ಯ ಪರೀಕ್ಷೆಯ ಪ್ರತಿ ಪರೀಕ್ಷೆಯಲ್ಲಿ ಕನಿಷ್ಠ ಅಂಕ ಪಡೆದಿರಬೇಕು. ಸಂದರ್ಶನಕ್ಕೆ ಅರ್ಹತೆ ಪಡೆದಿರುವವರ ಪಟ್ಟಿ(ಶಾರ್ಟ್‌ಲಿಸ್ಟ್)ಯಲ್ಲಿ ಸ್ಥಾನ ಪಡೆಯಲು ಅಗತ್ಯವಾದ ಕನಿಷ್ಠ ಒಟ್ಟು ಅಂಕಗಳನ್ನು ಗಳಿಸಿರಬೇಕು. ಕನಿಷ್ಠ ಅಂಕಗಳು ಖಾಲಿ ಹುದ್ದೆಗಳ ಸಂಖ್ಯೆಯನ್ನು ಅವಲಂಬಿಸಿರುತ್ತವೆ. ಜೊತೆಗೆ, ಅವುಗಳ ಮೇಲೆ ಕಟ್-ಆಫ್ ಅಂಕಗಳನ್ನು ನಿರ್ಧರಿಸಲಾಗುವುದು ಮತ್ತು ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಶಾರ್ಟ್‌ಲಿಸ್ಟ್ ಮಾಡಲಾಗುತ್ತದೆ. ಸಂದರ್ಶನ ಪಟ್ಟಿಯಲ್ಲಿ ಸ್ಥಾನ ಪಡೆದ ಅಭ್ಯರ್ಥಿಗಳಿಗೆ ಸಂದರ್ಶನ ಪ್ರಕ್ರಿಯೆ ಪೂರ್ಣಗೊಳಿಸುವ ಮೊದಲು ಆನ್‌ಲೈನ್ ಮುಖ್ಯ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಅಭ್ಯರ್ಥಿಗಳೊಂದಿಗೆ ಹಂಚಿಕೊಳ್ಳಲಾಗುವುದಿಲ್ಲ.

ಸಂದರ್ಶನದ ವೇಳೆ 'ಒಬಿಸಿ' ವರ್ಗದ ಅಡಿಯಲ್ಲಿ ಹಂತ -3 ಕ್ಕೆ ಅರ್ಹತೆ ಪಡೆದ ಅಭ್ಯರ್ಥಿಗಳು ಒಬಿಸಿ ಪ್ರಮಾಣಪತ್ರವನ್ನು 'ಕೆನೆ ಪದರ ರಹಿತ'(Non-Creamy layer) ಷರತ್ತು ಒಳಗೊಂಡಿರುವುದನ್ನು ಸಲ್ಲಿಸಬೇಕಾಗುತ್ತದೆ. 'ಆರ್ಥಿಕವಾಗಿ ಹಿಂದುಳಿದ ವರ್ಗದ ಅಡಿಯಲ್ಲಿ'(ಇಡಬ್ಲ್ಯುಎಸ್) ಹಂತ-3 ಕ್ಕೆ ಅರ್ಹತೆ ಪಡೆದ ಅಭ್ಯರ್ಥಿಗಳು ಆರ್ಥಿಕ ವರ್ಷದ ಒಟ್ಟು ವಾರ್ಷಿಕ ವರಮಾನದ ಆಧಾರದ ಮೇಲೆ ಇಡಬ್ಲ್ಯುಎಸ್ ಪ್ರಮಾಣ ಪತ್ರವನ್ನು ಸಲ್ಲಿಸಬೇಕಾಗುತ್ತದೆ.

ಯಾವ ವಿಷಯ, ಎಷ್ಟು ಅಂಕ, ಎಷ್ಟು ಸಮಯ

ಕ್ರ.ಸಂ	ವಿಷಯ	ಪ್ರಶ್ನೆಗಳು	ಅಂಕಗಳು	ಸಮಯ(ನಿಮಿಷ)	ಪ್ರತಿ ಪ್ರಶ್ನೆಗೆ ಸಮಯ/ಅಂಕ
I	ರೀಸನಿಂಗ್ ಮತ್ತು ಕಂಪ್ಯೂಟರ್ ಆಪ್ಟಿಟ್ಯೂಡ್ (Reasoning and Computer Aptitude)45 ಪ್ರಶ್ನೆ	45	60	60	80 ಸೆ./ 1.33 ಅಂಕ
II	ಸಾಮಾನ್ಯ/ಆರ್ಥಿಕ/ಬ್ಯಾಂಕಿಂಗ್ ಅರಿವು (General/ Economy/ Banking Awareness)	40	40	35	52.5 ಸೆ. / 1.00 ಅಂಕ
III	ಇಂಗ್ಲಿಷ್(English Language)	35	40	40	68.57 ಸೆ. / 1.14 ಅಂಕ
VI	ಡೇಟಾ ಅನಾಲಿಸ್ ಮತ್ತು ಇಂಟರ್‌ಪ್ರಿಟೇಷನ್ (Data Analysis & Interpretation)	35	60	45	77.14 ಸೆ. / 1.71 ಅಂಕ

ಅರ್ಜಿ ಸಲ್ಲಿಕೆ ವಿವರ

ಅರ್ಜಿ ಸಲ್ಲಿಸುವ ವಿಧಾನ: ಐಬಿಪಿಎಸ್ ಸಂಸ್ಥೆಯ ಜಾಲತಾಣದ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು.
ಅರ್ಜಿ ಸಲ್ಲಿಕೆಗೆ ಕೊನೆ ದಿನ: ಆಗಸ್ಟ್ 22 , 2022 ಅರ್ಜಿ ಸಲ್ಲಿಸಲು ಕೊನೆ ದಿನ.

ಪರೀಕ್ಷೆ ದಿನಾಂಕ, ಶುಲ್ಕ

ಪೂರ್ವಭಾವಿ ಪರೀಕ್ಷೆ: ಅಕ್ಟೋಬರ್- 2022
ಮುಖ್ಯ ಪರೀಕ್ಷೆ: ನವೆಂಬರ್-2022
ಸಂದರ್ಶನ: ಜನವರಿ/ಫೆಬ್ರವರಿ-2023
ನೇಮಕಾತಿ: ಏಪ್ರಿಲ್- 2023
ವಿದ್ಯಾರ್ಹತೆ: ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳಿಂದ ಯಾವುದೇ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.
ವಯೋಮಿತಿ : ಕನಿಷ್ಠ 20 ರಿಂದ ಗರಿಷ್ಠ 30 ವರ್ಷಗಳು. ಎಸ್.ಸಿ / ಎಸ್.ಟಿ ಹಾಗೂ ಮಾಜಿ ಸೈನಿಕರಿಗೆ 5 ವರ್ಷಗಳು ಹಾಗೂ ಒಬಿಸಿ ವರ್ಗದ ಅಭ್ಯರ್ತಿಗಳಿಗೆ 3 ವರ್ಷ ಹಾಗೂ ಅಂಗವಿಕಲರಿಗೆ 10 ವರ್ಷಗಳ ವಯೋಮಿತಿ ಸಡಿಲಿಕೆ ಮಾಡಲಾಗಿದೆ.
ಅರ್ಜಿ ಶುಲ್ಕ: ಸಾಮಾನ್ಯ ವರ್ಗಕ್ಕೆ ₹ 850. ಎಸ್.ಸಿ/ಎಸ್.ಟಿ/ ಅಂಗವಿಕಲ ಅಭ್ಯರ್ಥಿಗಳಿಗೆ ₹150.

ಆಯ್ಕೆ ಪಟ್ಟಿ

ಅಂತಿಮ ಸುತ್ತಿಗೆ ಆಯ್ಕೆಯಾದ ಅಭ್ಯರ್ಥಿಗಳು ಹಂತ-II ಮತ್ತು ಹಂತ-III ಎರಡರಲ್ಲೂ ಪ್ರತ್ಯೇಕವಾಗಿ ಅರ್ಹತೆ ಪಡೆದಿರಬೇಕು. ಸಂದರ್ಶನಕ್ಕೆ ನಿಗದಿಪಡಿಸಲಾದ ಒಟ್ಟು ಅಂಕಗಳು 100. ಸಂದರ್ಶನದಲ್ಲಿ ಕನಿಷ್ಠ ಅರ್ಹತಾ ಅಂಕಗಳು ಶೇ 40 (ಎಸ್.ಸಿ/ಎಸ್.ಟಿ/ಒಬಿಸಿ/ಅಂಗವಿಕಲ ಅಭ್ಯರ್ಥಿಗಳಿಗೆ ಶೇ 35). ಆನ್‌ಲೈನ್ ಮುಖ್ಯ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಪಡೆದ ಅಂಕಗಳನ್ನು ಕ್ರಮವಾಗಿ 80:20 ಅನುಪಾತದ ಆಧಾರದ ಮೇಲೆ ಮೆರಿಟ್ ಪಟ್ಟಿ ತಯಾರಿಸಿ, ನೇಮಕಾತಿ ಮಾಡಿಕೊಳ್ಳಲಾಗುತ್ತದೆ.

ಅರ್ಜಿ ಸಲ್ಲಿಸಲು ಹಾಗೂ ನೋಂದಣಿಗೆ ಬಳಸಬೇಕಾದ ಲಿಂಕ್: www.ibps.in

(ಲೇಖಕರು: ಬ್ಯಾಂಕಿಂಗ್ ತರಬೇತುದಾರರು ಹಾಗೂ ವ್ಯಕ್ತಿತ್ವ ವಿಕಸನ ತರಬೇತುದಾರರು ಮತ್ತು ವೃತ್ತಿ ಮಾರ್ಗದರ್ಶಕರು.ಮಡಿಕೇರಿ)

ಮಾದರಿ ಪ್ರಶ್ನೋತ್ತರ

ಕೆಪಿಎಸ್‌ಸಿ ಗ್ರೂಪ್ 'ಸಿ'ಯ ವಿವಿಧ ಹುದ್ದೆಗಳು, ಕೆಎಸ್‌ಆರ್‌ಪಿ ಆ್ಯಂಡ್ ಐಆರ್‌ಬಿಯ ಸಬ್‌ಇನ್‌ಸ್ಪೆಕ್ಟರ್ ಹಾಗೂ ಕೆಎಸ್‌ಐಎಸ್‌ಎಫ್‌ನ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳ ನೇಮಕಾತಿಗಾಗಿ ಶೀಘ್ರದಲ್ಲೇ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ. ಈ ಮೂರು ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

ಸಾಮಾನ್ಯ ಜ್ಞಾನ

1) ಕೆಳಗಿನ ಹೇಳಿಕೆಗಳನ್ನು ಗಮನಿಸಿ.

1) ರಾಷ್ಟ್ರಪತಿ ಹುದ್ದೆಗೇರಿದ ಮೊದಲ ಬುಡಕಟ್ಟು ಜನಾಂಗದ ಮಹಿಳೆ
2) ಅತ್ಯಂತ ಕಿರಿಯ ವಯಸ್ಸಿನಲ್ಲಿ ರಾಷ್ಟ್ರಪತಿ ಸ್ಥಾನಕ್ಕೇರಿದವರು
3) ಜಾರ್ಖಂಡ್ ರಾಜ್ಯದ ರಾಜ್ಯಪಾಲರಾದ ಮೊದಲ ಮಹಿಳೆ
ಈ ಮೇಲಿನ ಹೇಳಿಕೆಗಳು ಯಾರಿಗೆ ಅನ್ವಯವಾಗುತ್ತವೆ?
ಎ) ಪ್ರತಿಭಾಸಿಂಗ್ ಪಾಟೀಲ್
ಬಿ) ಮಾರ್ಗರೆಟ್ ಆಳ್ವ ಸಿ) ದ್ರೌಪದಿ ಮುರ್ಮು ಡಿ) ಮೇಲಿನ ಯಾರಿಗೂ ಅಲ್ಲ

ಉತ್ತರ: ಸಿ

2) ಫಾರ್ಚೂನ್ 500 ಪಟ್ಟಿಯಲ್ಲಿ ಎಲ್‌ಐಸಿಯು ಯಾವ ಸ್ಥಾನ ಪಡೆದಿದೆ?
ಎ) 98 ಬಿ) 100 ಸಿ) 201 ಡಿ) 350

ಉತ್ತರ: ಎ

3) ಮಂಕಿಪಾಕ್ಸ್ ಕುರಿತಂತೆ ವಿಶ್ವ ಆರೋಗ್ಯ ಸಂಸ್ಥೆ ಕೆಳಗಿನ ಯಾವ ಕ್ರಮವನ್ನು ಕೈಗೊಂಡಿದೆ?
ಎ) ಜಾಗತಿಕ ಉಚಿತ ಲಸಿಕಾ ಕಾರ್ಯಕ್ರಮ ಘೋಷಿಸಿದೆ
ಬಿ) ಜಾಗತಿಕ ತುರ್ತು ಸ್ಥಿತಿ ಘೋಷಿಸಿದೆ.
ಸಿ) ಶ್ರೀಮಂತ ರಾಷ್ಟ್ರಗಳಿಗೆ ಆಫ್ರಿಕಾದ ಪ್ರಜೆಗಳು ಬರದಂತೆ ನಿಷೇಧಿಸಿದೆ.
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ: ಬಿ

4) ಈ ಕೆಳಗಿನ ಯಾವ ದೇಶಕ್ಕೆ ಅಮೆರಿಕದ ಸಂಸದ್ ಸ್ಪೀಕರ್ ನ್ಯಾನ್ಸಿ ಪೆಲೋಸಿ ಭೇಟಿ ಕೊಟ್ಟಿದಕ್ಕೆ ಚೀನಾ ಕೋಪಗೊಂಡು ಆದೇಶದ ಹತ್ತಿರದಲ್ಲಿ ಕ್ಷಿಪಣಿ ಉಡಾಯಿಸಿತು?
ಎ) ಭೂತಾನ್ ಬಿ) ಟಿಬೆಟ್ ಸಿ) ಜಪಾನ್
ಡಿ) ತೈವಾನ್

ಉತ್ತರ: ಡಿ

5) ಕೆಳಗಿನ ಹೇಳಿಕೆಗಳನ್ನು ಗಮನಿಸಿ
1) ಆರ್ 9ಎಕ್ಸ್ ಹೈಫೈರ್ (R9X Hellfire Missile) ಕ್ಷಿಪಣಿಯನ್ನು 2011ರಲ್ಲಿ ಬರಾಕ್ ಒಬಾಮಾ ಅವಧಿಯಲ್ಲಿ ಅಭಿವೃದ್ಧಿಪಡಿಸಲಾಗಿತ್ತು. 2017ರಲ್ಲಿ ಮೊದಲಬಾರಿಗೆ ಅಲ್ ಖೈದಾ ಭಯೋತ್ಪಾದಕ ಅಬು ಅಲ್‌ಖೈರ್ ಅಲ್ ಮಸ್ರಿಯನ್ನು ಕೊಲ್ಲಲು ಬಳಸಲಾಗಿತ್ತು.
2) ಆರ್ 9ಎಕ್ಸ್ ಹೈಫೈರ್ ಕ್ಷಿಪಣಿ ಸ್ಫೋಟ ರಹಿತ, ಶಬ್ದ ರಹಿತ ಕಾರ್ಯಾಚರಣೆ ನಡೆಸುತ್ತದೆ. ಸುತ್ತಮುತ್ತಲ ನಾಗರಿಕರಿಗೆ ಹಾನಿ ಮಾಡದಂತೆ ಕಾರ್ಯನಿರ್ವಹಿಸುತ್ತದೆ. ಇದು ಸಿಡಿತಲೆ ರಹಿತ ಕ್ಷಮಿಪಣಿಯಾಗಿದ್ದು ಆರು ಹರಿತವಾದ ಬ್ಲೇಡ್ ಹೊಂದಿದೆಡ.
3) ಅಮೆರಿಕ, ಅಲ್-ಖೈದಾ ಮುಖ್ಯಸ್ಥ ಜವಾಹರಿ ಹತ್ಯೆಗೆ ಆರ್ 9ಎಕ್ಸ್ ಹೈಫೈರ್ ಕ್ಷಿಪಣಿ ಬಳಸಿ ಹತ್ಯೆ ಮಾಡಿತ್ತು.
ಉತ್ತರ ಸಂಕೇತಗಳು
ಎ) ಎಲ್ಲಾ ಹೇಳಿಕೆಗಳು ಸರಿಯಾಗಿವೆ
ಬಿ) 1 ನೇ ಹೇಳಿಕೆ ಮಾತ್ರ ಸರಿ
ಸಿ) 1 ಮತ್ತು 3 ಹೇಳಿಕೆಗಳು ಮಾತ್ರ ಸರಿಯಾಗಿವೆ
ಡಿ) ಎಲ್ಲಾ ಹೇಳಿಕೆಗಳು ತಪ್ಪಾಗಿವೆ.

ಉತ್ತರ:ಎ

6) ಕೇಂದ್ರ ಸರ್ಕಾರ ಘೋಷಿಸಿದ ಈ ಕೆಳಗಿನ ಯಾವ ನೀತಿಯನ್ನು ಯಥಾವತ್ತಾಗಿ ಜಾರಿಗೆ ತರಲು ಕರ್ನಾಟಕ ಸರ್ಕಾರ ಇತ್ತೀಚೆಗೆ ಮುಂದಾಗಿದೆ?
ಎ) ಯುವ ನೀತಿ ಬಿ) ಶಿಕ್ಷಣ ನೀತಿ
ಸಿ) ಗುಜರಿ ನೀತಿ ಡಿ) ಯಾವುದೂ ಅಲ್ಲ.

ಉತ್ತರ: ಸಿ

7) ಕೇಂದ್ರ ಜಾಗೃತ ಆಯೋಗದ ಮುಖ್ಯಸ್ಥರಾಗಿ ಯಾರನ್ನು ನೇಮಕ ಮಾಡಲಾಗಿದೆ?
ಎ) ಸುರೇಶ್ ಎನ್ ಪಟೇಲ್
ಬಿ) ಅರವಿಂದ್ ಕುಮಾರ್
ಸಿ) ಪ್ರವೀಣ್ ಕುಮಾರ್ ಶ್ರೀವಾತ್ಸವ್
ಡಿ)ಮೇಲಿನ ಯಾರೂ ಅಲ್ಲ

ಉತ್ತರ: ಎ

8) 'ವೈಯಕ್ತಿಕ ದತ್ತಾಂಶ ಭದ್ರತಾ ಮಸೂದೆ-2019' ಯಾಕೆ ಸುದ್ದಿಯಲ್ಲಿತ್ತು?
ಎ) ಸಂಸತ್ತಿನ ಉಭಯ ಸದನಗಳು ಇದನ್ನು ಪಾಸ್ ಮಾಡಿದವು
ಬಿ) ಕೇಂದ್ರ ಸರ್ಕಾರವು ಈ ಮಸೂದೆಯನ್ನು ಲೋಕಸಭೆಯಿಂದ ವಾಪಸ್ ಪಡೆಯಿತು
ಸಿ) ಕೇಂದ್ರ ಸರ್ಕಾರವು ಈ ಮಸೂದೆಯನ್ನು ಜಂಟಿ ಸಂಸತ್ ಸಮಿತಿಗೆ ಒಪ್ಪಿಸಿತು
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ: ಬಿ

9) ಸ್ವತಂತ್ರ ಭಾರತದ ಮೊದಲ ಅಂತರರಾಷ್ಟ್ರೀಯ ಬುಲಿಯನ್ ಎಕ್ಸ್‌ಚೇಂಜ್ ಎಂಬ ಅಮೂಲ್ಯ ಲೋಹಗಳ ವಿನಿಮಯ ಕೇಂದ್ರವನ್ನು ಎಲ್ಲಿ ಆರಂಭಿಸಲಾಗಿದೆ?
ಎ) ಗುಜರಾತ್ ಬಿ) ರಾಜಸ್ತಾನ
ಸಿ) ಕರ್ನಾಟಕ ಡಿ) ಪಂಜಾಬ್

ಉತ್ತರ: ಎ

(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)

'ನಿಮಗಿದು ಗೊತ್ತೇ' ಮಾಹಿತಿಗಾಗಿ www. prajavani.net ಜಾಲತಾಣಕ್ಕೆ ಭೇಟಿ ನೀಡಿ.

ಉದ್ಯೋಗ ವಾರ್ತೆ

312 ಹೆಡ್ ಕಾನ್‌ಸ್ಟೆಬಲ್ ಹುದ್ದೆಗಳಿಗೆ ಅರ್ಜಿ ಆಹ್ವಾನ

ಭಾರತೀಯ ಗಡಿ ಭದ್ರತೆಪಡೆಯಲ್ಲಿ312 ಹೆಡ್ ಕಾನ್‌ಸ್ಟೆಬಲ್ ಹಾಗೂ 11 ಎಎಸ್‌ಐ ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸಬೇಕು. ಇತರೆ ವಿಧಾನದ ಮೂಲಕ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಹುದ್ದೆಗಳ ಮಾಹಿತಿ, ಅರ್ಜಿ ಸಲ್ಲಿಕೆ ವಿಧಾನ, ನೇಮಕಾತಿ ಪ್ರಕ್ರಿಯೆಯ ಮಾಹಿತಿಗಾಗಿ ಈ ಕೆಳಗೆ ನೀಡಿರುವ ವೆಬ್‌ಸೈಟ್‌ನಿಂದ ಮಾಹಿತಿ ಪಡೆಯಬಹುದು.

ಹುದ್ದೆಯ ಹೆಸರು : 1) ಎಎಸ್‌ಐ (ಸ್ಟೆನೊ); ಹುದ್ದೆಗಳ ಸಂಖ್ಯೆ: 11
2) ಹೆಡ್ ಕಾನ್‌ಸ್ಟೆಬಲ್; ಹುದ್ದೆಗಳ ಸಂಖ್ಯೆ: 312
ವಿದ್ಯಾರ್ಹತೆ: ಅಂಗೀಕೃತ ಶಿಕ್ಷಣ ಸಂಸ್ಥೆಯಿಂದ ದ್ವಿತೀಯ ಪಿಯುಸಿಯಲ್ಲಿ(10 + 2) ಉತ್ತೀರ್ಣರಾಗಿರಬೇಕು. ಎಎಸ್‌ಐ ಹುದ್ದೆಗಳಿಗೆ ಟೈಪಿಂಗ್ ಹಾಗೂ ಸ್ಟನೊ ಡಿಪ್ಲೊಮಾ ಪಡೆದಿರಬೇಕು.
ವೇತನ: ಮಾಸಿಕ ₹25,700 - ₹81,100 ರವರೆಗೆ (ವಿವಿಧ ಭತ್ಯೆಗಳು ಸೇರಿ)
ವಯೋಮಿತಿ : ಕನಿಷ್ಠ 18 ವರ್ಷದಿಂದ ಗರಿಷ್ಠ 25 ವರ್ಷದೊಳಗಿನ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.
ಅರ್ಜಿ ಸಲ್ಲಿಕೆ ಕೊನೆ : ಸೆಪ್ಟೆಂಬರ್ 6. 2022
ವೆಬ್‌ಸೈಟ್: https://rectt.bsf.gov.in/
ಅಧಿಸೂಚನೆ: shorturl.at/BOQU7

ಮಿಷನ್ ವಾತ್ಸಲ್ಯ

ಯುಪಿಎಸ್‌ಸಿ-ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-3, ಕೆಪಿಎಸ್‌ಸಿ-ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-3 ಸೇರಿದಂತೆ ಎಲ್ಲಾ ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ವಿದ್ಯಮಾನ ಕುರಿತಮಾಹಿತಿ ಇಲ್ಲಿದೆ.



ಯು.ಟಿ. ಆಯಿಶ ಫರ್ಝಾನ

ಕೇಂದ್ರ ಸರ್ಕಾರ ಇತ್ತೀಚೆಗೆ 'ವಾತ್ಸಲ್ಯ ಅಭಿಯಾನ'ಕ್ಕೆ ಸಂಬಂಧಿಸಿದಂತೆ ರಾಜ್ಯಸರ್ಕಾರಗಳಿಗೆ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ. ವಾತ್ಸಲ್ಯ ಅಭಿಯಾನ ಯೋಜನೆ ಬಾಲ ಸಂರಕ್ಷಣಾ ಯೋಜನೆ ಯಾಗಿದ್ದು, ಈ ಯೋಜನೆಯಡಿಯಲ್ಲಿ ಮಕ್ಕಳ ಸಂರಕ್ಷಣೆಗೆ ಸಂಬಂಧಪಟ್ಟ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ.

ಏನಿದು ವಾತ್ಸಲ್ಯ ಅಭಿಯಾನ ?

ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, 2009ಕ್ಕೂ ಮುನ್ನ ಮಕ್ಕಳ ಸಂರಕ್ಷಣೆಗೆ ಸಂಬಂಧಿಸಿದಂತೆ ಮೂರು ಪ್ರಮುಖ ಯೋಜನೆಗಳನ್ನು ಜಾರಿಗೆ ತಂದಿತ್ತು. ಆ ಯೋಜನೆಗಳು ಹೀಗಿವೆ.

ಬಾಲ ನ್ಯಾಯ ಕಾರ್ಯಕ್ರಮ :
- ಇದು ಕಾನೂನಿನೊಂದಿಗೆ ಘರ್ಷಣೆಗೆ ಒಳಗಾಗಿರುವ ಬಾಲಾಪರಾಧಿಗಳ ಆರೈಕೆ ಮತ್ತು ಸಂರಕ್ಷಣೆ
- ಬೀದಿಬದಿಯ ಮಕ್ಕಳಿಗೆ ವಿವಿಧ ಸ್ವರೂಪದ ಸೌಕರ್ಯ ಕಲ್ಪಿಸುವುದು.
- ವಸತಿರಹಿತ ಮಕ್ಕಳಿಗೆ ಯೋಜನೆ

2010ರಲ್ಲಿ ಈ ಮೂರು ಕಾರ್ಯಕ್ರಮಗಳನ್ನು ವಿಲೀನಗೊಳಿಸಿ, ಸಮಗ್ರ ಮಕ್ಕಳ ಸಂರಕ್ಷಣಾ ಯೋಜನೆ ಎಂದು ಮರು ನಾಮಕರಣ ಮಾಡಲಾಯಿತು. ಆ ವರ್ಷ ದಿಂದಲೇ ಈ ಯೋಜನೆಯನ್ನು ಜಾರಿಗೆ ತರಲಾಯಿತು. 2017ರಲ್ಲಿ ಮತ್ತೆ ಈ ಯೋಜನೆಯನ್ನು 'ಮಕ್ಕಳ ರಕ್ಷಣಾ ಸೇವೆಗಳು' ಎಂದು ಮರು ನಾಮಕರಣ ಮಾಡಲಾಯಿತು. 2021-22ರಲ್ಲಿ ಕೆಲವು ಮಾರ್ಪಾಡುಗಳನ್ನು ತಂದು ಈ ಯೋಜನೆಗೆ 'ವಾತ್ಸಲ್ಯ ಅಭಿಯಾನ' ಎಂದು ಮರು ನಾಮಕರಣ ಮಾಡಿ, ಜಾರಿಗೆ ತರಲಾಗಿದೆ.

ಪ್ರಸ್ತುತ ಯೋಜನೆಯ ರೂಪುರೇಷೆ

ಇದು ಭಾರತದಲ್ಲಿ ವಾಸಿಸುತ್ತಿರುವ ಮಕ್ಕಳ ಸಂರಕ್ಷಣೆಗೆ ಹಾಗೂ ಮಕ್ಕಳಿಗೆ ನೀಡುವ ವಿವಿಧ ಸೇವೆಗಳ ಯೋಜನೆ.

ಪರಿತ್ಯಜಿಸಲ್ಪಟ್ಟ ಅಥವಾ ಒಂಟಿ ಮಗುವಿನ ಆರೈಕೆಯ ಹೊಣೆಗಾರಿಕೆ ಹೊತ್ತುಕೊಂಡ ಕುಟುಂಬ ಆಧಾರಿತ (ಸಾಂಸ್ಥಿಕವಲ್ಲದ) ಆರೈಕೆಗಾಗಿ ಪ್ರತಿ ತಿಂಗಳು ಪ್ರತಿ ಮಗುವಿಗೆ ₹4000 ಅನುದಾನ ನೀಡಲಾಗುತ್ತದೆ.

ವಾತ್ಸಲ್ಯ ಅಭಿಯಾನದ ಅಡಿ ಹಲವಾರು ಘಟಕಗಳು ಇವೆ. ಅವುಗಳೆಂದರೆ:

ಎ. ಶಾಸನೀಯ ಸಂಸ್ಥೆಗಳ ಕಾರ್ಯ ನಿರ್ವಹಣಾ ಸಾಮರ್ಥ್ಯ ಹೆಚ್ಚಳ: ಅಂದರೆ, ಮಕ್ಕಳ ರಕ್ಷಣೆಗಾಗಿ ರಾಷ್ಟ್ರ ಮತ್ತು ರಾಜ್ಯಮಟ್ಟದಲ್ಲಿ ಮಕ್ಕಳ ಹಕ್ಕುಗಳ ಆಯೋಗಗಳನ್ನು ಸ್ಥಾಪಿಸಲಾಗಿದ್ದು, ಈ ಆಯೋಗಗಳ ಸೂಕ್ತ ಕಾರ್ಯನಿರ್ವಹಣೆಗೆ ಸಕಾರಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುವುದು ಎಂದು ಅರ್ಥ.

ಬಿ. ಮಕ್ಕಳಿಗೆ ವಿವಿಧ ಸೇವೆಗಳನ್ನು ಪೂರೈಸುತ್ತಿರುವ ಸೇವಾ ಸಂಸ್ಥೆಗಳ ಬಲವರ್ಧನೆ: ರಾಷ್ಟ್ರ ಮತ್ತು ರಾಜ್ಯಮಟ್ಟದ ಹಲವು ಸಂಸ್ಥೆಗಳು ಮಕ್ಕಳ ಅವಶ್ಯಕತೆಗಳನ್ನು ಪೂರೈಸಲು ವಿವಿಧ ಸೇವೆಗಳನ್ನು ಕಲ್ಪಿಸುತ್ತಿವೆ. ಈ ಸಂಸ್ಥೆಗಳ ಕಾರ್ಯನಿರ್ವಹಣೆಯನ್ನು ಮತ್ತಷ್ಟು ಉತ್ತಮಗೊಳಿಸಲು, ಸಂಸ್ಥೆಗಳ ಬಲವರ್ಧನೆಗೆ ಕೇಂದ್ರ ಸರ್ಕಾರ ಮುಂದಾಗಿದೆ.

ಸಿ. ಸಾಂಸ್ಥಿಕ ಆರೈಕೆ ಮತ್ತು ಸೇವೆಗಳನ್ನು ಮೇಲ್ದರ್ಜೆಗೆ ಏರಿಸುವುದು: ಜನನ ಮತ್ತು ಬಾಲ್ಯಾವಸ್ಥೆಯ ಸಂದರ್ಭದಲ್ಲಿ, ಸರ್ಕಾರದ ವಿವಿಧ ಸಂಸ್ಥೆಗಳು ಮಕ್ಕಳ ಆರೋಗ್ಯಕ್ಕೆ ಸಂಬಂಧಪಟ್ಟಂತೆ ವಿವಿಧ ರೀತಿಯ ಆರೈಕೆ ಮತ್ತು ಸೇವೆಗಳನ್ನು ಕಲ್ಪಿಸುತ್ತಿವೆ. ಪ್ರಸ್ತುತ ಕಲ್ಪಿಸುತ್ತಿರುವ ಸೇವೆ ಮತ್ತು ಆರೈಕೆಯನ್ನು ಉನ್ನತ ದರ್ಜೆಗೆ ಏರಿಸುವ ನಿಟ್ಟಿನಲ್ಲಿ ಈ ಘಟಕ ಕಾರ್ಯನಿರ್ವಹಿಸುತ್ತದೆ.

ಡಿ. ತರಬೇತಿ ಮತ್ತು ಸಾಮರ್ಥ್ಯ ಅಭಿವೃದ್ಧಿ : ಮಕ್ಕಳ ಆರೈಕೆ ಸಂಬಂಧ ವಿವಿಧ ರೀತಿಯ ಸೇವೆಗಳನ್ನು ಕಲ್ಪಿಸುತ್ತಿರುವ ಸಂಸ್ಥೆಗಳ ಸಿಬ್ಬಂದಿಗೆ ತರಬೇತಿ ಮತ್ತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.



ಕೇಂದ್ರದ ಪ್ರಸ್ತುತ ಮಾರ್ಗಸೂಚಿಗಳು

ಯಾವುದೇ ಸಂದರ್ಭದಲ್ಲೂ ಈ ಯೋಜನೆಯ ಹೆಸರನ್ನು ರಾಜ್ಯ ಸರ್ಕಾರಗಳು ಮಾರ್ಪಾಡು ಮಾಡುವಂತಿಲ್ಲ. ಮಾರ್ಪಾಡು ಮಾಡಿದರೆ, ಕೇಂದ್ರದಿಂದ ಸಿಗುತ್ತಿರುವ ಅನುದಾನ ತಕ್ಷಣವೇ ಸ್ಥಗಿತವಾಗುತ್ತದೆ.

ಈ ಯೋಜನೆ ಅಡಿಯಲ್ಲಿ ಕೇಂದ್ರ ಕಲ್ಪಿಸುತ್ತಿರುವ ಅನುದಾನವನ್ನು 'ವಾತ್ಸಲ್ಯ ಯೋಜನೆ ಅನುಮೋದನಾ ಮಂಡಳಿ' ಅನುಮೋದಿಸಬೇಕು. ಈ ಮಂಡಳಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಕಾರ್ಯದರ್ಶಿಗಳು ಅಧ್ಯಕ್ಷರಾಗಿರುತ್ತಾರೆ.

ಈ ಅಧ್ಯಕ್ಷರ ನೇತೃತ್ವದಲ್ಲಿ ರಾಜ್ಯ ಸರ್ಕಾರದಿಂದ ಪ್ರಸ್ತಾಪಿಸಿರುವ ಯೋಜನೆಗಳ ರೂಪುರೇಷೆ, ಪ್ರಮುಖ ಉದ್ದೇಶಗಳು ಮತ್ತು ಅನುದಾನದ ಮೊತ್ತವನ್ನು ಪರಾಮರ್ಶಿಸಿದ ನಂತರ ಅನುಮೋದನಾ ಮಂಡಳಿ ಅನುದಾನದ ಹಣವನ್ನು ಬಿಡುಗಡೆ ಮಾಡುತ್ತದೆ.

ಯೋಜನೆಯಡಿಯಲ್ಲಿ ಶೇ60ರಷ್ಟು ಅನುದಾನದ ಮೊತ್ತವನ್ನು ಕೇಂದ್ರ ಸರ್ಕಾರ ಭರಿಸಿದರೆ, ಉಳಿದ ಮೊತ್ತವನ್ನು ರಾಜ್ಯ ಸರ್ಕಾರಗಳು ಭರಿಸತಕ್ಕದ್ದು. ಈ ಅನುಪಾತ ಬಹುತೇಕ ರಾಜ್ಯ ಸರ್ಕಾರಗಳಿಗೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಅನ್ವಯವಾಗುತ್ತದೆ. ಆದರೆ ಎಂಟು ಈಶಾನ್ಯ ರಾಜ್ಯಗಳು, ಹಿಮಾಚಲ ಪ್ರದೇಶ, ಉತ್ತರಾಖಂಡ ಮತ್ತು ಕೇಂದ್ರಾಡಳಿತ ಪ್ರದೇಶ ಜಮ್ಮು ಕಾಶ್ಮೀರದಲ್ಲಿ 90:10 ರ ಅನುಪಾತದಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ.

ಬಾಲಾಪರಾಧಿ ನ್ಯಾಯ ಕಾಯ್ದೆಯ ಅಡಿಯಲ್ಲಿ ಉಲ್ಲೇಖಿಸಿರುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರತಿ ಜಿಲ್ಲಾಮಟ್ಟದಲ್ಲಿ 24X7 ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸಲು ಮುಂದಾಗಿದೆ.

ಅಂತರರಾಷ್ಟ್ರೀಯ ಹಾಗೂ ದೇಶೀಯ ಮಟ್ಟದಲ್ಲಿ ದತ್ತು ಪಡೆದುಕೊಳ್ಳುವ ಪ್ರಕ್ರಿಯೆಯನ್ನು ಮತ್ತಷ್ಟು ಸರಳೀಕರಣಗೊಳಿಸುವ ಉದ್ದೇಶ ಹೊಂದಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಮತ್ತು ಕೇಂದ್ರ ಮಟ್ಟದ ದತ್ತು ಪ್ರಕ್ರಿಯೆ ಕೇಂದ್ರಗಳ ನಿರ್ವಹಣೆಯನ್ನು ಈ ಯೋಜನೆ ಅಡಿ ತರಲು ಕೇಂದ್ರ ಸರ್ಕಾರ ಮುಂದಾಗಿದೆ.

ಮಾನಸಿಕವಾಗಿ ಅಸ್ವಸ್ಥವಾಗಿರುವ ಮಕ್ಕಳ ಆರೈಕೆ ಮತ್ತು ಸಂರಕ್ಷಣೆ ಉದ್ದೇಶದಿಂದ ಪ್ರತ್ಯೇಕ ವಸತಿ ನಿಲಯಗಳನ್ನು ಆರಂಭಿಸಲು ಸರ್ಕಾರ ಮುಂದಾಗಿದೆ. ಇದಲ್ಲದೆ ಜನನದ ನಂತರ ಲೈಂಗಿಕ ಅಲ್ಪಸಂಖ್ಯಾತರಾಗಿ ಪರಿವರ್ತನೆಯಾಗುವ ಮಕ್ಕಳನ್ನು ಕುಟುಂಬಗಳು ನಿರ್ಲಕ್ಷಿಸುತ್ತಿದ್ದು, ಈ ಕಾರಣದಿಂದ, ಅಂಥ ಮಕ್ಕಳ ಆರೈಕೆಗಾಗಿ ಪ್ರತ್ಯೇಕ ವಸತಿ ನಿಲಯಗಳನ್ನು ಯೋಜನೆ ಅಡಿಯಲ್ಲಿ ಪ್ರಾರಂಭಿಸಲು ಸರ್ಕಾರ ಮುಂದಾಗಿದೆ.

ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವ ಮಕ್ಕಳಿಗೆ, ಶಾಲಾ ಶಿಕ್ಷಣ ನೀಡಲು ಸಾಧ್ಯವಾಗದಿದ್ದ ಪಕ್ಷದಲ್ಲಿ, ವಿಶೇಷ ಶಿಕ್ಷಕರನ್ನು, ಶುಶ್ರೂಷಕಿಯರನ್ನು ಕಲ್ಪಿಸಲು ಸರ್ಕಾರ ಮಾರ್ಗಸೂಚಿ ಬಿಡುಗಡೆ ಮಾಡಿದೆ. ಈ ಮೂಲಕ ಅವರಿಗೆ ವೃತ್ತಿಪರ ಬದುಕಿಗೆ ಬೇಕಾಗುವ ಕೌಶಲಗಳು, ಬ್ರೈಲ್‌ಲಿಪಿ ಮತ್ತು ಸಂಜ್ಞೆ ಭಾಷೆಗಳನ್ನು ಕಲಿಸುವ ಕುರಿತು ಮಾರ್ಗಸೂಚಿಯಲ್ಲಿ ಉಲ್ಲೇಖಿಸಲಾಗಿದೆ.

ಒಟ್ಟಾರೆ, ಮಕ್ಕಳಿಗೆ ಸಿಗಬೇಕಾದ ಸವಲತ್ತುಗಳನ್ನು ಕಲ್ಪಿಸಿ, ಸರ್ಕಾರ ಪ್ರಜ್ಞಾವಂತ ಸಮಾಜ ನಿರ್ವಹಿಸಬೇಕಾದ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಲು ಪ್ರಯತ್ನಿಸುತ್ತಿದೆ.

EXAM DH ಪ್ರಜಾವಾಣಿ MASTERMIND™
'ಪ್ರಚಲಿತ' ಮಾಹಿತಿಗಾಗಿ..
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
'ಮಿಷನ್ ವಾತ್ಸಲ್ಯ' ಸೇರಿದಂತೆ, ನಾಗರಿಕ ಸೇವಾ ಪರೀಕ್ಷೆಗಳಿಗೆ ಅಗತ್ಯವಾದ ಮತ್ತಷ್ಟು ಪ್ರಚಲಿತ ವಿದ್ಯಮಾನಗಳ ಕುರಿತ ಸಂಪೂರ್ಣ ಮಾಹಿತಿ, ವಿಡಿಯೊಗಳಿಗಾಗಿ ಪ್ರಜಾವಾಣಿ – ಡೆಕ್ಕನ್‌ಹೆರಾಲ್ಡ್ ಪತ್ರಿಕೆಯ 'ಮಾಸ್ಟರ್ ಮೈಂಡ್' ಇ –ಪೇಪರ್‌ಗೆ ಚಂದಾದಾರರಾಗಿ. ಚಂದಾಕ್ಕಾಗಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.
www.exammastermind.com

ಅಮಿತ್ ಶಾ ಜತೆ ರಾಜ್ಯ ರಾಜಕಾರಣದ ಬಗ್ಗೆ ಚರ್ಚೆ

ಸಿ.ಎಂ ಬದಲಾಗಲ್ಲ: ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಬದಲಾವಣೆ ಇಲ್ಲ. ಬಸವರಾಜ ಬೊಮ್ಮಾಯಿ ಅವರು ತಮ್ಮ ಅವಧಿಯನ್ನು ಪೂರ್ಣಗೊಳಿಸಲಿದ್ದಾರೆ' ಎಂದು ಬಿಜೆಪಿಯ ಹಿರಿಯ ನಾಯಕ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, 'ಕರ್ನಾಟಕದಲ್ಲಿ 3ನೇ ಮುಖ್ಯಮಂತ್ರಿಯ ಕಾಲ ಸನ್ನಿಹಿತ ಎನ್ನುವ ಕಾಂಗ್ರೆಸ್ ಟ್ವೀಟ್‌ನಲ್ಲಿ ಯಾವುದೇ ಸತ್ಯಾಂಶವಿಲ್ಲ. ಅದಕ್ಕೆ ಬೆಲೆ ಕೊಡುವ ಅಗತ್ಯವೂ ಇಲ್ಲ' ಎಂದು ತಿಳಿಸಿದರು.

'ವಿಧಾನಸಭೆ ಚುನಾವಣೆಗೆ ಇನ್ನು ಏಳೆಂಟು ತಿಂಗಳು ಬಾಕಿ ಇರುವಾಗ ಮುಖ್ಯಮಂತ್ರಿ ಬದಲಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅಮಿತ್ ಶಾ ಅವರು ಬೆಂಗಳೂರಿಗೆ ಬಂದಿದ್ದ ಸಂದರ್ಭದಲ್ಲಿ ನಾಯಕತ್ವ ಬದಲಾವಣೆ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲ. ಆದರೆ, ರಾಜ್ಯ ರಾಜಕಾರಣದ ಬೆಳವಣಿಗೆಗಳ ಬಗ್ಗೆ ಅವರೊಂದಿಗೆ ಚರ್ಚೆ ನಡೆಸಿದ್ದೇನೆ' ಎಂದರು.

'ರಾಜ್ಯ ಘಟಕದ ಅಧ್ಯಕ್ಷರ ಅವಧಿ ಮುಗಿಯಲಿದ್ದು, ಆ ಸ್ಥಾನಕ್ಕೆ ಬದಲಾವಣೆ ಮಾಡಬಹುದು. ಈ ವಿಚಾರದಲ್ಲಿ ಪಕ್ಷದ ವರಿಷ್ಠರು ತೀರ್ಮಾನ ಮಾಡಲಿದ್ದಾರೆ. ಬೊಮ್ಮಾಯಿ ಅವರು ಸಚಿವ ಸಂಪುಟ ವಿಸ್ತರಣೆ ಮತ್ತು ಇತರ ವಿಷಯಗಳ ಬಗ್ಗೆ ಗಮನಹರಿಸಲಿದ್ದಾರೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ಯಾವುದೇ ಕಾರಣಕ್ಕೂ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರದಂತೆ ನೋಡಿಕೊಳ್ಳುತ್ತೇವೆ. ಕಾಂಗ್ರೆಸ್ ನಾಯಕರು ಮುಖ್ಯಮಂತ್ರಿ ಆಗುವ ಭ್ರಮೆಯಲ್ಲಿದ್ದಾರೆ. ಅವರಲ್ಲಿ ಯಾರೊಬ್ಬರೂ ಮುಖ್ಯಮಂತ್ರಿ ಆಗುವುದಿಲ್ಲ. ಬಿಜೆಪಿಯೇ ಅಧಿಕಾರಕ್ಕೆ ಬಂದು ನಮ್ಮವರೇ ಮುಖ್ಯಮಂತ್ರಿ ಆಗುತ್ತಾರೆ. ಎಲ್ಲ ನಾಯಕರೂ ಸಾಮೂಹಿಕವಾಗಿ ಪ್ರವಾಸ ಮಾಡಿ 135 ಸೀಟುಗಳನ್ನು ಗೆಲ್ಲುವ ಮೂಲಕ ಪುನಃ ಬಿಜೆಪಿಯನ್ನು ಅಧಿಕಾರಕ್ಕೆ ತರುತ್ತೇವೆ. ಮಂತ್ರಾಲಯ ಪ್ರವಾಸ ಮುಗಿಸಿ ಬಂದ ನಂತರ ಎಲ್ಲ ನಾಯಕರ ಜತೆ ರಾಜ್ಯ ಪ್ರವಾಸ ಮಾಡುತ್ತೇನೆ' ಎಂದು ಯಡಿಯೂರಪ್ಪ ತಿಳಿಸಿದರು.

ಬಿಎಸ್‌ವೈ–ಶೆಟ್ಟರ್ ಚರ್ಚೆ

ಬಿಜೆಪಿ ಶಾಸಕ ಜಗದೀಶ ಶೆಟ್ಟರ್ ಬುಧವಾರ ಮಧ್ಯಾಹ್ನ ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಪ್ರಸಕ್ತ ರಾಜಕೀಯ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಿದರು. ಸುಮಾರು ಒಂದು ಗಂಟೆ ಕಾಲ ಇಬ್ಬರೇ ಮಾತುಕತೆ ನಡೆಸಿದರು ಎಂದು ಮೂಲಗಳು ಹೇಳಿವೆ.

ಈ ಕುರಿತು ಪ್ರತಿಕ್ರಿಯಿಸಿರುವ ಯಡಿಯೂರಪ್ಪ, 'ಜಗದೀಶ ಶೆಟ್ಟರ್ ಮಾಜಿ ಮುಖ್ಯಮಂತ್ರಿ, ಹಿರಿಯ ನಾಯಕ ಮನೆಗೆ ಬಂದಿದ್ದರು. ರಾಜ್ಯದ ರಾಜಕೀಯ ಸ್ಥಿತಿಗತಿ ಬಗ್ಗೆ ಮಾತನಾಡಿದ್ದೇವೆ. ಪಕ್ಷದ ನಾಯಕರು ಮನೆಗೆ ಬಂದು ಚರ್ಚೆ ನಡೆಸುವುದು ಸಾಮಾನ್ಯ' ಎಂದು ತಿಳಿಸಿದರು.

ಸಿಎಂಗೆ ರಾಜಕೀಯ ಕೋವಿಡ್: ಹರಿಪ್ರಸಾದ್ ಸಂಶಯ

'ಯಾವ ಕಾರಣಕ್ಕೆ ಅಮಿತ್ ಶಾ ರಾಜ್ಯಕ್ಕೆ ಬಂದು ಹೋದರು ಎಂಬುವುದನ್ನು ಯಾರೊಬ್ಬರೂ ಹೇಳುತ್ತಿಲ್ಲ. ಮುಖ್ಯಮಂತ್ರಿಗೆ ಕೋವಿಡ್ ಬಂದಿದೆಯೋ ಅಥವಾ ರಾಜಕೀಯ ಕೋವಿಡ್ ಬಂದಿದೆಯೋ ಎಂಬ ಅನುಮಾನವಿದೆ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಅಮಿತ್ ಶಾ ಯಾವುದೇ ರಾಜ್ಯಕ್ಕೆ ಹೋದರೂ ಬದಲಾವಣೆ ಆಗುತ್ತದೆ. ಬಿಜೆಪಿ ಶಾಸಕರಿಗೆ ವೀಳ್ಯದೆಲೆ ಶಾಸ್ತ್ರ ಮಾಡಲು ಶಾ ಇಲ್ಲಿಗೆ ಬಂದಿದ್ದರೇ' ಎಂದೂ ಪ್ರಶ್ನಿಸಿದರು.

'ರಾಜ್ಯ ಸರ್ಕಾರದಲ್ಲಿ ನಾಯಕತ್ವ ಬದಲಾವಣೆ ವಿಚಾರವಾಗಿ ಅವರದೇ ಪಕ್ಷದ ನಾಯಕರು ಮುನ್ಸೂಚನೆ ನೀಡಿದ್ದಾರೆ. ಯತ್ನಾಳ್ ಅವರ ಪ್ರಕಾರ ಮುಖ್ಯಮಂತ್ರಿ ಆಗಬೇಕಾದರೆ ₹ 2,500 ಕೋಟಿ ಬೇಕಿದೆ. ಶಾ ಅವರು ಬಂದು ಹೋದ ಬಳಿಕ ಯಡಿಯೂರಪ್ಪ ಹಾಗೂ ಬೊಮ್ಮಾಯಿ ನಂತರ ಮತ್ತೊಬ್ಬರು ಈ ಹಣ ಪಾವತಿಸಿರಬೇಕು. ಅದಕ್ಕಾಗಿ ಮುಖ್ಯಮಂತ್ರಿ ಬದಲಾವಣೆ ಮಾಡಲು ಮುಂದಾಗಿದ್ದಾರೆ. ಇದು ಹೊಸತೇನಲ್ಲ' ಎಂದರು.

'ಬಿಜೆಪಿಗರೇ ಮಾತನಾಡುತ್ತಿದ್ದಾರೆ'

ಬೆಂಗಳೂರು: 'ಮುಖ್ಯಮಂತ್ರಿ ಬದಲಾವಣೆ ವಿಚಾರದಲ್ಲಿ ಬಿಜೆಪಿಯವರೇ ಮಾತನಾಡುತ್ತಿದ್ದಾರೆ. ಅವರ ಹೇಳಿಕೆ ಕುರಿತು ನಾವು ಚರ್ಚೆ ಮಾಡಿದ್ದೇವೆ ಅಷ್ಟೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಬಿಜೆಪಿಯ ಮಾಜಿ ಶಾಸಕರು, ಸಚಿವರು ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಮಾತನಾಡಿದ್ದಾರೆ. ನಾವು ಯಾರಿಗೂ ಈ ಬಗ್ಗೆ ಮಾತನಾಡಿ ಎಂದು ಹೇಳಿರಲಿಲ್ಲ. ಅವರು (ಬಿಜೆಪಿಯವರು) ಮೂರು ಮುಖ್ಯಮಂತ್ರಿಯನ್ನಾದರೂ ಮಾಡಲಿ, ನಾಲ್ಕು ಜನರನ್ನಾದರೂ ಮಾಡಲಿ. ಅದು ಅವರಿಗೆ ಬಿಟ್ಟ ವಿಚಾರ' ಎಂದರು.

'ಮುಖ್ಯಮಂತ್ರಿ ಬದಲಾವಣೆ ವಿಚಾರದ ಬಗ್ಗೆ ನನಗೆ ಗೊತ್ತಿಲ್ಲ' ಎಂದು ಸಿದ್ದರಾಮಯ್ಯ ನೀಡಿದ ಹೇಳಿಕೆ ಬಗ್ಗೆ ಕೇಳಿದಾಗ, 'ಕೆಲವರಿಗೆ ಕೆಲವು ಮಾಹಿತಿ ಇರುತ್ತದೆ. ಬಿಜೆಪಿ ಮಾಜಿ ಶಾಸಕರೇ ಈ ವಿಚಾರ ಚರ್ಚೆ ಮಾಡಿದ್ದಾರೆ' ಎಂದರು.

ಮುಖ್ಯಮಂತ್ರಿ ಆಡಳಿತ ವೈಖರಿ ನೋಡಿ ಕಾಂಗ್ರೆಸ್ಸಿನವರಿಗೆ ತಲೆ ಕೆಟ್ಟು ಹೋಗಿದೆ. ಸುಳ್ಳು ಹೇಳಿ ವರ್ಚಸ್ಸು ಜಾಸ್ತಿ ಮಾಡಿಕೊಳ್ಳಲು ಹೊರಟಿದ್ದಾರೆ. ಆದರೆ, ಜನ ಅವರನ್ನು ನೋಡಿ ನಗುತ್ತಾರೆ
ಆರಗ ಜ್ಞಾನೇಂದ್ರ, ಗೃಹ ಸಚಿವ

ಸಿ.ಎಂ ಬದಲಾವಣೆ ಹೈಕಮಾಂಡ್‌ಗೆ ಬಿಟ್ಟದ್ದು. ಕಾಂಗ್ರೆಸ್‌ನವರು ಅವಸರದವರು. ದಾವಣಗೆರೆ ಸಮಾವೇಶದ ಬಳಿಕ ಜನ ಎಲ್ಲ ಡಬ್ಬಗಳನ್ನು ತುಂಬುತ್ತಾರೆ ಎಂಬ ಭ್ರಮೆಯಲ್ಲಿ ಅವರಿದ್ದಾರೆ
ಎಚ್. ವಿಶ್ವನಾಥ್, ವಿಧಾನಪರಿಷತ್ ಸದಸ್ಯ

ಕಾಂಗ್ರೆಸ್ಸಿನವರು ಭ್ರಮೆಯಲ್ಲಿದ್ದಾರೆ. ರಾಜ್ಯದಲ್ಲಿ ಸುಸ್ಥಿರ ಸರ್ಕಾರ ಅಧಿಕಾರದಲ್ಲಿದೆ. ಮುಂದಿನ ಬಾರಿಯೂ ನಾವೇ ಅಧಿಕಾರಕ್ಕೆ ಬರುತ್ತೇವೆ.
ಕೋಟ ಶ್ರೀನಿವಾಸಪೂಜಾರಿ, ಸಮಾಜ ಕಲ್ಯಾಣ ಸಚಿವ

ಒಳ ಜಗಳವನ್ನು ಮುಚ್ಚಿ ಹಾಕಲು ಕಾಂಗ್ರೆಸ್ಸಿನವರು ಸಿಎಂ ಬದಲಾಗಲಿದ್ದಾರೆ ಎನ್ನುತ್ತಿದ್ದಾರೆ. ಸಿದ್ದರಾಮಯ್ಯ ಅಥವಾ ಕಾಂಗ್ರೆಸ್‌ಗೆ ಸಿ.ಎಂ ಬದಲಾವಣೆ ಬಗ್ಗೆ ಮಾತನಾಡಲು ಏನು ಅಧಿಕಾರ ಇದೆ?
ಆರ್.ಅಶೋಕ, ಕಂದಾಯ ಸಚಿವ

ಮಳೆ ನಿಂತರೂ ನಿಲ್ಲದ ಕುಸಿತ, ಹಾನಿ

ಇಬ್ಬರು ಮಹಿಳೆಯರು ಸೇರಿ 4 ಮಂದಿ ಸಾವು ● ಬ್ಯಾರೇಜುಗಳು ಮುಳುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ವರುಣನ ಆರ್ಭಟ ಕಡಿಮೆಯಾಗಿದ್ದರೂ ಹಾನಿ ನಿಂತಿಲ್ಲ. ಜಲಾಶಯಗಳಿಂದ ಅಪಾರ ಪ್ರಮಾಣದಲ್ಲಿ ನೀರು ಬಿಟ್ಟಿರುವುದರಿಂದ ನೂರಾರು ಎಕರೆ ಜಲಾವೃತಗೊಂಡಿದೆ. ಮಳೆ ಸಂಬಂಧಿತ ಅವಘಡಗಳಲ್ಲಿ ಇಬ್ಬರು ಮಹಿಳೆಯರು ಸೇರಿ ನಾಲ್ಕು ಮಂದಿ ಮೃತಪಟ್ಟಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಕೆ.ತಲಗೂರಿನಲ್ಲಿ ಮಂಗಳವಾರ ತಡರಾತ್ರಿ ಮನೆಯೊಂದರ ಮೇಲೆ ಬೃಹತ್ ಮರ ಉರುಳಿದೆ. ಮನೆಯೊಳಗೆ ಮಲಗಿದ್ದ ಸರಿತಾ (37) ಸ್ಥಳದಲ್ಲೇ ಮೃತಪಟ್ಟಿದ್ದು, ಆಸ್ಪತ್ರೆಗೆ ಒಯ್ಯುವಾಗ ಚಂದ್ರಮ್ಮ (55) ಸಾವಿಗೀಡಾಗಿದ್ದಾರೆ.

ಸರಿತಾ ಮತ್ತು ಚಂದ್ರಮ್ಮ ನೆರೆಹೊರೆ ಮನೆಯವರು ಹಾಗೂ ಸಂಬಂಧಿಕರು. ಮನೆ ಶಿಥಿಲವಾಗಿದ್ದರಿಂದ ಸರಿತಾ ಅವರು ರಾತ್ರಿ ಮೂವರು ಮಕ್ಕಳೊಂದಿಗೆ ಚಂದ್ರಮ್ಮ ಅವರ ಮನೆಗೆ ಬಂದು ಮಲಗಿದ್ದರು. ಮಕ್ಕಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನ ಯದ್ದಲದೊಡ್ಡಿ ಗ್ರಾಮದಲ್ಲಿ ಮಂಗಳವಾರ ಮನೆ ಗೋಡೆ ಕುಸಿದು ಲಾಲಪ್ಪ ದರಗಪ್ಪ (6) ಹಾಗೂ ಹಾವೇರಿ ಜಿಲ್ಲೆಯ ತಡಸದ ಕುನ್ನೂರು ಗ್ರಾಮದಲ್ಲಿ ತಡರಾತ್ರಿ ಮನೆಯ ಗೋಡೆ ಕುಸಿದು ಮುಸ್ತಾಖ ಶರೀಫಸಾಬ್ ಯರಗುಪ್ಪಿ (28) ಮೃತಪಟ್ಟಿದ್ದಾರೆ.

ತುಂಗಭದ್ರಾ ಜಲಾಶಯದಿಂದ ಅಪಾರ ಪ್ರಮಾಣದಲ್ಲಿ ನೀರು ಬರುತ್ತಿರುವ ಕಾರಣ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಪಂಪಾಸರೋವರ ಸಮೀಪದ ಬಾಳೆ ತೋಟಕ್ಕೆ ಮತ್ತು ಹನುಮನಹಳ್ಳಿ ಬಳಿ ಭತ್ತದ ಬೆಳೆಗೆ ನೀರು ನುಗ್ಗಿದೆ. ಹುಲಿಗಿ ಸಮೀಪದ ಶಿವಪುರ ಗಡ್ಡೆಯಲ್ಲಿರುವ ಹೊಲದಲ್ಲಿ ಕೆಲಸ ಮಾಡಲು ಹೋಗಿದ್ದ ಹುಲಿಗಿ ಗ್ರಾಮದ ಒಂಬತ್ತು ರೈತರನ್ನು ತಾಲ್ಲೂಕು ಆಡಳಿತ ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ರಕ್ಷಿಸಿದ್ದಾರೆ.

ತುಂಗಭದ್ರಾ ನದಿಯಲ್ಲಿ ನೀರಿನ ಹರಿವು ಹೆಚ್ಚಾಗಿರುವುದರಿಂದ ವಿಜಯನಗರ ಜಿಲ್ಲೆಯ ಹರಪನಹಳ್ಳಿ, ಹೂವಿನಹಗಡಲಿ, ಬಳ್ಳಾರಿ ಜಿಲ್ಲೆಯ ಕಂಪ್ಲಿಯಲ್ಲಿ ಅಪಾರ ಪ್ರಮಾಣದ ನೀರು ಗದ್ದೆ, ಜನವಸತಿ ಪ್ರದೇಶಗಳಿಗೆ ನುಗ್ಗಿದೆ. ಕಂಪ್ಲಿಯ ವೆಂಕಟರಮಣ ದೇವಸ್ಥಾನ, ಗಂಗಮ್ಮನ ಕಟ್ಟೆ ಸುತ್ತ ಅಪಾರ ಪ್ರಮಾಣದ ನೀರು ಸಂಗ್ರಹವಾಗಿದೆ.

ಐತಿಹಾಸಿಕ ಕುಮಾರರಾಮನ ಕೋಟೆ ಹೆಬ್ಬಾಗಿಲು ಹಾಗೂ ಹರಪನಹಳ್ಳಿಯ ನಂದ್ಯಾಲ- ನಿಟ್ಟೂರು ಸಂಪರ್ಕ ರಸ್ತೆ ಜಲಾವೃತವಾಗಿದೆ. ಬನವಾಸಿ ರಸ್ತೆಯ ಕಿರು ಸೇತುವೆ ಮುಳುಗಡೆಯಾಗಿದೆ. ಭತ್ತ, ಮೆಕ್ಕೆಜೋಳದ ಗದ್ದೆಗಳಲ್ಲಿ ಅಪಾರ ನೀರು ಸಂಗ್ರಹಗೊಂಡಿದೆ.

ಹೂವಿನಹಡಗಲಿ ತಾಲ್ಲೂಕಿನ ಬ್ಯಾಲಹುಣ್ಸಿ-ಮಕರಬ್ಬಿ ಸಂಪರ್ಕ ಕಡಿತಗೊಂಡಿದೆ. ನದಿ ತೀರದ ನೂರಾರು ಎಕರೆ ಬೆಳೆಗಳು ಜಲಾವೃತವಾಗಿವೆ. ಮದಲಗಟ್ಟಿ ಆಂಜನೇಯ ದೇವಸ್ಥಾನಕ್ಕೆ ನೀರು ಸುತ್ತುವರಿದಿದೆ.

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಘಟಪ್ರಭಾ ನದಿ ಉಕ್ಕಿ ಹರಿಯುತ್ತಿದ್ದು, ಒಂಬತ್ತು ಬ್ಯಾರೇಜುಗಳು ಮುಳುಗಡೆಯಾಗಿವೆ. ಹೊಲಗಳಿಗೆ ನೀರು ನುಗ್ಗಿದೆ. ಮುಧೋಳ, ಮಿರ್ಜಿ, ಚನ್ನಾಳ, ಜಾಲಿಬೇರಿ, ಜಿರಗಾಳ, ಅಂತಾಪುರ, ಕಸಬಾ ಜಂಬಗಿ, ಆಲಗುಂಡಿ ಬಿಕೆ ಹಾಗೂ ತಿಮ್ಮಾಪುರ ಬ್ಯಾರೇಜುಗಳು ಮುಳುಡೆಯಾಗಿವೆ.

ಮಹಾರಾಷ್ಟ್ರದಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ ಕೃಷ್ಣಾ ಹಾಗೂ ಅದರ ಉಪ ನದಿಗಳ ನೀರಿನ ಮಟ್ಟ ಏರಿಕೆಯಾಗಿದೆ. ರಾಯಬಾಗ ತಾಲ್ಲೂಕಿನ ಕುಡಚಿ ಸೇತುವೆ ಮೇಲೆ ಕೃಷ್ಣಾ ನದಿ ನೀರು ಹರಿದು ಸಂಚಾರ ಬಂದ್ ಆಗಿದೆ. ಇದರಿಂದ ಮಹಾರಾಷ್ಟ್ರದ ಸಾಂಗ್ಲಿ, ಮೀರಜ್ ಮಾರ್ಗದ ಸಂಚಾರ ಸ್ಥಗಿತಗೊಂಡಿದೆ. ಅದೇ ರೀತಿ ಚಿಕ್ಕೋಡಿ, ನಿಪ್ಪಾಣಿ, ಗೋಕಾಕ ತಾಲ್ಲೂಕಿನ 20 ಕಿರು ಸೇತುವೆಗಳ ಮೇಲೆ ನೀರು ಹರಿಯುತ್ತಿದೆ.

ಮೈಸೂರು ಭಾಗದ ಕೊಡಗು, ಹಾಸನದಲ್ಲಿ ಮಳೆ ನಿಂತರೂ ಹಾನಿ, ಮಣ್ಣು ಕುಸಿತ, ಮನೆ ಕುಸಿತ ನಿಂತಿಲ್ಲ. ಕಾಫಿ ಕಾಯಿ, ಕಾಳು ಮೆಣಸು ಗಿಡದಿಂದ ಉದುರುತ್ತಿವೆ.

ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಟಿ.ವಡ್ಡರ ಕಾಲೊನಿ ಗ್ರಾಮದಲ್ಲಿ ಮನೆ ಗೋಡೆ ಕುಸಿದು ಗಂಗಾಭೋವಿ ಅವರ ಪತ್ನಿ ಸಲ್ಲಾಪುರಿ ಗಂಭೀರವಾಗಿ ಗಾಯಗೊಂಡರು. ಮಲಗಿದ್ದಾಗಲೇ ಮಣ್ಣಿನಲ್ಲಿ ಸಿಲುಕಿದ್ದ ದಂಪತಿಯನ್ನು ಸ್ಥಳೀಯರು ರಕ್ಷಿಸಿ ಹಾಸನದ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಬೇಲೂರು– ಮೂಡಿಗೆರೆ ರಸ್ತೆಯ ಚೀಕನಹಳ್ಳಿ ಸಮೀಪ ಮೂರು ವಿದ್ಯುತ್ ಕಂಬಗಳು ಉರುಳಿ ವಾಹನಗಳ ಸಂಚಾರಕ್ಕೆ ತೊಂದರೆಯಾಯಿತು. ಸಕಲೇಶಪುರ ತಾಲ್ಲೂಕಿನ ನಿಡಿಗೆರೆಯ ಗೌರಮ್ಮ ಅವರ ಮನೆ, ಹೆತ್ತೂರು ಹೋಬಳಿಯ ಬಾಚ್ಚಿಹಳ್ಳಿಯ ನವೀನ್ ಅವರ ಮನೆ ಕುಸಿದಿದೆ.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಆಸುಪಾಸಿನಲ್ಲಿ ಕಾವೇರಿ ನದಿ ಪ್ರವಾಹ ಪರಿಸ್ಥಿತಿ ಮುಂದುವರಿದಿದ್ದು, ತಾಲ್ಲೂಕಿನ ವಿವಿಧೆಡೆ ಹತ್ತಕ್ಕೂ ಹೆಚ್ಚು ದೇವಾಲಯಗಳು ಜಲಾವೃತವಾಗಿವೆ.

ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ತುಂಗಭದ್ರಾ ನದಿಯಲ್ಲಿ ಪ್ರವಾಹ ಮುಂದುವರಿದಿದ್ದು, ಸುಕ್ಷೇತ್ರ ಉಕ್ಕಡಗಾತ್ರಿ ಸಂಪರ್ಕಿಸುವ ಫತ್ಯಾಪುರ, ತುಮ್ಮಿನಕಟ್ಟಿ ಮಾರ್ಗದ ರಸ್ತೆ ಜಲಾವೃತವಾಗಿದೆ. ಕರಿಬಸವೇಶ್ವರ ಗದ್ದುಗೆಯ ಸ್ನಾನಘಟ್ಟ, ಜವಳದ ಕಟ್ಟೆ ಮುಳುಗಿವೆ. ನದಿ ಹಿನ್ನೀರಿನಿಂದಾಗಿ ಸಾರಥಿ ಗ್ರಾಮದ ಸ್ಮಶಾನ ಸಂಪೂರ್ಣ ಜಲಾವೃತವಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಕೊಗ್ರೆ – ಹೊರನಾಡು ಸಂಪರ್ಕ ರಸ್ತೆ ನಿಡಂಡ ಪ್ರದೇಶದಲ್ಲಿ ಬಿರುಕಾಗಿದೆ. ಶಿವಮೊಗ್ಗ ಜಿಲ್ಲೆ ಲಿಂಗನಮಕ್ಕಿ ಜಲಾಶಯ ಭರ್ತಿಯಾಗುವ ಹಂತ ತಲುಪಿದೆ.



ಬಳ್ಳಾರಿ ಜಿಲ್ಲೆಯ ಕಂಪ್ಲಿ ತಾಲ್ಲೂಕು ಇಟಗಿ ಗ್ರಾಮದ ಬಳಿಯ ನಾರಿಹಳ್ಳ ಸೇತುವೆ ತುಂಗಭದ್ರಾ ನದಿ ಹಿನ್ನೀರಿನಿಂದ ಮುಳುಗಿದ್ದು, ಬೈಕ್‌ಗಳನ್ನು ತೆಪ್ಪದಲ್ಲಿ ಹಾಕಿಕೊಂಡು ಜನರು ಗ್ರಾಮ ತಲುಪುತ್ತಿರುವುದು ಬುಧವಾರ ಕಂಡುಬಂತು

ಗುಡ್ಡ ಬಿರುಕು: ರಾತ್ರಿ ಸಂಚಾರ ನಿಷೇಧ

ಕೊಡಗು: ಜಿಲ್ಲೆಯ ಮಂಗಳೂರು-ಮಡಿಕೇರಿ ರಸ್ತೆಯಲ್ಲಿ ಮದೆನಾಡು ಸಮೀಪ ಬಿರುಕು ಬಿಟ್ಟ ಗುಡ್ಡ ಜಾರುತ್ತಿದ್ದು, ಬುಧವಾರದಿಂದ ರಾತ್ರಿ ವೇಳೆ ಸಂಚಾರ ನಿಷೇಧಿಸಲಾಗಿದೆ. ಗುರುವಾರ ರಾತ್ರಿ 8.30ರಿಂದ ಶುಕ್ರವಾರ ಬೆಳಿಗ್ಗೆ 6.30ರ ವರೆಗೆ ನಿಷೇಧ ಮುಂದುವರಿಯಲಿದೆ.

ಸೋಮವಾರಪೇಟೆ ತಾಲ್ಲೂಕಿನ ಹರಪಳ್ಳಿಯಲ್ಲಿ ಒಮ್ಮೆಲೇ ನೀರು ಉಕ್ಕಿ, ಭಾರಿ ಭೂ ಕುಸಿತವಾಗಿದೆ. ಸಮೀಪದಲ್ಲೇ ವಾಸವಿದ್ದ ಕೃಷಿಕ ಎಚ್.ಎ.ಸೋಮಯ್ಯ ಸುರಕ್ಷಿತ ಸ್ಥಳಕ್ಕೆ ತೆರಳಿದ್ದಾರೆ. ಕೆಳಭಾಗದ ಗದ್ದೆಗಳು ಮಣ್ಣಿನಿಂದ ಆವೃತವಾಗಿವೆ. ಮೇಲ್ಭಾಗದಲ್ಲಿ ಬೃಹತ್ ಬಿರುಕು ಬಿಟ್ಟಿದೆ. ಮಡಿಕೇರಿಯ ಸ್ಟೋನ್ ಹಿಲ್ ಕೆಳಭಾಗದಲ್ಲೂ ಕಾಡಿನ ಮಧ್ಯೆ ಭೂಕುಸಿತವಾಗಿದೆ. ಮಡಿಕೇರಿ-ಮಾದಾಪುರ ರಸ್ತೆಗೆ ಮಣ್ಣು ಕುಸಿದಿದೆ.

ಬಾಲಕಿಯ ಮೃತದೇಹ ಪತ್ತೆ

ಬೈಂದೂರು (ಉಡುಪಿ): ಕಾಲ್ತೋಡು ಗ್ರಾಮದ ಬಿಜಮಕ್ಕಿ ಎಂಬಲ್ಲಿ ಸೋಮವಾರ ಕಾಲುಸಂಕದ ಮೂಲಕ ಹಳ್ಳ ದಾಟುತ್ತಿದ್ದಾಗ ಕಾಲು ಜಾರಿ ನೀರಿಗೆ ಬಿದ್ದಿದ್ದ ವಿದ್ಯಾರ್ಥಿನಿ ಸನ್ನಿಧಿ (7) ಮೃತದೇಹ ಬುಧವಾರ ಸಂಜೆ ಪತ್ತೆಯಾಗಿದೆ.

ಎಂಟು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್'

ಬೆಂಗಳೂರು: ಕರಾವಳಿಯ ಜಿಲ್ಲೆಗಳು ಸೇರಿ ರಾಜ್ಯದ ಎಂಟು ಜಿಲ್ಲೆಗಳಿಗೆ ಗುರುವಾರ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದ್ದು, ರಾಜ್ಯದ ಕೆಲವೆಡೆ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕೊಡಗು, ಹಾಸನ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಉಡುಪಿ, ಶಿವಮೊಗ್ಗ, ಉತ್ತರ ಕನ್ನಡ ಹಾಗೂ ಬೆಳಗಾವಿ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಗುರುವಾರ ಹಾಗೂ ಶುಕ್ರವಾರ ಕರಾವಳಿಯ ಎಲ್ಲ ಜಿಲ್ಲೆಗಳು, ಉತ್ತರ ಒಳನಾಡಿನ ಬೆಳಗಾವಿ, ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಹಾಸನ, ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಒಂದೆರಡು ಕಡೆ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	122.53	98,670	96,985
ಹಾರಂಗಿ	2,859	2,854.31	5,980	3,850
ಕಬಿನಿ	2,284	2,282	32,747	10,000
ಹೇಮಾವತಿ	2,922	2,921	43,737	50,950
ಲಿಂಗನಮಕ್ಕಿ	1,819	1,807	51,021	1,550
ಸೂಪಾ (ಮೀ)	564	544.90	23,408	-
ಮಾಣಿ	594	586	4,944	-
ತುಂಗಭದ್ರಾ	1,633	1,631.54	1,92,178	1,80,969
ಮಲಪ್ರಭಾ	2079.5	2,073.50	15,352	294
ಘಟಪ್ರಭಾ	2175	2,168.43	29,129	161
ಭದ್ರಾ	186	182	35,548	46,520
ಆಲಮಟ್ಟಿ (ಮೀ)	519.6	519.16	1,02,186	2,00,000
ನಾರಾಯಣಪುರ (ಮೀ)	492.25	491.41	1,30,000	1,26,836

* ನೆಲಮಟ್ಟದಿಂದ

ರಕ್ಷಾ ಬಂಧನ ರಕ್ಷಣೆಯ ಸಂಕಲ್ಪ



• ರಾಮಸುಬ್ರಾಯ ಶೇಟ್

ಭಾರತೀಯರಿಗೆ ರಕ್ಷಾ ಬಂಧನ ಒಂದು ಪ್ರಮುಖ ಆಚರಣೆ ಮತ್ತು ನಂಬುಗೆ. ಇದಕ್ಕೆ ಪೌರಾಣಿಕ ಹಾಗೂ ಚಾರಿತ್ರಿಕ ಹಿನ್ನೆಲೆಗಳಿವೆ.

ಒಮ್ಮೆ ಶ್ರೀಕೃಷ್ಣನ ನಿವಾಸದಲ್ಲಿ ವಿಶೇಷ ಕಾರ್ಯಕ್ರಮ ಏರ್ಪಡಿಸಲ್ಪಟ್ಟಿತ್ತು. ಅತಿಥಿಗಳೆಲ್ಲಾ ಸೇರಿದ್ದಾರೆ; ಎಲ್ಲರನ್ನೂ ಸ್ವಾಗತಿಸುತ್ತಿದ್ದ ಶ್ರೀಕೃಷ್ಣನೇ ಹಣ್ಣುಗಳನ್ನು ಕತ್ತರಿಸುತ್ತಿದ್ದಾನೆ. ಪ್ರಮಾದವಶಾತ್ ಹರಿತವಾದ ಕತ್ತಿಯು ಕೃಷ್ಣನ ಕೈಗೆ ತಗುಲಿ, ರಕ್ತ ಚಿಮ್ಮುತ್ತದೆ. ನೆರೆದವರೆಲ್ಲಾ ಅಯ್ಯೋ ರಕ್ತ, ರಕ್ತ, ಬಟ್ಟೆ ಬಟ್ಟೇ ಎಂದು ಬಟ್ಟೆಗಾಗಿ ಹುಡುಕುತ್ತಿದ್ದಾಗ ಅಲ್ಲಿದ್ದ ಪಾಂಚಾಲಿ ತಾನುಟ್ಟ ಜರತಾರಿ ಸೀರೆಯನ್ನು ಸರ್ರನೆ ಹರಿದು ಕೃಷ್ಣನ ಕೈಗೆ ಕಟ್ಟುತ್ತಾಳೆ. ರಕ್ತ ನಿಲ್ಲುತ್ತದೆ. ಕೃಷ್ಣನು ಕೃತಜ್ಞತೆ ಸೂಚಿಸುತ್ತಾನೆ. ಆಕೆಯಲ್ಲಿ ಒಡಹುಟ್ಟಿದ ತಂಗಿಗಿಂತ ಹೆಚ್ಚಿನ ವಾತ್ಸಲ್ಯ ಮೂಡುತ್ತದೆ. ಕೃಷ್ಣೆಯ ರಕ್ಷಣೆಯ ಸಂಪೂರ್ಣ ಹೊಣೆಗಾರಿಕೆ ತನ್ನದೆಂಬ ದೃಢನಿರ್ಧಾರ ಅಂದು ಅವನ ಮನಸ್ಸಿನಲ್ಲಿ ಸ್ಥಿರವಾಗುತ್ತದೆ.

ಪಾಂಚಾಲಿಯ ಪರಿಣಯದ ಸಂದರ್ಭದಲ್ಲೂ ದ್ರೌಪದಿಯು ಕೃಷ್ಣನನ್ನು ಅಣ್ಣನೆಂದು ಗೌರವಿಸಿದರೆ, ಅವಳನ್ನು ತಂಗಿಯ ಸ್ಥಾನದಲ್ಲಿಯೇ ಕಂಡಿದ್ದ ಶ್ರೀಕೃಷ್ಣ. ಗುರಿ ತಲುಪಿ ಪಣವನ್ನು ಗೆದ್ದ ಅರ್ಜುನನ ಮೇಲೆ ಕೌರವರು ಹಲ್ಲೆಗೆ ಪ್ರಯತ್ನಿಸಿದಾಗ ಪಾಂಡವರಿಗೆ ಶ್ರೀಕೃಷ್ಣನೇ ರಕ್ಷಣೆ ನೀಡುತ್ತಾನೆ. ಮೋಸದ ಜೂಜಾಟದಲ್ಲಿ ಪಾಂಡವರನ್ನು ಸೋಲಿಸಿ ದ್ರೌಪದಿಯನ್ನು ಆಸ್ಥಾನಕ್ಕೆ ಕರೆತಂದು ಆಕೆಯ ಮಾನಭಂಗಕ್ಕೆ ಪ್ರಯತ್ನಿಸಿದಾಗ ಆಸ್ಥಾನದಲ್ಲಿ ಕುಳಿತಿದ್ದ ಭೀಷ್ಮ ದ್ರೋಣರೂ, ಭೀಮಾರ್ಜುನರೂ ಮೂಕಪ್ರೇಕ್ಷಕರಾಗಿದ್ದಾಗ ಕೃಷ್ಣೆಯು ಸಂಪೂರ್ಣ ಶ್ರೀಕೃಷ್ಣನ ಮೊರೆ ಹೋಗುತ್ತಾಳೆ. ತಕ್ಷಣ ಅಕ್ಷಯಾಂಬರ ನೀಡಿ ತಂಗಿಯನ್ನು ರಕ್ಷಿಸುತ್ತಾನೆ. ಆಕೆ ಅಂದುಕಟ್ಟಿದ ರಕ್ಷೆಗೆ ಇಂದು ಕೃಷ್ಣನಿಂದ ರಕ್ಷಣೆ ದೊರೆಯುತ್ತದೆ. ಅದೇ ರಕ್ಷಾಬಂಧನ!

ವಾಮನನಾಗಿ ಬಂದ ವಿಷ್ಣು, ಬಲಿಯನ್ನು ರಸಾತಲದ ಅಧಿಪತಿಯನ್ನಾಗಿ ಮಾಡಿದ ಮೇಲೆ ಭಕ್ತನಾದ ಬಲಿಯ ಬೇಡಿಕೆಯಂತೆ ಅವನ ನಿವಾಸದಲ್ಲಿಯೇ ವಾಸಿಸಬೇಕಾದ ಅನಿವಾರ್ಯತೆ ವಿಷ್ಣುವಿಗೆ. ಆ ಸಂದರ್ಭದಲ್ಲಿ ಮಹಾಲಕ್ಷ್ಮಿಯು ಬಲಿಗೆ ರಕ್ಷೆಯನ್ನು ಕಟ್ಟಿ ವಿಷ್ಣುವನ್ನು ಬಂಧನದಿಂದ ಬಿಡಿಸಿದ್ದಳು ಎಂಬ ಪ್ರತೀತಿ.

ಈ ಸಂಗತಿಗಳಿಂದ ರಕ್ಷಾಬಂಧನದ ಮಹತ್ವ ನಮಗೆ ಅರಿವಾಗುತ್ತದೆ. ಇದು ಭ್ರಾತೃತ್ವದ ಸಂಕೇತವಾದರೂ ಸಹೋದರನೇ ಸಹೋದರಿಯನ್ನು ಕಾಪಾಡಬೇಕೆಂದೇನೂ ಇಲ್ಲ. ಕೆಲವು ಸಂದರ್ಭಗಳಲ್ಲಿ ಸಹೋದರಿಯರೂ ಸಹೋದರರನ್ನು ರಕ್ಷಿಸಿದ ಸಂದರ್ಭಗಳಿವೆ. ‘ರಕ್ಷೆ’ ಅಥವಾ ‘ರಾಖಿ’ ಎಂದರೆ ಕೇವಲ ಒಂದು ದಾರವಲ್ಲ. ಹಿಂದೆ ಅನೇಕ ರಾಜರು ತಮ್ಮ ಶತ್ರುಗಳಿಗೆ ರಕ್ಷೆಯನ್ನು ಕಳುಹಿಸಿ ಮಿತ್ರತ್ವದ ಸಹಕಾರವನ್ನು ನಿರೀಕ್ಷಿಸಿದ ಐತಿಹ್ಯಗಳಿವೆ.

ನಮ್ಮ ರಾಷ್ಟ್ರದ ಗಡಿಯುದ್ದಕ್ಕೂ ಕಣ್ಣೆವೆಯನ್ನು ಮುಚ್ಚದೆ ಹಗಲೆನ್ನದೇ ರಾತ್ರಿ ಎನ್ನದೇ ಛಳಿ ಎನ್ನದೇ ಮಳೆ ಎನ್ನದೇ ಸದಾ ಸನ್ನದ್ಧರಾಗಿ ಗಡಿಯನ್ನು ಕಾಯುತ್ತಿರುವ ಯೋಧರು ಭಾರತಾಂಬೆಗೆ ರಕ್ಷಣೆಯ ಭರವಸೆಯನ್ನು ನೀಡಿದ್ದಾರೆ. ತಮ್ಮ ಪ್ರಾಣವನು ಪಣಕ್ಕಿಟ್ಟು ಭಾರತಾಂಬೆಯ ಸಹೋದರ–ಸಹೋದರಿಯರ ರಕ್ಷಣೆ ಮಾಡುತ್ತೇವೆಂಬ ದೃಢ ಪ್ರತಿಜ್ಞೆಯನ್ನು ಮಾಡಿ ರಕ್ಷಣೆಯ ತಪಸ್ಸಿನಲ್ಲಿ ತೊಡಗಿಸಿಕೊಂಡಿದ್ದಾರೆ. ತಮ್ಮ ಹೆಂಡತಿ ಮಕ್ಕಳ ಯೋಗಕ್ಷೇಮವನ್ನು ಬದಿಗೊತ್ತಿ, ಸಮಷ್ಟಿಯ ಹಿತಕ್ಕಾಗಿ ದೇಶದ ರಕ್ಷಣೆಗಾಗಿ ಶತ್ರುಗಳ ಗುಂಡೇಟಿಗೆ ತಮ್ಮ ಗುಂಡಿಗೆಯನ್ನೊಡ್ಡಿ ಹುತಾತ್ಮರಾಗುವ ಸೇನಾನಿಗಳು ಪ್ರತ್ಯಕ್ಷವಾಗಿ ರಕ್ಷೆ ಕಟ್ಟದಿದ್ದರೂ ಸಮಷ್ಟಿಯ ರಕ್ಷೆಯ ನಿರ್ಧಾರವೇ ನಮಗೆಲ್ಲರಿಗೂ ರಕ್ಷಣೆಯಲ್ಲವೇ? ನಾವು ಸಹೋದರ ಸಹೋದರಿಯರಿಗೆ ರಕ್ಷೆ ಕಟ್ಟೋಣ; ಯೋಧರಿಗೆಲ್ಲರಿಗೂ ಯೋಗಕ್ಷೇಮದ ಹಾರೈಕೆಯ ರಕ್ಷಾಬಂಧನವನ್ನು ಸಲ್ಲಿಸೋಣ. ❖

ಎಚ್‌.ಡಿ.ಕುಮಾರಸ್ವಾಮಿಗೆ ಸಚಿವ ಡಾ.ಸಿ.ಎನ್‌. ಅಶ್ವತ್ಥನಾರಾಯಣ ಸವಾಲು

‘ದಾಖಲೆಗಳನ್ನು ಬಹಿರಂಗಪಡಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಚ್‌.ಡಿ.ಕುಮಾರಸ್ವಾಮಿ ಅವರ ಬುಟ್ಟಿಯಲ್ಲಿ ಯಾವ ಹಾವು ಇದೆ ಎಂಬುದು ನಾಡಿನ ಜನತೆಗೆ ಗೊತ್ತಿದೆ. ಸುಮ್ಮನೆ ಹಾವಿದೆ, ಹಾವಿದೆ ಎಂದು ಡಂಗೂರ ಸಾರಿ ಹೆದರಿಸುವ ತಂತ್ರವೇಕೆ? ಎಲ್ಲಿಟ್ಟಿದ್ದೀರಿ ನಿಮ್ಮ ದಾಖಲೆಗಳನ್ನು, ಗೆದ್ದಲು ಹಿಡಿಯುವ ಮುನ್ನ ಬಹಿರಂಗಪಡಿಸಿ ಸ್ವಾಮಿ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್‌.ಅಶ್ವತ್ಥನಾರಾಯಣ ಸವಾಲು ಹಾಕಿದ್ದಾರೆ.

ಕುಮಾರಸ್ವಾಮಿ ವಿರುದ್ಧ ಸರಣಿ ಟ್ವೀಟ್ ಮಾಡಿರುವ ಅವರು, ‘ಕೆಂಗಲ್ ಹನುಮಂತಯ್ಯ ಅವರು ಭವ್ಯ ವಿಧಾನಸೌಧ ಕಟ್ಟಿಕೊಟ್ಟರೂ ತಾಜ್ ವೆಸ್ಟ್‌ಎಂಡ್‌ನಲ್ಲಿ ಕುಳಿತು ಸರ್ಕಾರ ನಡೆಸಿದ ಕುಮಾರಸ್ವಾಮಿ ಅವರೇ, ಅಂದು ತಮ್ಮನ್ನು ವಿಧಾನಸೌಧ ದಲ್ಲಿ ಹುಡುಕಿದರೆ ಸಿಗಲಿಲ್ಲ, ಕಷ್ಟ ಹೇಳಿಕೊಳ್ಳಲು ಬಂದ ಜನತೆಗೆ ತಾಜ್ ವೆಸ್ಟ್ ಎಂಡ್ ಒಳಗೆ ಬಿಡಲಿಲ್ಲ. ಎಲ್ಲಿದ್ದೀರಿ ಎಂದು ಜನ ಕೇಳಿದಾಗ ಉತ್ತರಿಸಲಿಲ್ಲ’ ಎಂದು ಲೇವಡಿ ಮಾಡಿದ್ದಾರೆ.

ನಿಮ್ಮ ನೈಜ ಪುರಾಣ ಬಿಚ್ಚಿಡಬೇಕೇ: ಎಚ್‌ಡಿಕೆ

ಬೆಂಗಳೂರು: ‘ಜೆಡಿಎಸ್ ಕಂಪನಿ ಎನ್ನುತ್ತೀರಿ! ನಿಮ್ಮ ಕಂಪನಿಗಳ ಕಥೆ ಬಿಚ್ಚಬೇಕೆ? ಹೊರಗೆ ಸಾಚಾತನ, ಒಳಗೆ ಸೋಗಲಾಡಿತನ. ಎರಡು ತಲೆಯ ಕುಶಲತೆಯನ್ನು ಎಲ್ಲಿಂದ ಕಲಿತಿರಿ? ನಿಮ್ಮ ನೈಜ ಪುರಾಣ ಗೊತ್ತಿದ್ದವರಿಗೆ ಇದೇನು ಅಚ್ಚರಿಯಲ್ಲ ಬಿಡಿ ಅಶ್ವತ್ಥನಾರಾಯಣ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

‘ಕರಾವಳಿಯ ಕೊಲೆಗಳು, ಮಳೆ-ನೆರೆ ಚರ್ಚೆಗೆ ಅಧಿವೇಶನ ಕರೆಯಬೇಕೆಂದು ಒತ್ತಾಯಿಸಿದ್ದು ನಿಜ. ಇದಕ್ಕೆ ಉನ್ನತ ಶಿಕ್ಷಣ ಸಚಿವರಿಗೇಕೆ ಉರಿ? ಉನ್ನತ ಶಿಕ್ಷಣದ ಹುಳುಕು ಹೊರ ಬಂದಾವು ಎಂಬ ಭಯವೇ? ನನ್ನಲ್ಲೂ ದಾಖಲೆಗಳಿವೆ, ಬಿಚ್ಚಿದರೆ ಅವೇ ‘ಸರ್ಟಿಫಿಕೇಟ್ ಕೋರ್ಸ್’ಗಿಂತ ಬೃಹತ್ ಚಾಪ್ಟರ್ 1, 2, 3 ಆಗುತ್ತವೆ; ಬಿಚ್ಚಲೇ? ಎಂದು ಪ್ರಶ್ನಿಸಿದ್ದಾರೆ.

‘ನಾನು ಫೈವ್ ಸ್ಟಾರ್ ಹೋಟೇಲಿನಲ್ಲಿ ಇದ್ದಿದ್ದನ್ನು ನಾನೇ ಹೇಳಿದ್ದೇನೆ. ನಿಮ್ಮ ಪಕ್ಷದ ಅಮಿತ್ ಶಾ, ಜೆ.ಪಿ.ನಡ್ಡಾ, ಅರುಣ್ ಸಿಂಗ್ ಎಲ್ಲರೂ ಬೆಂಗಳೂರಿಗೆ ಬಂದಾಗ ಅದೇ ಫೈವ್ ಸ್ಟಾರ್ ಹೋಟೇಲಿನಲ್ಲಿಯೇ ಇದ್ದರಲ್ಲವೆ? ಅವರು ಅಲ್ಲಿದ್ದಾಗ ನಿಮ್ಮ ಕಣ್ಣಿಗೆ ಪೊರೆ ಬಂದಿತ್ತಾ? ಬೂಟಾಟಿಕೆ ಮಾಡುವವರಿಗೆ ಮೈಯೆಲ್ಲಾ ಪಂಗನಾಮ ಎನ್ನುವಂತೆ ಮಲ್ಲೇಶ್ವರದಲ್ಲಿ ನಿಮ್ಮ ಸದಾರಮೆ ಶೋಕಿ ಎಂಥದು ಎನ್ನುವುದು ಜನರಿಗೆ ಚೆನ್ನಾಗಿ ಗೊತ್ತಾಗಿದೆ’ ಎಂದು ಹಂಗಿಸಿದ್ದಾರೆ.

‘ನಕಲಿ ಸರ್ಟಿಫಿಕೇಟ್ ಡೀಲರ್ ಯಾರು? ಬಿಲ್ಡರ್ ಯಾರು? ಎನ್ನುವುದು ನನಗಿಂತ ನಿಮ್ಮ ಪಕ್ಷದ ನಾಯಕರಿಗೆ ಚೆನ್ನಾಗಿ ಗೊತ್ತಿದೆ. ಬಿಲ್ ಮಾಡಿಕೊಡಬೇಕಾದರೆ ಯಾರಿಗೆಲ್ಲ ಬ್ಲಾಕ್ ಮೇಲ್ ಮಾಡಿದಿರಿ?. ಕಲಾಪ ನಡೆಸಿ ನೋಡಿ ಎಲ್ಲವನ್ನೂ ಬಿಚ್ಚಿಡುತ್ತೇನೆ’ ಎಂದು ಸವಾಲು ಹಾಕಿದ್ದಾರೆ.

‘ಇದೇ ಕುಮಾರಸ್ವಾಮಿಯವರನ್ನು 2006ರಲ್ಲಿ ಬಿಜೆಪಿ ಮುಖ್ಯಮಂತ್ರಿಯನ್ನಾಗಿ ಮಾಡಿತ್ತು. ಅಧಿಕಾರದಾಸೆಗೆ ಕೊಟ್ಟ ಮಾತು ತಪ್ಪಿ ನಡೆವಾಗ ನಾಚಿಕೆ ಆಗಲಿಲ್ಲವೇ? ಮುಂದಿನಿಂದ ನಂಬಿಸಿ, ಹಿಂದಿನಿಂದ ಚೂರಿ ಹಾಕುವ ಕಲೆಯನ್ನು ಎಲ್ಲಿ ಕಲಿತಿರಿ ಕುಮಾರಸ್ವಾಮಿಯವರೇ?’ ಎಂದು ಪ್ರಶ್ನಿಸಿದ್ದಾರೆ. ‘ಕಾಂಗ್ರೆಸ್ ಜತೆ ಸೇರಿ ಮಂಡ್ಯದಲ್ಲಿ ಸುಮಲತಾ ಅಂಬರೀಶ್ ಅವರನ್ನು ಸೋಲಿಸಲು ಹಣದ ಹೊಳೆಯನ್ನೇ ಹರಿಸಿದ ಕುಮಾರಸ್ವಾಮಿ ಎಷ್ಟು ಶುದ್ಧಹಸ್ತರು? ಅವರಾಡುವ ಮಾತು ಗಳೆಷ್ಟು ಸತ್ಯ ಎಂದು ಕೇಳಿದರೆ ಕಳ್ಳರಂತೆ ನುಣುಚಿಕೊಳ್ಳುವುದೇಕೆ? ಐಎಂಎ ಹಗರಣದಲ್ಲಿ ನಿಮಗೂ ಪಾಲು ನೀಡಲು ಹಣ ಸಂಗ್ರಹವಾಗಿತ್ತಂತೆ. ಎಷ್ಟು ತಲು ಪಿದೆ? ಇನ್ನೆಷ್ಟು ಬರಬೇಕು?’ ಎಂದು ಕಾಲೆಳೆದಿದ್ದಾರೆ.

ಕೆಎಂಎಫ್ ನೌಕರರೂ ಪಿಸಿ ಕಾಯ್ದೆ ವ್ಯಾಪ್ತಿಗೆ: ಹೈಕೋರ್ಟ್

ಬೆಂಗಳೂರು: ‘ಸಮಾಜದಲ್ಲಿ ಭಿನ್ನಭಿನ್ನ ಸ್ವರೂಪಗಳಲ್ಲಿ ವ್ಯಾಪಿಸಿರುವ ಲಂಚಗುಳಿತನ, ಸಾರ್ವಜನಿಕ ಆಡಳಿತಕ್ಕೆ ಅತ್ಯಂತ ಅಪಾಯಕಾರಿಯಾಗಿ ಪರಿಣಮಿಸಿದೆ’ ಎಂದು ಕಳವಳ ವ್ಯಕ್ತಪಡಿಸಿರುವ ಹೈಕೋರ್ಟ್, ‘ಕರ್ನಾಟಕ ಹಾಲು ಮಹಾಮಂಡಳದ (ಕೆಎಂಎಫ್) ನೌಕರರೂ ಭ್ರಷ್ಟಾಚಾರ ನಿಗ್ರಹ (ಪಿಸಿ) ಕಾಯ್ದೆ ವ್ಯಾಪ್ತಿಗೆ ಒಳಪಡುತ್ತಾರೆ’ ಎಂದು ಮಹತ್ವದ ಆದೇಶ ನೀಡಿದೆ.

ಆದಾಯಕ್ಕೂ ಮೀರಿದ ಅಕ್ರಮ ಆಸ್ತಿ ಗಳಿಕೆ ಆರೋಪ ಎದುರಿಸುತ್ತಿದ್ದ ನಂದಿನಿ ಮಿಲ್ಕ್ ಪ್ರಾಡಕ್ಟ್ಸ್ ವ್ಯವಸ್ಥಾಪಕ ನಿರ್ದೇಶಕ ವಿ.ಕೃಷ್ಣಾರೆಡ್ಡಿ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಕೆಎಂಎಫ್ ಸಾರ್ವಜನಿಕ ಸಂಸ್ಥೆಯಾಗಿರುವ ಕಾರಣ ಅದರ ಉದ್ಯೋಗಿಗಳನ್ನು ಸರ್ಕಾರಿ ಉದ್ಯೋಗಿಗಳೆಂದೇ ಪರಿಗಣಿಸಬೇಕಾಗುತ್ತದೆ’ ಎಂದು ಅಭಿಪ್ರಾಯಪಟ್ಟಿದೆ.

‘ನಾನು ಕೆಎಂಎಫ್ ನೌಕರನಲ್ಲ. ಆದ್ದರಿಂದ ನಾನು ಭ್ರಷ್ಟಾಚಾರ ನಿಗ್ರಹ ಕಾಯ್ದೆ ವ್ಯಾಪ್ತಿಯಲ್ಲಿ ವಿಚಾರಣೆಗೆ ಯುಕ್ತನಲ್ಲ. ಆದ್ದರಿಂದ, ನನ್ನ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ದಾಖಲಿಸಿರುವ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಬೇಕು‘ ಎಂದು ಕೃಷ್ಣಾರೆಡ್ಡಿ ಕೋರಿದ್ದರು.

ನೋಂದಣಿ ಮರುಪಾವತಿ ವಿವರ ಸಲ್ಲಿಕೆಗೆ ಸೂಚನೆ

ವರದಿ ಪರಿಣಾಮ

ಬೆಂಗಳೂರು: ಲೋಪಗಳಿಂದ ಆಸ್ತಿಗಳ ನೋಂದಣಿ ಸಾಧ್ಯವಾಗದೆ ಇರುವವರು ಹಣ ಹಿಂಪಡೆಯಲು ಸಲ್ಲಿಸಿದ ಅರ್ಜಿಗಳ ವಿವರ ತಕ್ಷಣ ಸಲ್ಲಿಸುವಂತೆ ನೋಂದಣಿ ಮತ್ತು ಮುದ್ರಾಂಕ ಆಯುಕ್ತರು ರಾಜ್ಯದ ಎಲ್ಲ ಉಪ ನೋಂದಣಾಧಿಕಾರಿಗಳಿಗೆ ಸೂಚಿಸಿದ್ದಾರೆ.

ಮುದ್ರಾಂಕ ಕಾಗದ ಖರೀದಿ, ನೋಂದಣಿ ಶುಲ್ಕ ಪಾವತಿಯಲ್ಲಿನ ಲೋಪಗಳಿಂದ ರಾಜ್ಯದ ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಆಸ್ತಿಗಳ ನೋಂದಣಿ ಸಾಧ್ಯವಾಗದೆ ಇರುವವರು ಹಣ ಹಿಂಪಡೆಯಲು ವರ್ಷಗಟ್ಟಲೆ ಬೆಂಗಳೂರಿಗೆ ಅಲೆದಾಡುವಂತಾಗಿದೆ ಎನ್ನುವ ಕುರಿತು ಆ.10ರ ಸಂಚಿಕೆಯಲ್ಲಿ ‘ಪ್ರಜಾವಾಣಿ’ ಪ್ರಕಟಿಸಿದ ವಿಶೇಷ ವರದಿಯನ್ನು ಆದೇಶ ದಲ್ಲಿ ಉಲ್ಲೇಖಿಸಲಾಗಿದೆ.

ವಿವಿಧ ಕಾರಣಗಳಿಗೆ ಬಳಸದೇ ಇರುವ ಮುದ್ರಾಂಕ, ನೋಂದಣಿ ಶುಲ್ಕ ಪಾವತಿ ಲೋಪ ಮತ್ತಿತರ ಕಾರಣಗಳಿಂದ ಹಣ ಮರಳಿಸಲು 2020–21 ಹಾಗೂ 2021–22ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿದವರ ಸಂಖ್ಯೆ, ಹಣ ಮರುಪಾವತಿಸಿದ ನಂತರ ಇತ್ಯರ್ಥವಾದ ಅರ್ಜಿಗಳು, ಪ್ರಕ್ರಿಯೆಯಲ್ಲಿರುವ ಪ್ರಸ್ತಾವನೆಗಳ ವಿವರ, ಬಾಕಿ ಇರುವ ಅರ್ಜಿಗಳ ಸಂಖ್ಯೆಯನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಕೇಂದ್ರ ಕಚೇರಿಯ ಇ–ಮೇಲ್‌ಗೆ ಬುಧವಾರ ಸಂಜೆ 5.30ರ ಒಳಗೆ ಸಲ್ಲಿಸುವಂತೆ ಆದೇಶಿಸಿದ್ದಾರೆ.

‘ಸಂವಿಧಾನದ ಮೇಲೆ ಕಾಂಗ್ರೆಸ್‌ಗೆ ಹೆಚ್ಚು ಹಕ್ಕು’

ಮಂಡ್ಯ: ‘ಕಾಂಗ್ರೆಸ್ ಮುಖಂಡರ ತ್ಯಾಗ, ಬಲಿದಾನದ ಫಲವಾಗಿ ದೇಶಕ್ಕೆ ಸ್ವಾತಂತ್ರ್ಯ ಬಂದಿರುವುದರಿಂದ ಸ್ವಾತಂತ್ರ್ಯ, ಸಂವಿಧಾನ, ರಾಷ್ಟ್ರಗೀತೆ, ರಾಷ್ಟ್ರಧ್ವಜದ ಮೇಲೆ ಕಾಂಗ್ರೆಸ್‌ಗೆ ಜಾಸ್ತಿ ಹಕ್ಕಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಬುಧವಾರ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು ‘ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಆಚರಣೆಯನ್ನು ಕಾಂಗ್ರೆಸ್ ಮೊದಲು ಘೋಷಿಸಿತ್ತು. ನಂತರ ಬಿಜೆಪಿ ‘ಹರ್ ಘರ್ ತಿರಂಗಾ’ ಕಾರ್ಯಕ್ರಮ ಘೋಷಿಸಿದೆ. ₹25ಕ್ಕೆ ಬಾವುಟ ಖರೀದಿಸಿ ಮನೆ ಮೇಲೆ ಹಾರಿಸಲು ಹೇಳಿರುವುದು ನಾಚಿಕೆಗೇಡಿನ ಸಂಗತಿ. ಉಚಿತವಾಗಿಯೇ ವಿತರಿಸಬಹುದಿತ್ತು’ ಎಂದರು.

‘ಮುಖ್ಯಮಂತ್ರಿ ಬದಲಾವಣೆ ವಿಚಾರ ಕುರಿತು ಕಾಂಗ್ರೆಸ್ ಸುಮ್ಮನೇ ಟ್ವೀಟ್ ಮಾಡಿಲ್ಲ. ನಾಲ್ಕು ತಿಂಗಳಿಂದ ಬಿಜೆಪಿ ಮಂತ್ರಿಗಳೇ ಸಿ.ಎಂ ಬದಲಾವಣೆ ವಿಚಾರ ಮಾತನಾಡುತ್ತಿದ್ದಾರೆ. ಅವರ ಮಾತುಗಳನ್ನು ಗಮನಿಸಿ ನಮ್ಮ ಪಕ್ಷದ ಸಾಮಾಜಿಕ ಜಾಲತಾಣ ವಿಭಾಗ ಟ್ವೀಟ್ ಮಾಡಿದ್ದರಲ್ಲಿ ತಪ್ಪೇನು’ ಎಂದು ಪ್ರಶ್ನಿಸಿದರು.

‘ಎಚ್‌.ಡಿ.ಕುಮಾರಸ್ವಾಮಿಗೆ ಕೈಕೊಟ್ಟ ರೀತಿಯಲ್ಲಿ ಸಿದ್ದರಾಮಯ್ಯಗೂ ಡಿಕೆಶಿ ಕೈಕೊಡುತ್ತಾರೆ’ ಎಂಬ ಕಂದಾಯ ಸಚಿವ ಆರ್‌.ಅಶೋಕ ಹೇಳಿಕೆಗೆ ಪ್ರತಿಕ್ರಿಯಿಸಿ, ‘ರಾಜಕೀಯ ನಿಂತ ನೀರಲ್ಲ, ಮಹಾರಾಷ್ಟ್ರದಲ್ಲಿ ಶಿವಸೇನಾ ಪಕ್ಷ ಬಿಜೆಪಿ ಜೊತೆ ಸೇರಿ ಚುನಾವಣೆ ನಡೆಸಿತ್ತು. ಆದರೆ ಕಾಂಗ್ರೆಸ್, ಎನ್‌ಸಿಪಿ ಜೊತೆ ಸರ್ಕಾರ ರಚಿಸಿತ್ತು. ಬಿಹಾರದಲ್ಲಿ ನಿತೀಶ್ ಕುಮಾರ್ ಬಿಜೆಪಿ ಜೊತೆ ಸರ್ಕಾರ ಮಾಡಿದ್ದರು. ಈಗ ಬಿಜೆಪಿ ಜೊತೆಗಿನ ಸಖ್ಯ ತ್ಯಜಿಸಿದ್ದಾರೆ. ಯಾರ ಮಾತಿಗೂ ತಲೆಕೆಡಿಸಿಕೊಳ್ಳಬೇಕಾಗಿಲ್ಲ’ ಎಂದರು.

ಪೂರಕ ಪರೀಕ್ಷೆ: ಉಚಿತ ಪ್ರಯಾಣ

ಬೆಂಗಳೂರು: ದ್ವಿತೀಯ ಪಿಯು ಪೂರಕ ಪರೀಕ್ಷೆಗಳು ಆ.12ರಿಂದ 25ರವರೆಗೆ ನಡೆಯಲಿದ್ದು, ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಉಚಿತವಾಗಿ ಪ್ರಯಾಣ ಮಾಡಲು ಕೆಎಸ್‌ಆರ್‌ಟಿಸಿ ಅವಕಾಶ ಕಲ್ಪಿಸಿದೆ.

ಪರೀಕ್ಷೆಯ ಪ್ರವೇಶ ಪತ್ರ ತೋರಿಸಿ ಸಾಮಾನ್ಯ ಮತ್ತು ವೇಗದೂತ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಬಹುದು ಎಂದು ಕೆಎಸ್‌ಆರ್‌ಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕರು ತಿಳಿಸಿದ್ದಾರೆ.

ಪ್ರವೀಣ್ ಹತ್ಯೆ: ಆರೋಪಿಗಳಿಗೆ ಪಿಎಫ್‌ಐ ನಂಟು; ಎಡಿಜಿಪಿ

‘ಪತ್ತೆಯಾಗದವರ ಆಸ್ತಿ ಮುಟ್ಟುಗೋಲಿಗೆ ಕ್ರಮ’

ಪ್ರಜಾವಾಣಿ ವಾರ್ತೆ

ಸುಳ್ಯ/ಮಂಗಳೂರು: 'ಬಿಜೆಪಿ ಯುವ ಮುಖಂಡ ಪ್ರವೀಣ್ ನೆಟ್ಟಾರು ಕೊಲೆ ಪ್ರಕರಣದ ಕೆಲ ಆರೋಪಿಗಳಿಗೆ ಪಿಎಫ್‌ಐ ಸಂಘಟನೆ ಜೊತೆ ಸಂಪರ್ಕ ಇದೆ. ಕೃತ್ಯ ನಡೆಸಿರುವ ಮೂವರು ಆರೋಪಿಗಳ ಬಂಧನವಾಗಬೇಕಿದ್ದು, ನ್ಯಾಯಾಲಯದಿಂದ ವಾರಂಟ್ ಜಾರಿಗೊಳಿಸಿ ಅವರ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ’ ಎಂದು ರಾಜ್ಯ ಕಾನೂನು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ತಿಳಿಸಿದರು.

ಪ್ರವೀಣ್ ಕೊಲೆ ಪ್ರಕರಣದ ತನಿಖೆಯ ಪ್ರಗತಿ ಪರಿಶೀಲನೆ ಸಲುವಾಗಿ ಬೆಳ್ಳಾರೆಯಲ್ಲಿ ಪೊಲೀಸ್ ಅಧಿಕಾರಿಗಳ ಜೊತೆ ಅಲೋಕ್ ಕುಮಾರ್ ಅವರು ಬುಧವಾರ ಸಭೆ ನಡೆಸಿದರು.

ಬೆಳ್ಳಾರೆಗೆ ತೆರಳುವ ಮುನ್ನ ಮಂಗಳೂರಿನಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಪ್ರವೀಣ್ ಹತ್ಯೆ ನಡೆಸಿರುವ ಪ್ರಮುಖ ಮೂವರು ಆರೋಪಿಗಳ ಫೋಟೊ, ಮನೆ ವಿಳಾಸ, ತಂದೆ- ತಾಯಿ, ಹೆಂಡತಿ ಸೇರಿದಂತೆ ಕುಟುಂಬದವರ ಮಾಹಿತಿ ಕಲೆಹಾಕಿದ್ದೇವೆ. ಈ ಆರೋಪಿಗಳನ್ನು ಬಚ್ಚಿಡುವ ಕೆಲಸ ನಡೆಯುತ್ತಿದೆ. ಆಗಾಗ ಅವರು ವಾಸ್ತವ್ಯ ಬದಲಾಯಿಸುತ್ತಿದ್ದಾರೆ. ಪೊಲೀಸರು ಸ್ಥಳಕ್ಕೆ ತಲುಪುವಷ್ಟರಲ್ಲಿ ಅವರು ಪರಾರಿಯಾಗುತ್ತಿದ್ದಾರೆ’ ಎಂದು ತಿಳಿಸಿದರು.

‘ಆರೋಪಿಗಳಲ್ಲಿ ಯಾರಿಗೆಲ್ಲಾ ಪಿಎಫ್‌ಐ ಸಂಪರ್ಕ ಇದೆ ಎಂಬುವುದರ ಬಗ್ಗೆ ತನಿಖೆಯ ಬಳಿಕ ಬಹಿರಂಗಪಡಿಸುತ್ತೇವೆ. ಈ ಹತ್ಯೆಗೆ ಪತ್ಯಕ್ಷ ಮತ್ತು ಪರೋಕ್ಷವಾಗಿ ಸಹಕಾರ ನೀಡಿದ ಎಲ್ಲರ ಮೇಲೂ ಕ್ರಮ ನಿಶ್ಚಿತ’ ಎಂದರು.

'ಪ್ರವೀಣ್ ಹತ್ಯೆ ಪ್ರಕರಣದಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಅಧಿಕಾರಿಗಳ ಜೊತೆ ಸೇರಿ ಕರ್ನಾಟಕ ಪೊಲೀಸರ ತಂಡ ತನಿಖೆ ನಡೆಸುತ್ತಿದೆ. ಮುಖ್ಯ ಆರೋಪಿಗಳ ದಸ್ತಗಿರಿ ಸಲುವಾಗಿ ಮಂಡ್ಯ, ಚಾಮರಾಜನಗರ ಹಾಸನ, ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಜೊತೆ ಹಾಗೂ ಎನ್‌ಐಎ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿದ್ದೇವೆ. ಮೂರು ಆರೋಪಿಗಳನ್ನು ಆದಷ್ಟು ಬೇಗ ಪತ್ತೆ ಮಾಡಬೇಕು ಎಂದು ನಿರ್ದೇಶನ ನೀಡಿದ್ದೇವೆ’ ಎಂದರು.

‘ದಕ್ಷಿಣ ಕನ್ನಡ ಜಿಲ್ಲೆಯ ಕಾನೂನು ಸುವ್ಯವಸ್ಥೆ ಬಗ್ಗೆಯೂ ಹೆಚ್ಚಿನ ನಿಗಾ ಇಡುವ ಅಗತ್ಯ ಇದೆ. ಸುಳ್ಯ ಮತ್ತು ಬೆಳ್ಳಾರೆ ಸೂಕ್ಷ್ಮ ಪ್ರದೇಶವಾಗಿದ್ದು ಈ ಪರಿಸರದಲ್ಲಿ ಅರಣ್ಯ ಪ್ರದೇಶ ಜಾಸ್ತಿ. ಇದು ಕೇರಳ ಹತ್ತಿರದಲ್ಲಿದೆ. ಹೀಗಾಗಿ ಪೊಲೀಸ್ ಅಧಿಕಾರಿಗಳು ಹೆಚ್ಚು ಚುರುಕಿನಿಂದ ಕೆಲಸಮಾಡಬೇಕಾಗುತ್ತದೆ ’ ಎಂದರು.

ತಲವಾರು ಹಿಡಿದು ಸುತ್ತಾಡಿದ ಯುವಕನ ಬಂಧನ: ಸುಳ್ಯ ತಾಲ್ಲೂಕಿನ ಕನಕಮಜಲು ಗ್ರಾಮದ ಸುಣ್ಣಮೂಲೆ ಬಳಿ ಸಂದೀಪ್ ಎಂಬ ಯುವಕ ತಲವಾರು ಹಿಡಿದು ಸಾರ್ವಜನಿಕ ಪ್ರದೇಶದಲ್ಲಿ ಸುತ್ತಾಡುವ ಮೂಲಕ ಸ್ಥಳೀಯರಲ್ಲಿ ಆತಂಕ ಸೃಷ್ಟಿಸಿದ್ದ. ಸುಳ್ಯ ಪೊಲೀಸರು ಆತನನ್ನು ಬಂಧಿಸಿದ್ದಾರೆ.



ದೆಹಲಿಯಲ್ಲಿ ನಡೆದ ಆಕಾಶ್ ಬೈಜೂಸ್ ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಜೆ.ಸಿ. ಚೌಧರಿ, ವ್ಯವಸ್ಥಾಪಕ ನಿರ್ದೇಶಕ ಆಕಾಶ್ ಚೌಧರಿ, ಸಿಇಒ ಅಭಿಷೇಕ್ ಮಹೇಶ್ವರಿ ಪಾಲ್ಗೊಂಡಿದ್ದರು

‘ಆಕಾಶ್ ಬೈಜೂಸ್’ ವಿನೂತನ ಯೋಜನೆ

ಬೆಂಗಳೂರು: ವಿದ್ಯಾರ್ಥಿನಿಯರಿಗೆ ಉನ್ನತ ಶಿಕ್ಷಣ ನೀಡುವ ಮುಖ್ಯ ಆಶಯದೊಂದಿಗೆ ಆಕಾಶ್ ಬೈಜೂಸ್ ಸಂಸ್ಥೆ ‘ಎಲ್ಲರಿಗೂ ಶಿಕ್ಷಣ’ ಯೋಜನೆ ಆರಂಭಿಸಿದೆ.

‘ಎಎನ್‌ಟಿಎಚ್‌ಇ– 2022’ರ ಭಾಗವಾಗಿ ಆರ್ಥಿಕವಾಗಿ ಹಿಂದುಳಿದ ಸುಮಾರು ಎರಡು ಸಾವಿರ ವಿದ್ಯಾರ್ಥಿನಿಯರಿಗೆ ಉಚಿತವಾಗಿ ನೀಟ್ ಮತ್ತು ಜೆಇಇ ಕೋಚಿಂಗ್ ಮತ್ತು ವಿದ್ಯಾರ್ಥಿ ವೇತನ ನೀಡಲು ಮುಂದಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ವಿದ್ಯಾರ್ಥಿ ವೇತನ ಪರೀಕ್ಷೆ ನಡೆಸಲಿದೆ.

ವಿಶೇಷವಾಗಿ ಹೆಣ್ಣು ಮಕ್ಕಳಿಗೆ, ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಒಂದು ಹೆಣ್ಣು ಮಗು ಅಥವಾ ಒಬ್ಬಂಟಿ ಪೋಷಕ (ತಾಯಿ) ಇರುವ ಕುಟುಂಬಗಳಿಗೆ ಅನುಕೂಲವಾಗುವಂತೆ ಈ ಅಭಿಯಾನವನ್ನು ಆರಂಭಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಯೋಜನೆ ಪ್ರಕಾರ, ಗುರುತಿಸಲಾದ ಎಲ್ಲ ವಿದ್ಯಾರ್ಥಿಗಳು ‘ಆಕಾಶ್ ಬೈಜೂಸ್‌ನ ನ್ಯಾಷನಲ್ ಟ್ಯಾಲೆಂಟ್ ಹಂಟ್ ಪರೀಕ್ಷೆ–2022’ (ಎಎನ್‌ಟಿಎಚ್‌ಇ) ಪ್ರಮುಖ ವಿದ್ಯಾರ್ಥಿ ವೇತನ ಪರೀಕ್ಷೆಗೆ ಹಾಜರಾಗಬೇಕು. ಈ ಪರೀಕ್ಷೆಯು 2022ರ ನವೆಂಬರ್ 5ರಿಂದ 13ರ ನಡುವೆ ದೇಶದಾದ್ಯಂತ ಆನ್‌ಲೈನ್ ಮತ್ತು ಆಫ್‌ಲೈನ್ ಮೋಡ್‌ನಲ್ಲಿ ನಡೆಯಲಿದೆ.

‘ಎಎನ್‌ಟಿಎಚ್‌ಇ 2022’ರ 13ನೇ ಆವೃತ್ತಿಯು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಶೇ 100ರಷ್ಟು ವಿದ್ಯಾರ್ಥಿ ವೇತನ ನೀಡುತ್ತದೆ, ಉತ್ತಮ ಅಂಕ ಪಡೆದವರಿಗೆ ನಗದು ಬಹುಮಾನ ನೀಡಲಾಗುತ್ತದೆ. ‘ಎಎನ್‌ಟಿಎಚ್‌ಇ’ ಈವರೆಗೆ 33 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಿದೆ. 7ರಿಂದ 12ನೇ ತರಗತಿಗೆ ವಿದ್ಯಾರ್ಥಿಗಳಿಗೆ ಈ ವಿದ್ಯಾರ್ಥಿ ವೇತನ ಅನ್ವಯವಾಗಲಿದೆ.

ದೆಹಲಿಯ ಏರೋಸಿಟಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ದೇಶದ 45 ಸ್ಥಳಗಳಲ್ಲಿ ಈ ಯೋಜನೆಗೆ ಚಾಲನೆ ನೀಡಲಾಯಿತು. ಅಧ್ಯಕ್ಷ ಜೆ.ಸಿ. ಚೌಧರಿ, ವ್ಯವಸ್ಥಾಪಕ ನಿರ್ದೇಶಕ ಆಕಾಶ್ ಚೌಧರಿ, ಸಿಇಒ ಅಭಿಷೇಕ್ ಮಹೇಶ್ವರಿ ಪಾಲ್ಗೊಂಡಿದ್ದರು. ಹೆಚ್ಚಿನ ಮಾಹಿತಿಗೆ anthe.aakash.ac.in ವೆಬ್‌ಸೈಟ್ ಭೇಟಿ ನೀಡ ಬಹುದು ಎಂದು ಪ್ರಕಟಣೆ ತಿಳಿಸಿದೆ.

ವಂಡರ್ ಲಾ: 75 ಯೋಧರಿಗೆ ಉಚಿತ ಪ್ರವೇಶ

ಬೆಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ ವಂಡರ್‌ಲಾ ಪಾರ್ಕ್ ಆಯ್ದ 75 ಯೋಧರು ಹಾಗೂ ಅವರ ಕುಟುಂಬದ ತಲಾ ಮೂವರು ಸದಸ್ಯರಿಗೆ ಉಚಿತ ಪ್ರವೇಶ ಘೋಷಿಸಿದೆ. ಈ ಕೊಡುಗೆ ಇದೇ 15ರಿಂದ 17ರವರೆಗೆ ಅನ್ವಯವಾಗಲಿದೆ. ಉಚಿತ ಪ್ರವೇಶದ ಜತೆಗೆ ಊಟೋಪಚಾರ ಹಾಗೂ ಆಟಗಳೂ ಉಚಿತವಾಗಿ ಇರಲಿವೆ. ಇನ್ನುಳಿದ ಯೋಧರು, ಮಾಜಿ ಸೈನಿಕರು ಹಾಗೂ ಅವರ ಕುಟುಂಬದ ತಲಾ ಮೂವರು ಸದಸ್ಯರಿಗೂ ಟಿಕೆಟ್ ದರದಲ್ಲಿ ಶೇ 25ರಷ್ಟು ರಿಯಾಯಿತಿ ಇರಲಿದೆ. ಈ ಕೊಡುಗೆ ಆ.31ರವರೆಗೆ ಅನ್ವಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕ ಸಂಖ್ಯೆ: 080 37230333 ಅಥವಾ 080 35073966

ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥ ನಾರಾಯಣ ಭರವಸೆ

‘ಬಾಕಿ ವೇತನ ಬಿಡುಗಡೆಗೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಲೇಜು ಪ್ರಾಧ್ಯಾಪಕರ 7ನೇ ವೇತನ ಆಯೋಗಕ್ಕೆ ಸಂಬಂಧಿಸಿದಂತೆ ಬಾಕಿ ಇರುವ ಏಳು ತಿಂಗಳ ವೇತನವನ್ನು ಶೀಘ್ರ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು’ ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥ ನಾರಾಯಣ ಭರವಸೆ ನೀಡಿದರು.

ಕರ್ನಾಟಕ ಸರ್ಕಾರಿ ಕಾಲೇಜು ಅಧ್ಯಾಪಕರ ಸಂಘವು ವಿವಿಧ ಐದು ಅಧ್ಯಾಪಕರ ಸಂಘಟನೆಗಳ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ ‘ಶೈಕ್ಷಣಿಕ ಸಮಾವೇಶ, ಅಭಿನಂದನಾ ಸಮಾರಂಭ ಮತ್ತು ಗ್ರಂಥ ಲೋಕಾರ್ಪಣೆ’ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

‘ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯ ರಾಜ್ಯದ ಎಲ್ಲಾ ಅಧ್ಯಾಪಕರು, ಸಿಬ್ಬಂದಿಗಳ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಬದ್ಧವಾಗಿದೆ’ ಎಂದು ತಿಳಿಸಿದರು.

‘ಅಧಿಕಾರಿಗಳು, ಅಧ್ಯಾಪಕರ ಸಹಕಾರದಿಂದ ದೇಶದಲ್ಲೇ ಕರ್ನಾಟಕದಲ್ಲಿ ಮೊದಲು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಯಶಸ್ವಿಯಾಗಿ ಜಾರಿಗೊಳಿಸಲು ಸಾಧ್ಯವಾಗಿದೆ. ಮುಂದಿನ ದಿನಗಳಲ್ಲೂ ಇದರ ಸಂಪೂರ್ಣ ಅನುಷ್ಠಾನಕ್ಕೆ ಎಲ್ಲರೂ ಶ್ರಮಿಸಬೇಕು’ ಎಂದು ಸೂಚಿಸಿದರು.

ಕಾಲೇಜು ಶಿಕ್ಷಣ ಇಲಾಖೆಯ ಕೆ. ಕಿಶೋರ್‌ಕುಮಾರ್ ಅವರು ರಚಿಸಿರುವ ‘ನಸಾಬ್’ ಪುಸ್ತಕವನ್ನು ಸಚಿವರು ಬಿಡುಗಡೆ ಮಾಡಿದರು. ಇಲಾಖೆ ಆಯುಕ್ತ ಪಿ.ಪ್ರದೀಪ್, ಸಾಹಿತಿ ಡಾ.ರಾಜಶೇಖರ ಮಠಪತಿ, ಕರ್ನಾಟಕ ಸರ್ಕಾರಿ ಅಧ್ಯಾಪಕರ ಸಂಘದ ಅಧ್ಯಕ್ಷ ಡಾ.ಟಿ.ಎಂ.ಮಂಜುನಾಥ್, ಜಂಟಿ ಕಾರ್ಯದರ್ಶಿ ಡಾ.ಶೋಭಾ ಇದ್ದರು.

ಕರ್ನಾಟಕ ಸರ್ಕಾರಿ ಕಾಲೇಜು ಅಧ್ಯಾಪಕರ ಸಂಘದ ವತಿಯಿಂದ ಬೇಡಿಕೆಗಳ ಮನವಿಯನ್ನು ಸಚಿವರಿಗೆ ಸಲ್ಲಿಸಲಾಯಿತು.

ಅಧ್ಯಾಪಕರ ಸಂಘದ ಬೇಡಿಕೆಗಳು

- ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿರುವ ಪ್ರಾಧ್ಯಾಪಕರ ಅಂತಿಮ ಪಟ್ಟಿಯನ್ನು ಕೂಡಲೇ ಪ್ರಕಟಿಸಬೇಕು.
- ಖಾಲಿ ಇರುವ ಪ್ರಾಂಶುಪಾಲರ ಹುದ್ದೆಗಳನ್ನು ಭರ್ತಿ ಮಾಡಬೇಕು.
- ಬಾಕಿ ಇರುವ ಏಳು ತಿಂಗಳ ಯುಜಿಸಿ ವೇತನ ಬಾಕಿಯನ್ನು ಕೂಡಲೇ ಪಾವತಿಸಬೇಕು.
- ಸಂದರ್ಶನ ಪೂರೈಸಿರುವ ಸಹ ಪ್ರಾಧ್ಯಾಪಕರ ಪಟ್ಟಿ ಪ್ರಕಟಿಸಬೇಕು
- ಸಹ ಪ್ರಾಧ್ಯಾಪಕರ ಪದೋನ್ನತಿಗೆ ಪಿಎಚ್‌ಡಿ ಕಡ್ಡಾಯಗೊಳಿಸಿರುವುದರಿಂದ ಕಾಲಮಿತಿ ವಿನಾಯಿತಿ ನೀಡಬೇಕು.
- ದೈಹಿಕ ಶಿಕ್ಷಣ ಬೋಧಕರು ಮತ್ತು ಗ್ರಂಥಪಾಲಕರ ಪದನಾಮ ಬದಲಾವಣೆಗೆ ಕ್ರಮಕೈಗೊಳ್ಳಬೇಕು.
- 2016ರ ನಂತರ ಪಿ.ಎಚ್‌ಡಿ ಪಡೆದ ಅಧ್ಯಾಪಕರಿಗೆ ವೇತನ ಬಡ್ತಿ ನೀಡಬೇಕು
- ಸಹಾಯಕ ಪ್ರಾಧ್ಯಾಪಕರಾಗಿ ಆಯ್ಕೆಯಾಗಿರುವ 1242 ಅಧ್ಯಾಪಕರುಗಳಿಗೆ ನೇಮಕಾತಿ ಆದೇಶ ನೀಡಬೇಕು.
- ವರ್ಗಾವಣೆ ಅದಾಲತ್ ನಡೆಸಬೇಕು.

ಬಿಬಿಎಂಪಿ ಆಯುಕ್ತರಿಂದ ರಾಷ್ಟ್ರಧ್ವಜ ಖರೀದಿ

ಬೆಂಗಳೂರು: ‘ಪ್ರತಿ ಮನೆಯಲ್ಲೂ ರಾಷ್ಟ್ರಧ್ವಜ’ ಅಭಿಯಾನದ ಪ್ರಯುಕ್ತ ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಹಾಗೂ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ರಾಷ್ಟ್ರಧ್ವಜ ಖರೀದಿಸಿದರು.

ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಆಗಸ್ಟ್ 13ರಿಂದ 15ರವರೆಗೆ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಪೂರ್ವ ವಲಯದ ಜಂಟಿ ಆಯುಕ್ತೆ ಶಿಲ್ಪಾ ಅವರಿಗೆ ಹಣ ನೀಡಿ ರಾಕೇಶ್ ಸಿಂಗ್ ಧ್ವಜ ಸ್ವೀಕರಿಸಿದರು.

ಯಲಹಂಕದಲ್ಲಿ ನಡೆದ ಅಭಿಯಾನದಲ್ಲಿ ತುಷಾರ್ ಗಿರಿನಾಥ್ ಅವರು ಯಲಹಂಕ ವಲಯದ ಜಂಟಿ ಆಯುಕ್ತೆ ಪಿ.ವಿ.ಪೂರ್ಣಿಮಾ ಅವರಿಗೆ ಹಣ ನೀಡಿ ಧ್ವಜ ಪಡೆದರು. ಪೌರ ಕಾರ್ಮಿಕರು ಹಾಗೂ ಹಿರಿಯ ನಾಗರಿಕರಿಗೆ ರಾಷ್ಟ್ರಧ್ವಜವನ್ನು ನೀಡಿ ತಮ್ಮ ತಮ್ಮ ಮನೆಗಳಲ್ಲಿ ಆಗಸ್ಟ್ 13 ರಿಂದ 15ರವರೆಗೆ ಧ್ವಜಗಳನ್ನು ಹಾರಿಸಲು ಕರೆ ನೀಡಿದರು.

‘ಪ್ರತಿ ಮನೆಯಲ್ಲೂ ರಾಷ್ಟ್ರಧ್ವಜ’ ಅಂಗವಾಗಿ ಬಿಬಿಎಂಪಿ ವ್ಯಾಪ್ತಿಯ ವಲಯ ಜಂಟಿ ಆಯುಕ್ತರ ಕಚೇರಿ, ವಾರ್ಡ್ ಕಚೇರಿಗಳಲ್ಲಿ ನಾಗರಿಕರಿಗೆ ಧ್ವಜಗಳನ್ನು ಮಾರಾಟ ಮಾಡಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.



ಸ್ಕೇಟಿಂಗ್ ಅಭ್ಯಾಸ

ಸ್ವಾತಂತ್ರ್ಯೋತ್ಸವ ದಿನದಂದು ರಾಷ್ಟ್ರಧ್ವಜ ಹಿಡಿದು ಸ್ಕೇಟಿಂಗ್ ಮಾಡಲು ಜಯನಗರ ರೋಲರ್ ಸ್ಕೇಟಿಂಗ್ ಕ್ಲಬ್ ವಿದ್ಯಾರ್ಥಿಗಳು ಬುಧವಾರ ಅಭ್ಯಾಸ ನಡೆಸಿದರು

–ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಸುದ್ದಿ 2 ನಿಮಿಷ

ಸ್ವಾತಂತ್ರ್ಯ ನಡಿಗೆ: ಪ್ರಿಯಾಂಕಾ ಬರುವುದು ಅನುಮಾನ

ಬೆಂಗಳೂರು: 75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಆಗಸ್ಟ್ 15ರಂದು ಕಾಂಗ್ರೆಸ್ ಹಮ್ಮಿಕೊಂಡಿರುವ ‘ಸ್ವಾತಂತ್ರ್ಯ ನಡಿಗೆ’ ಕಾರ್ಯಕ್ರಮದಲ್ಲಿ ಎಐಸಿಸಿ ನಾಯಕಿ ಪ್ರಿಯಾಂಕಾ ಗಾಂಧಿ ಪಾಲ್ಗೊಳ್ಳುವುದು ಅನುಮಾನ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಪ್ರಿಯಾಂಕಾ ಅವರನ್ನು ಕರೆಯಿಸಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಮತ್ತು ಸಂಸದ ಡಿ.ಕೆ. ಸುರೇಶ್ ಮುಂದಾಗಿದ್ದರು. ಸಮಾವೇಶಕ್ಕೆ ಬರಲು ಅವರು ಒಪ್ಪಿದ್ದರು. ಆದರೆ, ಕೋವಿಡ್ ದೃಢಪಟ್ಟ ಕಾರಣ ಅವರು ಬರುವ ಸಾಧ್ಯತೆ ಕಡಿಮೆ ಎಂದೂ ತಿಳಿಸಿವೆ.



ಸ್ವಾತಂತ್ರ್ಯ ದಿನ ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಒಂದೂವರೆ ಲಕ್ಷ ಜನರನ್ನು ಸೇರಿಸಿ ನಡೆಸಲು ಉದ್ದೇಶಿಸಿದ ಬೃಹತ್ ಸಮಾವೇಶಕ್ಕೆ ಪ್ರಿಯಾಂಕಾ ಅವರನ್ನು ಕರೆಸಿ ಶಕ್ತಿ ಪ್ರದರ್ಶನ ನಡೆಸಲು ಡಿ.ಕೆ. ಸಹೋದರರು ಸಿದ್ಧತೆ ನಡೆಸಿದ್ದಾರೆ.

ಕಳೆದ ಒಂದು ತಿಂಗಳಿನಿಂದ ಈ ಸಮಾವೇಶಕ್ಕೆ ಕಾಂಗ್ರೆಸ್ಸಿನಲ್ಲಿ ಭಾರಿ ಸಿದ್ಧತೆ ನಡೆಯುತ್ತಿದೆ. ದಾವಣಗೆರೆಯಲ್ಲಿ ನಡೆದ ಸಿದ್ದರಾಮಯ್ಯ ಅಮೃತ ಮಹೋತ್ಸವದಲ್ಲಿ ರಾಹುಲ್ ಭಾಗವಹಿಸಿದ್ದರು. ಹೀಗಾಗಿ, ಪ್ರಿಯಾಂಕಾ ಗಾಂಧಿ ಅವರನ್ನು ಕರೆಸಲು ತಯಾರಿ ನಡೆದಿತ್ತು.

ಗಣೇಶ ಮೂರ್ತಿ ಪ್ರತಿಷ್ಠಾಪನೆ ತಡೆಯಲಿ: ಸಿ.ಟಿ.ರವಿ ಸವಾಲು

ಬೆಂಗಳೂರು: ‘ಚಾಮರಾಜಪೇಟೆಯ ಮೈದಾನದಲ್ಲಿ ಗಣೇಶ ಮೂರ್ತಿಯನ್ನು ಕೂರಿಸಬೇಕು ಎಂದಾದರೆ ಅದನ್ನು ಮಾಡಿಯೇ ತೀರುತ್ತೇವೆ. ಈ ಆಟದ ಮೈದಾನ ಜಮೀರ್ ಅವರ ಅಪ್ಪನ ಆಸ್ತಿಯೇನಲ್ಲ. ಗಣೇಶ ಮೂರ್ತಿ ಇಡುವುದನ್ನು ತಡೆಯಲಿ ನೋಡೋಣ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಸವಾಲು ಹಾಕಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಗಣೇಶ ಮೂರ್ತಿಯನ್ನು ಕೂರಿಸಲು ಇವರ ಅಪ್ಪಣೆ ಏಕೆ ಬೇಕು? ನಾವು ಅರಬ್ ದೇಶದಲ್ಲಿ ಗಣೇಶ ಇಡುತ್ತಿಲ್ಲ. ಅಲ್ಲಿ ಗಣೇಶ ಮೂರ್ತಿ ಕೂರಿಸಬೇಕಾದರೆ, ಜಮೀರ್ ಅವರ ಪೂರ್ವಜರ ಅಪ್ಪಣೆ ಬೇಕಾಗಬಹುದು. ಆದರೆ ನಮ್ಮ ದೇಶದಲ್ಲಿ ಗಣೇಶ ಮೂರ್ತಿಯನ್ನು ಕೂರಿಸಲು ಜಮೀರ್ ಅಪ್ಪಣೆ ಬೇಕಾಗಿಲ್ಲ’ ಎಂದರು.

‘ನಮಗೆ ತಾಕತ್ತು ಇದೆ. ನಾವು ಗಣೇಶನನ್ನು ಇಟ್ಟೇ ತೀರುತ್ತೇವೆ. ಅದ್ದೂರಿಯಾಗಿ ಆಚರಣೆ ಮಾಡುತ್ತೇವೆ. ಅವರ ಬಂದು ತಡೆಯಲಿ ನೋಡೋಣ. ಅಲ್ಲದೆ, ಮೈದಾನದಲ್ಲಿ ರಾಷ್ಟ್ರಧ್ವಜವನ್ನು ಹಾರಿಸಲು ಯಾರ ಅನುಮತಿಯೂ ಬೇಕಾಗಿಲ್ಲ’ ಎಂದು ರವಿ ಹೇಳಿದರು.

‘ಈದ್ಗಾ: ಚಟುವಟಿಕೆಗಳಿಗೆ ಅವಕಾಶ ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚಾಮರಾಜಪೇಟೆ ಈದ್ಗಾ ಮೈದಾನದ ವಿವಾದ ಸಂಬಂಧ ಬುಧವಾರ ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ನಿಂಬರಗಿ ನೇತೃತ್ವದಲ್ಲಿ ಮತ್ತೊಂದು ಸುತ್ತಿನ ಶಾಂತಿಸಭೆ ನಡೆಯಿತು.

ಮುಖಂಡ ಅಬ್ದುಲ್ ರಜಾಕ್, ಕೇಂದ್ರೀಯ ಮುಸ್ಲಿಂ ಅಸೋಸಿಯೇಷನ್ ಸದಸ್ಯರು, ಬಿಬಿಎಂಪಿ ಮಾಜಿ ಸದಸ್ಯರು ಹಾಗೂ ಮೌಲ್ವಿಗಳು ಪಾಲ್ಗೊಂಡಿದ್ದರು.

ಮಂಗಳವಾರ ಹಿಂದೂ ಮುಖಂಡರ ಸಭೆ ನಡೆಸಿದ್ದ ಪೊಲೀಸರು, ಬುಧವಾರ ಈ ವಿಷಯಕ್ಕೆ ಸಂಬಂಧಿಸಿದಂತೆ ಮುಸ್ಲಿಂ ಮುಖಂಡರೊಂದಿಗೆ ಚರ್ಚಿಸಿ ಸೌಹಾರ್ದತೆ ಕಾಪಾಡುವಂತೆ ಕೋರಿದರು.

ಸಭೆ ಬಳಿಕ ಲಕ್ಷ್ಮಣ ನಿಂಬರಗಿ ಮಾತನಾಡಿ, ‘ಶಾಂತಿ ಕಾಪಾಡುವಂತೆ ಎಲ್ಲ ಮುಖಂಡರಲ್ಲೂ ಮನವಿ ಮಾಡಲಾಗಿದೆ. ಕಾನೂನು ಸುವ್ಯವಸ್ಥೆಗೆ ತೊಡಕಾಗುವ ವಿಚಾರದಲ್ಲಿ ಪ್ರತಿಯೊಬ್ಬರೂ ಎಚ್ಚರಿಕೆ ವಹಿಸಬೇಕೆಂದು ತಿಳಿಸಲಾಗಿದೆ. ಕಾನೂನು ಪಾಲಿಸುವುದಾಗಿ ಮುಖಂಡರು ಭರವಸೆ ನೀಡಿದ್ದಾರೆ’ ಎಂದರು.

ಈ ಮಧ್ಯೆ ಚಾಮರಾಜಪೇಟೆ ಈದ್ಗಾ ಮೈದಾನ ವಿಚಾರವಾಗಿ ಗುಪ್ತಚರ ಇಲಾಖೆಯಿಂದ ರಾಜ್ಯ ಸರ್ಕಾರಕ್ಕೆ ಮಾಹಿತಿ ನೀಡಿದೆ. ‘ಮೈದಾನದಲ್ಲಿ ಯಾವುದೇ ಚಟುವಟಿಕೆಗೂ ಅವಕಾಶ ನೀಡಬಾರದೆಂದು ಹೇಳಿದೆ’ ಎಂದು ಮೂಲಗಳು ತಿಳಿಸಿವೆ.

ಧ್ವಜಾರೋಹಣ: ಜಿಲ್ಲಾಧಿಕಾರಿಗೆ ಮನವಿ

ಬೆಂಗಳೂರು: ಚಾಮರಾಜಪೇಟೆ ಆಟದ ಮೈದಾನದಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಧ್ವಜಾರೋಹಣಕ್ಕೆ ಅವಕಾಶ ಮಾಡಿಕೊಡಬೇಕು ಎಂದು ವಿಶ್ವ ಸನಾತನ ಪರಿಷತ್ ಹಾಗೂ ಶ್ರೀ ರಾಮಸೇನೆ ಸದಸ್ಯರು ಜಿಲ್ಲಾಧಿಕಾರಿಯವರಿಗೆ ಮನವಿ ಸಲ್ಲಿಸಿದ್ದಾರೆ. ‘ಸ್ವಾತಂತ್ರ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಲಾಗಿದ್ದು, ಆಟದ ಮೈದಾನದಲ್ಲಿ ಧ್ವಜಾರೋಹಣಕ್ಕೆ ಅನುಮತಿ ನೀಡಬೇಕು ಎಂದು’ ಪರಿಷತ್‌ನ ಪ್ರಧಾನ ಕಾರ್ಯದರ್ಶಿ ಜಯಕುಮಾರ್ ಹಿರೇಮಠ್ ಹಾಗೂ ಸೇನೆ ಅಧ್ಯಕ್ಷ ಚಂದ್ರಶೇಖರ್ ಅವರು ಬೆಂಗಳೂರು ನಗರ ಜಿಲ್ಲಾಧಿಕಾರಿ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಬೆಂಗಳೂರಿನ ಸ್ಕಾಲರ್ ಸೇರಿ ನಾಲ್ವರಿಗೆ ಪ್ರಶಸ್ತಿ

ನವದೆಹಲಿ (ಪಿಟಿಐ): ದಕ್ಷಿಣ ಕೊರಿಯಾದ ಬೂಸಾನ್ ನಗರದಲ್ಲಿ ನಡೆಯುತ್ತಿರುವ ಅಂತರ ರಾಷ್ಟ್ರೀಯ ಖಗೋಳವಿಜ್ಞಾನ ಒಕ್ಕೂಟದ ಸಾಮಾನ್ಯ ಸಭೆಯಲ್ಲಿ (ಐಎಯುಜಿಎ) ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಗೋಪಾಲ್ ಹಾಜ್ರಾ ಸೇರಿದಂತೆ ಭಾರತದ ನಾಲ್ವರು ಖಗೋಳವಿಜ್ಞಾನಿಗಳು ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಸೂರ್ಯನ ಕುರಿತ ವಿದ್ಯಮಾನಗಳ ಅಧ್ಯಯನಕ್ಕೆ ಸಂಬಂಧಿಸಿದ ಸಂಶೋಧನೆ/ಅಧ್ಯಯನದಲ್ಲಿ ಗಮನಾರ್ಹ ಸಾಧನೆ ಮಾಡಿದವರನ್ನು ಐಎಯುಜಿಎ ಪ್ರಶಸ್ತಿಗೆ ಆಯ್ಕೆ ಮಾಡಿದೆ.

ಹಾಜ್ರಾ ಅವರು ಸೌರಕಲೆಗಳಿಗೆ ಸಂಬಂಧಿಸಿದ ವಿದ್ಯಮಾನ ವಿವರಿಸಲು ಕಂಪ್ಯೂಟರ್ ಆಧಾರಿತ ಮೂರು ಆಯಾಮಗಳ ಮಾದರಿಗಳನ್ನು ಅಭಿವೃದ್ಧಿಪಡಿಸಿದ್ದಾರೆ.

ಖಗೋಳವಿಜ್ಞಾನಿಗಳಾದ ಪ್ರಾಂತಿಕಾ ಭೌಮಿಕ್ (ಐಐಎಸ್‌ಇಆರ್, ಕೋಲ್ಕತ್ತ), ರಿತಿಕಾ ಜೋಶಿ (ಎಆರ್‌ಐಇಎಸ್, ನೈನಿತಾಲ್) ಹಾಗೂ ಸೌವಿಕ್ ಬೋಸ್ (ಓಸ್ಲೊ ವಿ.ವಿ) ಅವರಿಗೂ ಪ್ರಶಸ್ತಿ ಲಭಿಸಿದೆ.

ಕಾಂಗ್ರೆಸ್ ಮುಖಂಡರ ವಿರುದ್ಧ ದೂರು

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಅನುಮತಿ ಪಡೆಯದೇ ಸಿದ್ದರಾಮಯ್ಯ ಅವರ ಜನ್ಮದಿನಕ್ಕೆ ಶುಭಾಶಯ ಕೋರಿ ಫ್ಲೆಕ್ಸ್ ಅಳವಡಿಸಿದ್ದ ಕಾಂಗ್ರೆಸ್ ಮುಖಂಡರಾದ ಟಿ.ಎಸ್.ರಮೇಶ್ ಬಾಬು ಹಾಗೂ ಜಯಬಾಲ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಬಿಬಿಎಂಪಿಯ ವಸಂತನಗರದ ಸಹಾಯಕ ಕಂದಾಯ ಅಧಿಕಾರಿ ಬಿ.ವಿ.ವೀಣಾ ದೂರು ನೀಡಿದ್ದಾರೆ.

‘ಚಾಲುಕ್ಯ ಹೋಟೆಲ್ ಜಂಕ್ಷನ್‌ನಲ್ಲಿ ಅನಧಿಕೃತವಾಗಿ ಫ್ಲೆಕ್ಸ್ ಹಾಗೂ ಬ್ಯಾನರ್‌ಗಳನ್ನು ಅನುಮತಿ ಪಡೆಯದೆ ಅಳವಡಿಸಲಾಗಿದೆ. ಇಬ್ಬರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಕೋರಿದ್ದಾರೆ.



ಹಿಂದೂ ಮಹಾಸಭಾದ ಅಧ್ಯಕ್ಷ ಎನ್‌.ಸುಬ್ರಹ್ಮಣ್ಯರಾಜು ಅವರ ವಿರುದ್ಧ ಎಫ್‌ಐಆರ್ ದಾಖಲಿಸಲು ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರು ಬುಧವಾರ ಪ್ರತಿಭಟನೆ ನಡೆಸಿದರು

ಹಿಂದೂ ಮಹಾಸಭಾದ ಅಧ್ಯಕ್ಷರ ಬಂಧನಕ್ಕೆ ಆಗ್ರಹ

ಬೆಂಗಳೂರು: ‘ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರನ್ನು ಕೊಂದಿದ್ದು ನಾವೇ’ ಎಂದು ಹಿಂದೂ ಮಹಾಸಭಾದ ಅಧ್ಯಕ್ಷ ಎನ್.ಸುಬ್ರಹ್ಮಣ್ಯರಾಜು (ನಾರಾಯಣ) ಅವರು ಟಿ.ವಿ ಕಾರ್ಯಕ್ರಮವೊಂದರಲ್ಲಿ ಬಹಿರಂಗವಾಗಿ ಹೇಳಿಕೆ ನೀಡಿದ್ದು, ಅವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಎಂದು ಆಗ್ರಹಿಸಿ ವಸಂತ ನಗರದ ಹೈಗ್ರೌಂಡ್ಸ್ ಪೊಲೀಸ್ ಠಾಣೆ ಎದುರು ಕಾಂಗ್ರೆಸ್ ಕಾರ್ಯಕರ್ತರು ಬುಧವಾರ ಪ್ರತಿಭಟನೆ ನಡೆಸಿದರು.

‘ದೇಶ ವಿಭಜನೆಗೆ ಮಹಾತ್ಮ ಗಾಂಧೀಜಿ ಅವರೇ ಕಾರಣ ಎಂದು ಸುಬ್ರಹ್ಮಣ್ಯರಾಜು ಆಪಾದಿಸಿದ್ದು, ಇದು ದೇಶದ್ರೋಹದ ಹೇಳಿಕೆಯಾಗಿದೆ. ಇವರ ವಿರುದ್ಧ ಈ ಕೂಡಲೇ ಕಾನೂನು ಕ್ರಮ ಕೈಗೊಳ್ಳಬೇಕು. ಅಂತಹ ಹೇಳಿಕೆ ನೀಡುವ ಕಿಡಿಗೇಡಿಗಳನ್ನು ಗಡಿಪಾರು ಮಾಡಬೇಕು’ ಎಂದು ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್ ಆಗ್ರಹಿಸಿದರು. ಬಳಿಕ, ಕಾರ್ಯಕರ್ತರು ಪೊಲೀಸರಿಗೆ ಮನವಿ ಸಲ್ಲಿಸಿದರು.

ನಗರದ ಸುಚಿತಾಗೆ ಬಹುಮಾನ

ಮೈಸೂರು: ರಾಯಚೂರು ವಿಶ್ವವಿದ್ಯಾಲಯದ ಲಕ್ಷ್ಮಿ ಮಾನಸ, ಬೆಂಗಳೂರು ನಗರ ವಿ.ವಿಯ ಸುಚಿತಾ ಡಿ.ಬಿಳಿಗೆರೆ ಮತ್ತು ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿ ಕುಮಾರೇಶ ಎನ್.ಕಾತರಕಿ ಮೈಸೂರು ವಿಶ್ವವಿದ್ಯಾಲಯದಿಂದ ನಡೆಸಿದ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಕ್ರಮವಾಗಿ ಮೊದಲ ಮೂರು ಬಹುಮಾನ ಗಳಿಸಿದ್ದಾರೆ.

‘ಮುಡಾ ವ್ಯಾಪ್ತಿಯಲ್ಲಿ ಮುಚ್ಚಿಟ್ಟಿದ್ದ ₹5 ಸಾವಿರ ಕೋಟಿ ಮೌಲ್ಯದ ಆಸ್ತಿ ಪತ್ತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ವ್ಯಾಪ್ತಿಯಲ್ಲಿ ಅಧಿಕಾರಿಗಳು ಮುಚ್ಚಿಟ್ಟಿದ್ದ ಸುಮಾರು ₹5 ಸಾವಿರ ಕೋಟಿ ಮೌಲ್ಯದ ಆಸ್ತಿ ಪತ್ತೆ ಮಾಡಲಾಗಿದೆ’ ಎಂದು ನಗರಾಭಿವೃದ್ಧಿ ಸಚಿವ ಬಿ.ಎ. ಬಸವರಾಜ ತಿಳಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ಪ್ರಾಧಿಕಾರದ ವ್ಯಾಪ್ತಿಯಲ್ಲಿ ಸುಮಾರು 13 ಸಾವಿರ ನಿವೇಶನಗಳು ಪತ್ತೆಯಾಗಿವೆ. ಅವುಗಳನ್ನು ಹಂಚಿಕೆಯಾಗಲಿ, ಹರಾಜಿನ ಮೂಲಕವಾಗಲಿ ವಿಲೇವಾರಿ ಮಾಡದಿರುವುದು ಗಮನಕ್ಕೆ ಬಂದಿದೆ’ ಎಂದರು.

‘ಹಂಚಿಕೆಯಾಗಿದ್ದ ಕೆಲವು ನಿವೇಶನಗಳು ಫಲಾನುಭವಿಗಳಿಲ್ಲದ ಕಾರಣಕ್ಕೆ ಅಥವಾ ತಾಂತ್ರಿಕ ಕಾರಣದಿಂದ ರದ್ದು ಆಗಿದೆ. ಬಳಿಕ ಅವುಗಳ ಮರು ಹಂಚಿಕೆ ಆಗಿಲ್ಲ. 200ರಿಂದ 300 ಎಕರೆಯಷ್ಟು ಪ್ರಾಧಿಕಾರದ ಭೂಮಿ ಕೂಡ ಪತ್ತೆಯಾಗಿದ್ದು, ಎಲ್ಲವನ್ನೂ ಲೆಕ್ಕಾಚಾರ ಮಾಡಿದರೆ ₹ 4 ಸಾವಿರ ಕೋಟಿಯಿಂದ ₹ 5 ಸಾವಿರ ಕೋಟಿ ಬೆಲೆ ಬಾಳುತ್ತವೆ’ ಎಂದು ಅವರು ವಿವರಿಸಿದರು.

‘ಎಲ್ಲಿಯೂ ಅಕ್ರಮ ನಡೆದಿಲ್ಲ. ಆದರೆ, ಅವುಗಳ ಸೂಕ್ತ ಬಳಕೆ ಮಾಡಿಕೊಳ್ಳದೇ ಪ್ರಾಧಿಕಾರ ನಿರ್ಲಕ್ಷ್ಯ ತೋರಿದೆ. ಇವುಗಳನ್ನು ಫಲಾನುಭವಿಗಳಿಗೆ ಮಾರಾಟ ಮಾಡಿದ್ದರೆ ಪ್ರಾಧಿಕಾರಕ್ಕೆ ಆದಾಯ ಬರುತ್ತಿತ್ತು. ಮುಂದಿನ ದಿನಗಳಲ್ಲಿ ಇದನ್ನು ವಿಲೇವಾರಿ ಮಾಡಲು ಸೂಚಿಸಿದ್ದೇನೆ. ಖಾಲಿ ನಿವೇಶನಗಳನ್ನು ಬಡಾವಣೆಗಳಾಗಿ ಅಭಿವೃದ್ಧಿಪಡಿಸುವುದು, ನಿವೇಶನಗಳನ್ನು ಹಂಚಿಕೆ ಮಾಡುವುದು, ಹರಾಜು ಹಾಕುವುದರ ಜೊತೆಗೆ ಗುಂಪು ಮನೆಗಳನ್ನು ನಿರ್ಮಿಸಲಾಗುವುದು’ ಎಂದು ಸಚಿವರು ತಿಳಿಸಿದರು.

‘ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವನ್ನು ಹೊರತುಪಡಿಸಿದರೆ ಇತರ ನಗರಾಭಿವೃದ್ಧಿ ಪ್ರಾಧಿಕಾರಗಳು ಆರ್ಥಿಕವಾಗಿ ಸದೃಢವಾಗಿಲ್ಲ. ನಾನು ಸಚಿವನಾದ ಬಳಿಕ ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಒಂದು ಸಾವಿರ ಎಕರೆಯಲ್ಲಿ ಬಡಾವಣೆಗಳನ್ನು ನಿರ್ಮಿಸಿ, ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಅವುಗಳ ಹಂಚಿಕೆಯಿಂದ ಪ್ರಾಧಿಕಾರಕ್ಕೆ ₹ 500 ಕೋಟಿ ಆದಾಯ ನಿರೀಕ್ಷಿಸಿದ್ದು, ಅದರಿಂದ ಆರ್ಥಿಕ ಚೈತನ್ಯ ಸಿಗಲಿದೆ. ಬಳ್ಳಾರಿ ಪ್ರಾಧಿಕಾರ ವ್ಯಾಪ್ತಿಯಲ್ಲಿ 120 ಎಕರೆ, ಬೆಳಗಾವಿಯಲ್ಲಿ 100 ಎಕರೆ, ದಾವಣಗೆರೆಯಲ್ಲಿ 57 ಎಕರೆ ಖರೀದಿಸಿ ಬಡಾವಣೆ ನಿರ್ಮಿಸಲು ಚಿಂತನೆ ನಡೆದಿದೆ’ ಎಂದರು.

‘ಹಲವೆಡೆ ರೈತರು ಜಮೀನು ಕೊಡಲು ಮುಂದೆ ಬರುವುದಿಲ್ಲ. ಅವರ ಮನವೊಲಿಸುವುದು ಕಷ್ಟವಿದೆ. ಕೆಲವೆಡೆ ಪ್ರಾಧಿಕಾರದಲ್ಲಿ ಹಣ ಇಲ್ಲದ್ದರಿಂದ ರೈತರಿಗೆ ಪರಿಹಾರ ನೀಡಿ ಬಡಾವಣೆ ನಿರ್ಮಾಣ, ನಿವೇಶನ ಅಭಿವೃದ್ಧಿ, ಮೂಲಸೌಕರ್ಯ ಅಭಿವೃದ್ಧಿಯಂಥ ಕಾಮಗಾರಿಗಳನ್ನು ಕೈಗೆತ್ತುಕೊಳ್ಳಲು ಕಷ್ಟವಾಗಿದೆ. ಎಷ್ಟೇ ಜಮೀನು ಸಿಕ್ಕಿದರೂ ಖರೀದಿಸಿ ನಿವೇಶನ ಮಾಡಿ ಹಂಚಿಕೆ ಮಾಡಲು ಪ್ರಾಧಿಕಾರಗಳಿಗೆ ಸೂಚಿಸಲಾಗಿದೆ’ ಎಂದೂ ಸಚಿವರು ವಿವರಿಸಿದರು.

ಚಿತ್ರಾವಳಿ



ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ನಗರದಲ್ಲಿ ಬುಧವಾರ ಆಮ್ ಆದ್ಮಿ ಪಕ್ಷದ ವತಿಯಿಂದ ತ್ರಿವರ್ಣ ಸಂಭ್ರಮ ಬೈಕ್ ರ್‍ಯಾಲಿ ನಡೆಯಿತು. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ, ಮುಖಂಡ ಭಾಸ್ಕರ ರಾವ್, ಪ್ರಚಾರ ಸಮಿತಿ ಅಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು ಪಾಲ್ಗೊಂಡಿದ್ದರು



‘ಹರ್ ಘರ್ ತಿರಂಗಾ’ ಅಭಿಯಾನದ ಅಂಗವಾಗಿ ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್ ನಗರದಲ್ಲಿ ಬುಧವಾರ ಸದಸ್ಯರು ಹಾಗೂ ಗ್ರಾಹಕರಿಗೆ ರಾಷ್ಟ್ರಧ್ವಜಗಳನ್ನು ವಿತರಿಸಿತು



ಸ್ವಾತಂತ್ರ್ಯದ ಅಮೃತಮಹೋತ್ಸದ ಅಂಗವಾಗಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಚಾರಿತ್ರಿಕ ದಾಖಲೆಗಳ ಪ್ರದರ್ಶನಕ್ಕೆ ಬುಧವಾರ ಚಾಲನೆ ನೀಡಲಾಯಿತು. ಸಚಿವರಾದ ವಿ.ಸುನಿಲ್ ಕುಮಾರ್, ಬೈರತಿ ಬಸವರಾಜ್, ವಿ.ಸೋಮಣ್ಣ ವೀಕ್ಷಿಸಿದರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

House

General

KERALA STYLE house in Bangalore. CLEAR TITLE. 2storied, 4BHK, 45x60sqft. Has padippura, 2sopanam, watchman's room, storage room, mini waterfall, mango tree, lotus pond. Family relocating. Rs 2.75Cr. Call 09945109189.

JOB OPPORTUNITIES

Teachers/ Professors

AVK GROUP OF INSTITUTIONS
8/9, 27th Cross, Opp. Monotype, Banasankari 2nd Stage, Bangalore-70.
REQUIRES
FOR COLLEGE AT MAGADI ROAD
DIRECTOR - MBA
ASSISTANT PROFESSORS
LECTURERS/ NURSING TUTORS
LIBRARIAN
FOR DEGREE COLLEGE AT BANASHANKARI
COMPUTER SCIENCE & COMMERCE LECTURERS
ACCOUNTS ASSISTANT
FOR SCHOOL AT JEEVAN BHIMA NAGAR
HEAD MISTRESS / HEAD MASTER
SCIENCE / MATHS TEACHER FOR PRIMARY & HIGH SCHOOL
ACCOUNTS ASSISTANT
P.T. TEACHER
WALK-IN-INTERVIEW on 13/08/2022 SATURDAY Between 10.00AM to 3.00PM
-Chairman

Hotel

REQUIRED IMMEDIATELY for THE ODYSSEY RETREAT RESORT at KanakapuraRoad. FRONT OFFICE EXECUTIVE, CAPTAINS, STEWARDS, HOUSEKEEPING BOYS, OPERATIONS MANAGER, ACCOUNTS MANAGER. Call:9880470004 vivaciousdestinations @gmail.com

Multiple Vacancy

REQUIRED TEAMLEADER, Telecaller, & FieldExecutive For BankLoan collection. direct recruitment to company Contact:- 9620206756, 9620200756.

BUSINESS

Business Offers

Finance

NRI'S INVESTMENT And Finance Available On Low Interest Against Properties, Land & Building,Sites,Flats, Converted& Agriculture Lands Call:7411265189

WANTED BUSINESS Partner Veg Hotel 10 Lakhs Investment Monthly Income 1 Lakhs Contact: 8892501007/9606701007

PERSONAL

Lost

LOST
We, Muzammil Ahamed and Noor Ayesha r/at No 993, 46th Cross, Kumaraswamy Layout 2nd Stage, Bangalore-78, have lost the original Allotment letter and sale deed 7th and 8th pages of Document No. 2507/2004-2005, Book-1, CD No. 28 dated 26/07/2004, of Site No. 2882, Kumarswamy Layout, 2nd Stage Bangalore which is registered in the office of Sub-Registrar, Basavanagudi, Bangalore. In this regard we have lodged missing complaint with the Lost Article Report Reference No. 0289396/2022 dated: 10-08-2022. If found please call : 9900147427

Change of Name

I, SUREKHA DHANDIBA DHEKHANE alias SUREKHA PRAKASH DHONDIBA DHEKHANE R/o. No. 11, 1st Main Amarajyothinagar Vijayanagar, Nagarabhavi Main Road Bangalore-560040, have changed my name to SUREKHA PRAKASH vide affidavit dated 04.08.2022, before notary M.C. Palanetrappa Bangalore. Henceforth I shall be known as SUREKHA PRAKASH only.

I SUDHAKAR SATHYANARAYANA SETTY GUDIBANDE, R/a, No.C- 603, Mantri Elite Bilekehalli, Bannerghatta Road, Bengaluru - 560076 Have Changed my name to SUDHAKAR GOTLUR SATHYANARAYANA SETTY vide Affidavit Dated 10/08/2022 Before Notary Mamatha. N.K Bangalore

I, S. Srividya, Residing at #202, Comfort Gardenia, #68/D-1, Jogupalya Main Road, Halasuru, Bengaluru-560008, have changed my daughter's name from DHIYA. V to AADHIRA. V.S. vide affidavit dated 10.08.2022, before notary S.I. Balaguru, Bengaluru. Henceforth she shall be called AADHIRA. V.S. only.

I, SAGAYA NATHAN KENNEDY Residing at No. 111, 11th Cross, Pipeline behind Canara Bank Malleswaram Bangalore-560003 have changed my name to S.K. PRAVEEN vide affidavit dated 10.08.2022, before notary L. Veena Bangalore. Henceforth I shall be known as S.K. PRAVEEN only.

DEEPALI SANBHAJI PATIL W/O GOVIND PATIL R/A NO N1/9 Phase1 DRDO CV RAMAN NAGAR BANGALORE my name DEEPALI SANBHAJI PATIL TO DEEPALI GOVIND PATIL MY DOB FROM 13/01/1984 TO 20/07/1982 VI ADDL CHIEF METROPOLITAN MAGISTRATE BANGALORE

I, V. SRILAKSHMI residing at #88, G/F, Railway Parallal Road, Venkateshwara Layout, BCC Layout, Vijayanagar, Bengaluru-560040, have changed my name to M. S. LAXMI PRABHU vide affidavit dated 09-08-2022 sworn before notary L.Puttaraju, Bengaluru.

I, PRAVEENKUMAR R/at Platinum City, E Block 004, Near CMTI, Tumkur Road Yeswanthpur, Bangalore-560022, have changed my name to PRAVEENKUMAR KULKARNI vide affidavit dated: 10/8/2022 Before Notary Kundan Babu M Bangalore.

I ROOPA SURAJ R/a, #285/B-12 9th A main road, Jayanagar 5th Block, Bengaluru- 560041 Have Changed my name to ROOPA BUDGIRI SURAJ vide Affidavit Dated 10/08/2022 Before Notary Mamatha. N.K Bangalore

I, MARIA Snega D/o Subramani, #97 Ramachandrapura Bangalore- 560013 have changed my name to Sneha S Affidavit Dated-03/08/2022 Notary-Advocate Uday Kumar k Bangalore

I,MANASI TARIKERE VIJAYAKUMAR, changed-my name-to MANASI MAHESH TARIKERE VIJAYAKUMAR Dtd:04-08-2022. Sworn_before Notary H.S.Sakalesh Aradhya, Bengaluru.

14842564F HAV/MT SUBBA REDDY KOTA 5071 ASC BN MOTHER NAME RECORDS NARASAMMA instead of KOTA NARASAMMANOTARY KV MANI

14842564F HAV/MT SUBBA REDDY KOTA 5071 ASC BN FATHER NAME RECORDS SUBBA RAYUDU instead of KOTA SUBBA RAYUDUNOTARY KV MANI

I, SHAIK SABAH FATIMA RIZWAN R/a #101, Vasthav Residency 4th A Main 6th Cross NS Playa, BTM Layout 2nd Stage Bengluru-76, Have Changed Name to SABAH FATIMA SHAIK vide Affidavit 10.08.2022 Before Notary Hemalatha, Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH ಪ್ರಜಾವಾಣಿ
Classifieds EDUCATION SPECIAL
SPECIAL RATES FOR • Admission Notice, Education Success • Congratulation Ads
For More Details Contact:
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

ಪಿಟಿಸಿಎಲ್ ಕಾಯ್ದೆ ಸಮಗ್ರ ತಿದ್ದುಪಡಿಗೆ ಆಗ್ರಹ: ಸಭೆ ನಡೆಸಿದ ಭೂ ವಂಚಿತರ ಹೋರಾಟ ಸಮಿತಿ

ಅಹೋರಾತ್ರಿ ಹೋರಾಟಕ್ಕೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಭೂಮಿ ಪರಭಾರೆ ನಿಷೇಧ (ಪಿಟಿಸಿಎಲ್) ಕಾಯ್ದೆ ಸಮಗ್ರ ತಿದ್ದುಪಡಿ ಬಗ್ಗೆ ಮುಂದಿನ ಅಧಿವೇಶನದ ವೇಳೆಗೆ ಸರ್ಕಾರ ಸ್ಪಷ್ಟ ನಿರ್ಧಾರ ಪ್ರಕಟಿಸದಿದ್ದರೆ ಅಹೋರಾತ್ರಿ ಹೋರಾಟ ನಡೆಸಲು ದಲಿತ ಮುಖಂಡರು ನಿರ್ಧರಿಸಿದ್ದಾರೆ.

ಭೂ ವಂಚಿತರ ಹೋರಾಟ ಸಮಿತಿ ಬುಧವಾರ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

ಪ್ರಜಾ ಪರಿವರ್ತನಾ ವೇದಿಕೆಯ ಅಧ್ಯಕ್ಷ ಬಿ.ಗೋಪಾಲ್ ಮಾತನಾಡಿ, 'ವಿಧಾನ ಮಂಡಲ ಅಧಿವೇಶನ ಪ್ರಾರಂಭವಾಗುವ ಮುನ್ನ ಕಾಯ್ದೆ ತಿದ್ದುಪಡಿ ಕುರಿತು ರಾಜ್ಯ ಸರ್ಕಾರ ಸರಿಯಾದ ನಿರ್ಧಾರ ಕೈಗೊಳ್ಳಬೇಕು. ನಿರ್ಲಕ್ಷ್ಯ ವಹಿಸಿದರೆ ನಿರಂತರ ಹೋರಾಟ ನಡೆಸಬೇಕಾಗುತ್ತದೆ' ಎಂದು ಎಚ್ಚರಿಸಿದರು.

ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ ಮಾತನಾಡಿ, 'ಪಿಟಿಸಿಎಲ್ ಕಾಯ್ದೆ ತಿದ್ದುಪಡಿ ಅನುಷ್ಠಾನದ ಬಗ್ಗೆ ಸ್ಪಷ್ಟ ನಿರ್ಧಾರ ಕೈಗೊಳ್ಳಲು ಇದೇ 18ರಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ 51 ಶಾಸಕರ ಸಭೆ ಕರೆಯಲಾಗಿದೆ. ಸಭೆಯಲ್ಲಿ ವ್ಯಕ್ತವಾಗುವ ಅಭಿಪ್ರಾಯ ಆಧರಿಸಿ 19ರಂದು ದಲಿತ ಮುಖಂಡರ ಸಭೆ ನಡೆಸುವುದು ಸೂಕ್ತ' ಎಂದರು.

ಪಿಟಿಸಿಎಲ್ ತಿದ್ದುಪಡಿ ಕಾಯ್ದೆ ಅನುಷ್ಠಾನಕ್ಕೆ ಸರ್ಕಾರ ಅವಕಾಶ ನೀಡುತ್ತಿಲ್ಲ. ದಲಿತ ಸಮುದಾಯದವರು ಒಟ್ಟಾಗಿ ದೊಡ್ಡ ಮಟ್ಟದಲ್ಲಿ ಹೋರಾಟ ನಡೆಸಬೇಕಿದೆ ಎಂದು ಹೇಳಿದರು.

ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ರಾಜ್ಯ ಘಟಕದ ಅಧ್ಯಕ್ಷ ಎಂ ವೆಂಕಟಸ್ವಾಮಿ, 'ಪಿಟಿಸಿಎಲ್ ಕಾಯ್ದೆ ತಿದ್ದುಪಡಿಗೆ ಮುಖ್ಯಮಂತ್ರಿ ಸಿದ್ಧರಿದ್ದರೂ ಕಂದಾಯ ಸಚಿವ ಆರ್.ಅಶೋಕ ಅಡ್ಡಿಪಡಿಸುತ್ತಿದ್ದಾರೆ. ಶಾಸಕರಾದ ಎಂ.ಪಿ.ಕುಮಾರಸ್ವಾಮಿ ಮತ್ತು ಎನ್.ಮಹೇಶ್ ಅವರು ಪ್ರಾಮಾಣಿಕವಾಗಿ ಬೆಂಬಲ ವ್ಯಕ್ತಪಡಿಸಿದ್ದಾರೆ' ಎಂದರು. ಮುಖಂಡರಾದ ಮಾವಳ್ಳಿ ಶಂಕರ್, ಹೆಣ್ಣೂರು ಶ್ರೀನಿವಾಸ್ ಮಾತನಾಡಿದರು.

ದಲಿತ ಸಂಘರ್ಷ ಸಮಿತಿಯ (ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಹೆಣ್ಣೂರು ಶ್ರೀನಿವಾಸ್ ಮಾತನಾಡಿದರು. ಅನಂತ ನಾಯಕ್, ನರಸಿಂಹ ನಾಯಕ್, ಎಂ.ಎಚ್. ಮಂಜುನಾಥ್, ಈಶ್ವರ್ ಬಳ್ಳಾರಿ, ಶಾಂತಕುಮಾರ್ ಚಳ್ಳಕೆರೆ, ತುಮಕೂರಿನ ದಾಸಪ್ಪ ಸಭೆಯಲ್ಲಿ ಭಾಗವಹಿಸಿದ್ದರು.



ಸಭೆಯಲ್ಲಿ ಎಂ.ವೆಂಕಟಸ್ವಾಮಿ, ಜ್ಞಾನಪ್ರಕಾಶ ಸ್ವಾಮೀಜಿ, ಬಿ.ಗೋಪಾಲ್, ಮಾವಳ್ಳಿ ಶಂಕರ್ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ತಹಶೀಲ್ದಾರ್ ಹುದ್ದೆ ಕೊಡಿಸುವುದಾಗಿ ಲಕ್ಷಾಂತರ ರೂಪಾಯಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಹಶೀಲ್ದಾರ್ ಹುದ್ದೆ ಕೊಡಿಸುವುದಾಗಿ ನಂಬಿಸಿ ಯುವತಿಯಿಂದ ₹ 59.50 ಲಕ್ಷ ಹಣ ಪಡೆದಿದ್ದ ಆರೋಪಿ ಸಿದ್ದರಾಜು ಕಟ್ಟಿಮನಿ ಎಂಬಾತನನ್ನು ವಿಜಯನಗರ ಪೊಲೀಸರು ಬಂಧಿಸಿದ್ದಾರೆ.

ಈತ ಐಎಎಸ್, ಐಪಿಎಸ್ ಅಧಿಕಾರಿಗಳ ಹೆಸರು ಬಳಸಿಕೊಂಡು ಉದ್ಯೋಗಾಕಾಂಕ್ಷಿಗಳಿಂದ ಹಣ ಪಡೆದು ವಂಚಿಸುತ್ತಿದ್ದ.

ಕಲಬುರಗಿ ಜಿಲ್ಲೆಯ ಅಫಜಲಪುರದ ಯುವತಿ ಸವಿತಾ ಶಾಂತಪ್ಪ ಎಂಬುವರಿಗೆ ತಹಶೀಲ್ದಾರ್ ಹುದ್ದೆ ಕೊಡಿಸುವುದಾಗಿ ನಂಬಿಸಿ, ಹಣ ಪಡೆದಿದ್ದ. ಬೆಂಗಳೂರಿನ ವಿಜಯನಗರದ ಪಿ.ಜಿಯಲ್ಲಿದ್ದು ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದಾಗ ಯುವತಿಗೆ ಆರೋಪಿ ಪರಿಚಯವಾಗಿದ್ದ. ಕೆಲಸ ಹಾಗೂ ಹಣ ಎರಡೂ ಸಿಗದಿದ್ದಾಗ ವಂಚನೆಗೆ ಒಳಗಾದ ಯುವತಿ ಆಗಸ್ಟ್ 6ರಂದು ಪೊಲೀಸರಿಗೆ ದೂರು ನೀಡಿದ್ದರು.

'ಹಂತ ಹಂತವಾಗಿ ಹಣ ಪಡೆದುಕೊಂಡಿದ್ದ. ಮೊದಲ ಕಂತಿನಲ್ಲಿ ₹ 15 ಲಕ್ಷ ಪಡೆದಿದ್ದ. ಬಳಿಕ ಉಳಿಕೆ ಹಣ ಪಡೆದಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬೆದರಿಕೆ ಹಾಕಿದ್ದ ಆರೋಪಿ: 'ಹಣ ವಾಪಸ್ ನೀಡುವಂತೆ ಯುವತಿ ಹಾಗೂ ಆಕೆಯ ತಂದೆ ಕೇಳಿದಾಗ ಮನೆಯಲ್ಲಿ ಯಾರನ್ನೂ ಜೀವಂತವಾಗಿ ಉಳಿಸುವುದಿಲ್ಲ. ಹಣ ಸಹ ವಾಪಸ್ ನೀಡುವುದಿಲ್ಲ' ಎಂದು ಬೆದರಿಕೆ ಹಾಕಿದ್ದ. ವಾಮಮಾರ್ಗದಲ್ಲಿ ಸರ್ಕಾರಿ ಉದ್ಯೋಗ ಪಡೆಯಲು ಮುಂದಾಗಿದ್ದ ಯುವತಿ ತಂದೆ ಸಾಲ ಮಾಡಿ ಹಣ ನೀಡಿದ್ದರು. ಆರೋಪಿ ಸಿದ್ದರಾಜು ಸಹ ವಿವಿಧ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಿದ್ದ. ಅದರಲ್ಲಿ ಯಶಸ್ಸು ಕಂಡಿರಲಿಲ್ಲ. ಪರೀಕ್ಷೆಗೆ ಸಾಕಷ್ಟು ಹಣವನ್ನೂ ಕಳೆದುಕೊಂಡಿದ್ದ. ಬಳಿಕ ವಂಚನೆಗೆ ಮುಂದಾಗಿದ್ದ. ಈತ ಮತ್ತಷ್ಟು ಉದ್ಯೋಗ ಆಕಾಂಕ್ಷಿಗಳಿಂದ ಹಣ ಪಡೆದಿರುವ ಶಂಕೆ ವ್ಯಕ್ತವಾಗಿದೆ. ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಠಾಣೆ ಮೇಲಿನ ದಾಳಿ ಭಯೋತ್ಪಾದನಾ ಕೃತ್ಯ'

ಬೆಂಗಳೂರು: 'ಪೊಲೀಸ್ ಠಾಣೆಗಳ ಮುಂದೆ ಉದ್ರಿಕ್ತ ಜನರು ಗುಂಪುಗೂಡಿ ಪೆಟ್ರೋಲ್ ಭರ್ತಿ ಮಾಡಿದ ಬಾಟಲ್‌ಗಳನ್ನು ಎಸೆಯುವುದು, ಮಾರಕಾಸ್ತ್ರಗಳಿಂದ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿ ಗಲಭೆ ಉಂಟು ಮಾಡಿ ಭಯ ಹುಟ್ಟಿಸುವುದನ್ನು ನ್ಯಾಯಾಲಯ ಭಯೋತ್ಪಾದನಾ ಕೃತ್ಯದ ಅಡಿಯಲ್ಲೇ ಪರಿಗಣಿಸಬೇಕಾಗುತ್ತದೆ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಬೆಂಗಳೂರಿನ ದೇವರಜೀವನ (ಡಿಜೆ) ಹಳ್ಳಿ ಮತ್ತು ಕಾಡುಗೊಂಡನ (ಕೆಜಿ) ಹಳ್ಳಿ ಪೊಲೀಸ್ ಠಾಣೆಗಳ ಮೇಲೆ 2020ರ ಆಗಸ್ಟ್ 11ರಂದು ನಡೆದ ದಾಳಿ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಗಳ ಜಾಮೀನು ಅರ್ಜಿ ತಿರಸ್ಕರಿಸಿದ ನ್ಯಾಯಪೀಠ, 'ಆರೋಪಿಗಳ ವಿರುದ್ಧ ಮೇಲ್ನೋಟಕ್ಕೆ ಸಾಕಷ್ಟು ಪುರಾವೆಗಳು ಕಂಡುಬರುತ್ತಿರುವ ಕಾರಣ ನಿಯಮಿತ (ರೆಗ್ಯುಲರ್) ಜಾಮೀನು ನೀಡಲಾಗದು' ಎಂದು ಹೇಳಿದೆ.

ನಿಯಮಿತ ಜಾಮೀನು ಕೋರಿ ಆರೋಪಿಗಳಾದ ಅತೀಕ್ ಅಹಮದ್, ಶಫಿ ಖಾನ್, ಶಾಹಿದ್ ಪಾಷ, ತಬ್ರೇಜ್ ಮತ್ತು ಅಬ್ದುಲ್ ಬಶೀರ್ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಗಳ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಕೆ.ಸೋಮಶೇಖರ್ ಹಾಗೂ ನ್ಯಾಯಮೂರ್ತಿ ಶಿವಶಂಕರ ಅಮರಣ್ಣವರ ಅವರಿದ್ದ ವಿಭಾಗೀಯ ನ್ಯಾಯಪೀಠ ಕಳೆದ ಜುಲೈ 19ರಂದು ಕಾಯ್ದಿರಿಸಿದ್ದ ತೀರ್ಪು ಪ್ರಕಟಿಸಿದೆ.

ಆರೋಪಿಗಳ ಪರ ವಕೀಲ ಮೊಹಮದ್ ತಾಹಿರ್, 'ರಾಷ್ಟ್ರೀಯ ತನಿಖಾ ದಳ (ಎನ್ಐಎ) ತನಗೆ ತೋಚಿದಂತೆ ಸಾಕ್ಷಿಗಳ ಹೇಳಿಕೆಗಳನ್ನು ತಿರುಚಿದೆ. ತನಿಖೆಯಲ್ಲಿ ಲಭ್ಯವಿರುವ ಸಾಕ್ಷ್ಯಗಳ ಪ್ರಕಾರ ಆರೋಪಿಗಳು ದೊಂಬಿ ಅಥವಾ ಗಲಭೆಯಲ್ಲಿ ಭಾಗವಹಿಸಿರಲಿಲ್ಲ' ಎಂಬ ವಾದವನ್ನು ನ್ಯಾಯಪೀಠ ತಳ್ಳಿ ಹಾಕಿದೆ. ಎನ್ಐಎ ಪರ ಪಿ.ಪ್ರಸನ್ನಕುಮಾರ್ ವಾದ ಮಂಡಿಸಿದ್ದರು.

ಸ್ತನ್ಯಪಾನ ಜಾಗೃತಿ ಕಾರ್ಯಕ್ರಮದಲ್ಲಿ ನಟಿ ಪ್ರಣೀತಾ ಸುಭಾಷ್ ಅನಿಸಿಕೆ

'ಎದೆಹಾಲಿನಿಂದ ರೋಗನಿರೋಧಕ ಶಕ್ತಿ ಹೆಚ್ಚಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಾಯಿಯ ಎದೆಹಾಲಿನಲ್ಲಿ ಮಗುವಿನ ಬೆಳವಣಿಗೆಗೆ ಬೇಕಾದ ಪೌಷ್ಟಿಕತೆ, ಖನಿಜಾಂಶ ಮತ್ತು ಹೇರಳವಾದ ನೀರಿನ ಅಂಶಗಳು ಅಡಕವಾಗಿವೆ. ಶಿಶುಗಳಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಳಕ್ಕೆ ತಾಯಿಯ ಎದೆಹಾಲು ಸಹಕಾರಿ' ಎಂದು ಚಲನಚಿತ್ರ ನಟಿ ಪ್ರಣೀತಾ ಸುಭಾಷ್ ತಿಳಿಸಿದರು.

ಯಶವಂತಪುರದ ಮಣಿಪಾಲ್ ಆಸ್ಪತ್ರೆಯು ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸ್ತನ್ಯಪಾನ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು. 'ತಾಯಿಯ ಎದೆಹಾಲು ಮಗುವಿಗೆ ಮೊದಲ ಲಸಿಕೆಯಾಗಿದ್ದು, ರೋಗಗಳಿಂದ ರಕ್ಷಣೆ ಒದಗಿಸಲಿದೆ. ಸ್ತನ್ಯಪಾನ ಮಕ್ಕಳ ಮೇಲೆ ಹೆಚ್ಚಿನ ಸಕಾರಾತ್ಮ ಪರಿಣಾಮ ಬೀರುತ್ತದೆ. ತಾಯಿ ಮತ್ತು ಮಗುವಿನ ಬಾಂಧವ್ಯ ಬಲಗೊಳ್ಳಲು ಸ್ತನ್ಯಪಾನ ಸಹಕಾರಿ' ಎಂದು ಹೇಳಿದರು.

ನವಜಾತ ಶಿಶುಗಳ ರೋಗತಜ್ಞ ಡಾ. ಫಣಿಭೂಷಣ್, 'ತಾಯಿಯ ಎದೆಹಾಲಿನಷ್ಟು ಪೋಷಕಾಂಶ ಭರಿತ ಆಹಾರ ಭೂಮಿಯ ಮೇಲೆ ಬೇರೆ ಇಲ್ಲ. ಮೊದಲ ಮೂರು ದಿನದ ಹಾಲಿನಲ್ಲಿ ಹೆಚ್ಚು ರೋಗನಿರೋಧಕಗಳಿರಲಿದ್ದು, ಮಗುವಿನಲ್ಲಿ ರೋಗ ಪ್ರತಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಜನಿಸಿದ ಒಂದು ಗಂಟೆಯೊಳಗೆ ಹಾಲುಣಿಸಲು ಪ್ರಾರಂಭಿಸಿ, ಆರು ತಿಂಗಳವರೆಗೆ ಎದೆಹಾಲನ್ನು ಮಾತ್ರ ನೀಡಬೇಕು' ಎಂದು ತಿಳಿಸಿದರು.

ಸ್ತ್ರೀರೋಗ ತಜ್ಞೆ ಡಾ. ಜ್ಯೋತಿ ವಿ. ಶೆಣೈ, 'ಎದೆಹಾಲಿನ ಬಗ್ಗೆ ಜಾಗೃತಿ ಹೆಚ್ಚಬೇಕು. ಶಿಶುಗಳು ಆರೋಗ್ಯದಿಂದ ಇರಲು ಎದೆಹಾಲು ಸಹಕಾರಿ' ಎಂದು ಹೇಳಿದರು.



ಸ್ತನ್ಯಪಾನ ಜಾಗೃತಿ ಕಾರ್ಯಕ್ರಮದಲ್ಲಿ ಡಾ. ಜ್ಯೋತಿ ವಿ. ಶೆಣೈ, ಪ್ರಣೀತಾ ಸುಭಾಷ್, ಯಶವಂತಪುರದ ಮಣಿಪಾಲ್ ಆಸ್ಪತ್ರೆ ನಿರ್ದೇಶಕ ಕರ್ನಲ್ ರಾಹುಲ್ ತಿವಾರಿ ಮತ್ತು ಡಾ. ಫಣಿಭೂಷಣ್ ಅವರು 'ಮಹಿಳಾ ಆರೋಗ್ಯ ಪ್ಯಾಕೇಜ್' ಬಿಡುಗಡೆ ಮಾಡಿದರು –ಪ್ರಜಾವಾಣಿ ಚಿತ್ರ

'ಪ್ರಸಿದ್ಧಿಗೆ ಬರಲು ರಾಕೇಶ್ ಟಿಕಾಯತ್‌ಗೆ ಮಸಿ'

ಬೆಂಗಳೂರು: ಭಾರತೀಯ ಕಿಸಾನ್ ಒಕ್ಕೂಟದ (ಬಿಕೆಯು) ಮುಖಂಡ ರಾಕೇಶ್ ಟಿಕಾಯತ್ (55) ಮೇಲೆ ನಗರದಲ್ಲಿ ನಡೆದಿದ್ದ ಸಭೆಯಲ್ಲಿ ಮಸಿ ಬಳಿದು ಹಲ್ಲೆ ನಡೆಸಿದ್ದ ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ಹೈಗ್ರೌಂಡ್ಸ್ ಪೊಲೀಸರು, 8ನೇ ಎಸಿಎಂಎಂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

'ಆರೋಪಿಗಳು ತಮ್ಮ ಹೆಸರು ರಾತ್ರೋರಾತ್ರಿ ಮುಂಚೂಣಿಗೆ ಬರಬೇಕು. ರಾಜ್ಯದಲ್ಲಿ ಹೆಸರು ಮಾಡಬೇಕೆಂಬ ದುರುದ್ದೇಶದಿಂದ ಟಿಕಾಯತ್‌ಗೆ ಮಸಿ ಬಳಿದಿದ್ದರು' ಎಂಬ ಅಂಶವನ್ನು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಆಡಿಯೊ ಸಾಕ್ಷ್ಯ, 89 ಮಂದಿಯ ಹೇಳಿಕೆ ಸೇರಿ 450 ಪುಟಗಳ ಪಟ್ಟಿಯನ್ನು ನ್ಯಾಯಾಲಯಕ್ಕೆ ಪೊಲೀಸರು ಸಲ್ಲಿಸಿದ್ದಾರೆ.

'ನಗರದಲ್ಲಿ ಸಭೆ ನಡೆಯುವ ಮಾಹಿತಿ ತಿಳಿದಿದ್ದ ಆರೋಪಿಗಳು ಒಂದು ವಾರಕ್ಕೂ ಮೊದಲು ತಂತ್ರ ರೂಪಿಸಿದ್ದರು. ಟಿಕಾಯತ್ ಮೇಲೆ ಕೊಳೆತ ಟೊಮೆಟೊ ಹಾಗೂ ಮೊಟ್ಟೆ ಎಸೆಯುವ ಯೋಜನೆ ರೂಪಿಸಿಕೊಂಡಿದ್ದರು. ಅದು ಸಾಧ್ಯವಾಗದಿದ್ದರೆ ಮಸಿ ಬಳಿಯಲು ನಾಲ್ವರು ಒಂದೆಡೆ ಚರ್ಚಿಸಿ ಯೋಜನೆ ರೂಪಿಸಿಕೊಂಡು ಸಭೆಗೆ ಬಂದಿದ್ದರು' ಎಂದು ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಹಲ್ಲೆಯಿಂದ ರಾಕೇಶ್ ಟಿಕಾಯತ್ ಕೈಗೆ ತೀವ್ರ ಪೆಟ್ಟಾಗಿತ್ತು. ಮಸಿ ಎರಚಿದ್ದರಿಂದ ಅವರ ಕಣ್ಣಿಗೂ ಹಾನಿಯಾಗಿತ್ತು. ಈ ಘಟನೆ ಖಂಡಿಸಿ ರಾಜ್ಯದಾದ್ಯಂತ ರೈತ ಸಂಘಟನೆಗಳು ಪ್ರತಿಭಟನೆ ನಡೆಸಿದ್ದವು.

ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಕುಸಿದು ಬಿದ್ದು ಮಹಿಳೆ ಸಾವು

ಕೆ.ಆರ್.ಪುರ: ಬಟ್ಟರಹಳ್ಳಿ ಜಂಕ್ಷನ್ ಬಳಿ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆ ಕುಸಿದು ಬಿದ್ದು ಮೃತಪಟ್ಟಿದ್ದಾರೆ.

ರಾಮನಗರ ಡಿಪೊಗೆ ಸೇರಿದ ಬಸ್ ತಿರುಪತಿಯಿಂದ ಸುಮಾರು 37 ಪ್ರಯಾಣಿಕರನ್ನು ಹತ್ತಿಸಿಕೊಂಡು ಬೆಂಗಳೂರು ಕಡೆಗೆ ಬರುತ್ತಿತ್ತು. ಇದರಲ್ಲಿ ಮಹಿಳೆ ಪ್ರಯಾಣಿಸುತ್ತಿದ್ದರು. ಅವರು ಮೆಜೆಸ್ಟಿಕ್‌ಗೆ ಟಿಕೆಟ್ ಪಡೆದಿದ್ದರು.

ಹೊಸಕೋಟೆ ಸಮೀಪದ ಮಾರ್ಗ ಮಧ್ಯೆ ಹೋಟೆಲ್‌ನಲ್ಲಿ ಉಪಾಹಾರ ಸೇವಿಸಲು ಬಸ್ ನಿಲ್ಲಿಸಲಾಗಿತ್ತು. ಬಟ್ಟರ ಹಳ್ಳಿ ಜಂಕ್ಷನ್ ಬಳಿ ಬಂದಾಗ ಇದ್ದಕ್ಕಿದ್ದಂತೆ ಉಸಿರಾಟದ ಸಮಸ್ಯೆ ಕಾಣಿಸಿಕೊಂಡು ಕ್ಷಣಾರ್ಧದಲ್ಲಿ ಮಹಿಳೆ ಕುಸಿದು ಬಿದ್ದಿದ್ದಾರೆ.

ಬಸ್ ಚಾಲಕ 108ಕ್ಕೆ ಕರೆ ಮಾಡಿ ಆಂಬುಲೆನ್ಸ್ ಬರುವಷ್ಟರಲ್ಲಿ ಮಹಿಳೆ ಮೃತಪಟ್ಟಿದ್ದರು. ಅವರು ಹೃದಯಾಘಾತದಿಂದ ಮೃತಪಟ್ಟಿರಬಹುದು ಎಂದು ಶಂಕಿಸಲಾಗಿದೆ.

ಚಾಲಕ, ನಿರ್ವಾಹಕರು ಕೆ.ಆರ್.ಪುರ ಪೊಲಿಸರಿಗೆ ಮಾಹಿತಿ ನೀಡಿದ್ದು, ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಈಸ್ಟ್ ಪಾಯಿಂಟ್ ಆಸ್ಪತ್ರೆಗೆ ಕಳುಹಿಸಲಾಯಿತು. ಮಹಿಳೆಯ ವಿಳಾಸ ಮತ್ತು ಗುರುತು ಗೊತ್ತಾಗಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರವೀಣ್ ಬಿಡುಗಡೆ: ಚರ್ಚಿಸಿ ತೀರ್ಮಾನ

ಬೆಂಗಳೂರು: 'ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ವಾಮಂಜೂರಿನ ಪ್ರವೀಣ್‌ನನ್ನು ಸನ್ನಡತೆ ಆಧಾರದಲ್ಲಿ ಬಿಡುಗಡೆ ಮಾಡದಂತೆ ಆತನ ಮನೆಯವರು ಆಗ್ರಹಿಸಿದ್ದಾರೆ. ಈ ಬಗ್ಗೆ ಅಧಿಕಾರಿಗಳ ಜೊತೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

1994ರಲ್ಲಿ ವಾಮಂಜೂರಿನಲ್ಲಿ ತನ್ನ ನಾಲ್ವರು ಸಂಬಂಧಿಕರನ್ನು ಹತ್ಯೆ ಮಾಡಿದ್ದ ಪ್ರವೀಣ್‌ನನ್ನು ಯಾವುದೇ ಕಾರಣಕ್ಕೂ ಜೈಲಿನಿಂದ ಬಿಡುಗಡೆ ಮಾಡಬಾರದು ಎಂದು ಆಗ್ರಹಿಸಿ ಆತನ ಕುಟುಂಬದವರು ಸಚಿವರನ್ನು ಬುಧವಾರ ಭೇಟಿ ಮಾಡಿ ಮನವಿ ಸಲ್ಲಿಸಿದರು. ಆತನಿಂದ ಮತ್ತೆ ಜೀವಭಯ ಇದೆ ಎಂದೂ ವಿವರಿಸಿದರು.

WITHDRAWAL OF NEWS PAPER PUBLICATION DATED 04.03.2022 INVITING APPLICATIONS FOR POST OF VICE CHANCELLOR OF KARNATAKA STATE OPEN UNIVERSITY, MYSURU

Whereas this office vide its newspaper publication dated: 04.03.2022 bearing No. GS 11 KOM 2022 had invited the applications from the eligible candidates for the Post of Vice Chancellor of Karnataka State Open University, Mysuru. It is hereby notified that the aforesaid newspaper publication dated 04.03.2022 bearing No. GS 11 KOM 2022 has been withdrawn with immediate effect.

Sd/- (R. Prabhushankar)
Special Secretary to Governor

DIPR/CP/Adwit/1748/2022-23

ಗ್ಯಾಸ್ಟ್ರೋಎಂಟ್ರಾಲಜಿ ಸೈನ್ಸಸ್ ಅಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆ

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ) (ನೋ.ಸಂಖ್ಯೆ .DRB-2/SOR/54/2017-18)
ಹಳೇ ನರ್ಸಿಂಗ್ ಶಾಲೆ ಕಟ್ಟಡ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು-560 002
ದೂರವಾಣಿ:080-26707727 ಇ-ಮೇಲ್: igotinstitute@gmail.com

ಸಂಖ್ಯೆ: ಐಜಿಒಟಿ/ಟಿಎನ್‌ಡಿ/ಎಫ್‌ಡಿ–ಬಡ್ಡಿ/11/2022–23 ದಿನಾಂಕ: 10.08.2022


ಸಂಕ್ಷಿಪ್ತ ಟೆಂಡರ್ ಅಧಿಸೂಚನೆ

(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಇನ್ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋಎಂಟ್ರಾಲಜಿ ಸೈನ್ಸಸ್ ಅಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್‌ನ ಟೆಂಡರ್ ಆಹ್ವಾನಿಸುವ ಪ್ರಾಧಿಕಾರವು **ನಿಶ್ಚಿತ ಠೇವಣಿಯ ಮೇಲೆ ಬಡ್ಡಿಯನ್ನು** ಪಡೆಯುವ ಸಲುವಾಗಿ ಎರಡು ಲಕೋಟೆ ಪದ್ಧತಿ ಅನುಸರಿಸಿ ಅರ್ಹ ಟೆಂಡರ್‌ದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. (1) **ಪ್ರೀ–ಬಿಡ್ ಸಭೆ ದಿನಾಂಕ: 17.08.2022 at 11.00 A.M.** (2) **ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 25.08.2022 at 4.00 P.M.** (3) **ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 29.08.2022 at 11.00 A.M.** ಟೆಂಡರ್‌ದಾರರು **www.eproc.karnataka.gov.in** ವೀಕ್ಷಿಸಿ ಟೆಂಡರ್ ದಸ್ತಾವೇಜುಗಳನ್ನು ಇ–ಪೋರ್ಟಲ್ ಮುಖಾಂತರ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ.

ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ, ಐಜಿಒಟಿ, ಬೆಂಗಳೂರು–560002.





ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಯಂತ್ರಕ್ಕಿಂತ ಹೆಚ್ಚಾಗಿ ನಮಗೆ ಬೇಕಾಗಿರುವುದು ಮಾನವೀಯತೆ.

–ಚಾರ್ಲಿ ಚಾಪ್ಲಿನ್

ವಿರೋಧ ಪಕ್ಷಗಳ ಒಗ್ಗಟ್ಟಿಗೆ ಮತ್ತೆ ಇಂಬು ನೀಡಿರುವ ಬಿಹಾರದ ನಿರೀಕ್ಷಿತ ಬೆಳವಣಿಗೆ

ಸಂಯುಕ್ತ ಜನತಾದಳ (ಜೆಡಿಯು) ನಾಯಕ ನಿತೀಶ್ ಕುಮಾರ್ ಅವರು ಬಿಜೆಪಿ ಸಖ್ಯದೊಂದಿಗೆ ಸರ್ಕಾರವನ್ನು ರಚಿಸಿದಾಗ, ಅದು ಹೆಚ್ಚು ಕಾಲ ಬಾಳುವ ಸರ್ಕಾರವಲ್ಲ ಎನ್ನುವುದು ಮೊದಲ ದಿನದಿಂದಲೂ ಗೊತ್ತಿದ್ದ ಸಂಗತಿಯಾಗಿತ್ತು. ಏಕೆಂದರೆ, 'ಬಾಲವೇ ನಾಯಿಯನ್ನು ಅಲ್ಲಾಡಿಸುತ್ತದೆ' ಎನ್ನುತ್ತಾರಲ್ಲ, ಅಂತಹ ಸನ್ನಿವೇಶವು ಆ ವ್ಯವಸ್ಥೆಯಲ್ಲಿ ಸೃಷ್ಟಿಯಾಗಿತ್ತು. ಬಿಹಾರದಲ್ಲಿ 2020ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಯು 43 ಕ್ಷೇತ್ರಗಳಲ್ಲಿ ಗೆದ್ದರೆ, ಬಿಜೆಪಿ 74 ಸ್ಥಾನ ಪಡೆಯಿತು. ತನ್ನ ಮುಂದೆ ಬೇರೆ ಆಯ್ಕೆ ಇಲ್ಲದಿದ್ದ ಕಾರಣ, ಬಿಜೆಪಿಯು ನಿತೀಶ್ ನೇತೃತ್ವದಲ್ಲಿಯೇ ಸಮ್ಮಿಶ್ರ ಸರ್ಕಾರದ ರಚನೆಗೆ ಅವಕಾಶ ಮಾಡಿಕೊಟ್ಟಿತ್ತು. ಚುನಾವಣೆಯಲ್ಲಿ ಚಿರಾಗ್ ಪಾಸ್ವಾನ್ ಅವರನ್ನು ಬಳಸಿಕೊಂಡು ಜೆಡಿಯು ಮತಬುಟ್ಟಿಗೆ ಕೈಹಾಕಿದ್ದಲ್ಲದೆ ಆ ಪಕ್ಷವನ್ನು ದುರ್ಬಲಗೊಳಿಸುವ ಪ್ರಯತ್ನವನ್ನೂ ಅದು ಮಾಡಿತ್ತು. ಚುನಾವಣೋತ್ತರ ಸಂದರ್ಭದಲ್ಲಿ ನಿತೀಶ್ ಅವರಿಗೆ ತಕ್ಷಣದ ಬೇರೆ ಆಯ್ಕೆಗಳು ಇರಲಿಲ್ಲ. ಬಿಜೆಪಿಯೊಂದಿಗೇ ಅವರು ಹೋಗಬೇಕಿತ್ತು. ಲಾಲೂ ಪ್ರಸಾದ್ ಅವರ ರಾಷ್ಟ್ರೀಯ ಜನತಾದಳ (ಆರ್‌ಜೆಡಿ) ಪಕ್ಷವು ಅವರ ಪುತ್ರ ತೇಜಸ್ವಿ ಯಾದವ್ ನೇತೃತ್ವದಲ್ಲಿ ವಿಧಾನಸಭೆ ಚುನಾವಣೆಯಲ್ಲಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಚುನಾವಣೆಗಿಂತ ಮೊದಲು ಆರ್‌ಜೆಡಿಯೊಂದಿಗಿನ ಮೈತ್ರಿಯನ್ನು ಮುರಿದುಕೊಂಡಿದ್ದ ನಿತೀಶ್ ಅವರಿಗೆ ತಕ್ಷಣವೇ ಆ ಪಕ್ಷದೊಂದಿಗೆ ಮರುಹೊಂದಾಣಿಕೆ ಮಾಡಿಕೊಳ್ಳುವುದು ಸಾಧ್ಯವಿರಲಿಲ್ಲ. ಹಾಗೊಂದು ವೇಳೆ ಮೈತ್ರಿ ಏರ್ಪಟ್ಟಿದ್ದರೂ ನಿತೀಶ್ ಅವರೇ ಮುಖ್ಯಮಂತ್ರಿಯಾಗುವ ಖಾತರಿ ಸಹ ಇರಲಿಲ್ಲ. ಹೀಗಾಗಿ, ನಿತೀಶ್ ನೇತೃತ್ವದ ಎನ್‌ಡಿಎ ಸರ್ಕಾರ ಆಗ ಅಸ್ತಿತ್ವಕ್ಕೆ ಬಂತು ಮತ್ತು ಆ ಮೈತ್ರಿ ಮುರಿದು ಬೀಳುವುದು ಕೂಡ ಆ ದಿನವೇ ಖಚಿತವಾಗಿತ್ತು.



ಬಿಹಾರದಂತಹ ಪ್ರಮುಖ ರಾಜ್ಯದ ಅಧಿಕಾರ ಕೈತಪ್ಪಿರುವುದು ಬಿಜೆಪಿಯ ಪಾಲಿಗೆ ಖಂಡಿತವಾಗಿಯೂ ಹಿನ್ನಡೆ. ಆ ಪಕ್ಷದ ರಾಜಕೀಯ ತಂತ್ರಗಾರರು ಕತ್ತಿಯನ್ನು ಮತ್ತೆ ಹರಿತಗೊಳಿಸಲು, ಹೊಸತಂತ್ರ ಹೆಣೆಯಲು ಯತ್ನಿಸುವುದರಲ್ಲಿ ಅನುಮಾನವಿಲ್ಲ

ಬಿಜೆಪಿಯ ಆಧಿಪತ್ಯದ ಹಂಬಲ ಮತ್ತು ನಿತೀಶ್ ಅವರ ಅವಕಾಶವಾದದ ನಡುವಿನ ಪೈಪೋಟಿಯ ಫಲ ಇದು ಎಂಬಂತೆ ಗೋಚರಿಸಿದರೂ ಸದ್ಯ ನಿತೀಶ್ ಅವರು ತಮ್ಮ ಹಳೆಯ ಜೊತೆಗಾರನನ್ನೇ ಮತ್ತೆ ನೆಚ್ಚಿಕೊಂಡಿದ್ದಾರೆ. ಬಿಜೆಪಿ ಜತೆ ಸಖ್ಯ ಬೆಳೆಸಿದ ಎಲ್ಲ ಪ್ರಾದೇಶಿಕ ಪಕ್ಷಗಳು ದುರ್ಬಲಗೊಂಡಿರುವುದು, ಸಂಖ್ಯಾಬಲದ ದೃಷ್ಟಿಯಿಂದಲೂ ಅವು ಕೃಶವಾಗಿರುವುದು ಅಥವಾ ಆ ಪಕ್ಷಗಳೂ ಬಿಜೆಪಿಯದೇ ಭಾಗದಂತಾಗಿರುವುದು ನಿತೀಶ್ ಅವರಲ್ಲಿ ಕಳವಳ ಉಂಟುಮಾಡಿದ್ದುದು ಸುಳ್ಳಲ್ಲ. ಪ್ರಾದೇಶಿಕ ಪಕ್ಷಗಳನ್ನೇ ಏಣಿ ಮಾಡಿಕೊಂಡು ಬೆಳೆದ ಬಿಜೆಪಿ, ಅವುಗಳ ನೆಲೆಯನ್ನೇ ಬಳಸಿಕೊಂಡು ವಿಸ್ತಾರವಾಗಿ ಹರಡಿರುವುದು ಎದ್ದು ಕಾಣುತ್ತಿದೆ. ಮಹಾರಾಷ್ಟ್ರದಲ್ಲಿ ಶಿವಸೇನಾವನ್ನು ವಿಭಜನೆ ಮಾಡಿರುವ ಇತ್ತೀಚಿನ ಪ್ರಸಂಗವು ಬಿಜೆಪಿಯ ಆಕ್ರಮಣಶೀಲ ಮನೋಭಾವಕ್ಕೆ ಹೊಸ ಸಾಕ್ಷಿ. ಬಿಹಾರದಲ್ಲೂ ಆ ಪಕ್ಷ ಇಂತಹದ್ದೇ ತಂತ್ರವನ್ನು ಅನುಸರಿಸಬಹುದು ಎಂದು ನಿತೀಶ್ ಅವರು ಭಾವಿಸಲು ಕಾರಣಗಳಿವೆ. 'ಎಲ್ಲ ಪ್ರಾದೇಶಿಕ ಪಕ್ಷಗಳು ನಿರ್ನಾಮವಾಗಲಿವೆ ಮತ್ತು ರಾಷ್ಟ್ರಮಟ್ಟದಲ್ಲಿ ಬಿಜೆಪಿಯೊಂದೇ ಉಳಿಯಲಿದೆ' ಎಂದು ಆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಇತ್ತೀಚೆಗೆ ಪಟ್ನಾದಲ್ಲಿ ನೀಡಿದ ಹೇಳಿಕೆಯು ಜೆಡಿಯು ನಾಯಕನ ಪಾಲಿಗೆ ಕೊನೆಯ ಎಚ್ಚರಿಕೆಯಂತಾಗಿತ್ತು.

ನಿತೀಶ್ ಮತ್ತು ತೇಜಸ್ವಿ ಯಾದವ್ ಅವರ ನಡುವಿನ ಮೈತ್ರಿಯ ಷರತ್ತುಗಳು ಏನೆಂಬುದು ಇನ್ನೂ ಬಹಿರಂಗಗೊಂಡಿಲ್ಲ. ನಿತೀಶ್ ಮುಖ್ಯಮಂತ್ರಿಯಾಗಿ, ತೇಜಸ್ವಿ ಉಪ ಮುಖ್ಯಮಂತ್ರಿಯಾಗಿ ಅಧಿಕಾರವನ್ನೇನೋ ಸ್ವೀಕರಿಸಿದ್ದಾರೆ. ಬಹುಮತದ ಸರ್ಕಸ್‌ನಲ್ಲಿ ಈ ಹಿಂದೆ ಬಿಜೆಪಿಯ ಋಣದಲ್ಲಿದ್ದಂತೆ ಈಗ ಮಹಾಮೈತ್ರಿಕೂಟದ ಮರ್ಜಿಯಲ್ಲಿ ಇರಬೇಕಾದುದು ನಿತೀಶ್ ಅವರಿಗೆ ಅನಿವಾರ್ಯ. ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಪರಸ್ಪರ ಅಲ್ಲಿ ಪೈಪೋಟಿಗಿಳಿದಿದ್ದ ಎರಡು ಪಕ್ಷಗಳು ಈಗ ಸಹಬಾಳ್ವೆ ನಡೆಸಲು ಆರಂಭಿಸಿವೆ. ಎರಡೂ ಪಕ್ಷಗಳಿಗೆ ತಾವು ಸಮಾನ ವೈರಿಯನ್ನು ಎದುರಿಸಬೇಕಿದೆ ಎನ್ನುವುದು ಸ್ಪಷ್ಟವಾಗಿ ಗೊತ್ತಿದೆ. ನಿತೀಶ್ ಅವರು ಸುದೀರ್ಘ ರಾಜಕೀಯ ಅನುಭವವನ್ನು ಹೊಂದಿರುವುದು ನಿಜವಾದರೂ ಅವರ ಒಳ್ಳೆಯ ಆಡಳಿತದ ಖ್ಯಾತಿಗೆ ಇತ್ತೀಚಿನ ದಿನಗಳಲ್ಲಿ ಧಕ್ಕೆ ಉಂಟಾಗಿರುವುದನ್ನು ಅಲ್ಲಗಳೆಯುವಂತಿಲ್ಲ. ಬಿಹಾರದ ಬೆಳವಣಿಗೆಗಳು ರಾಷ್ಟ್ರ ರಾಜಕಾರಣದ ಮೇಲೆ ಎಷ್ಟರಮಟ್ಟಿಗೆ ಪ್ರಭಾವ ಬೀರಲಿವೆ ಎಂಬುದನ್ನು ಈಗಲೇ ಊಹಿಸುವುದು ಕಷ್ಟ. ಆದರೆ, 2024ರ ಲೋಕಸಭಾ ಚುನಾವಣೆಯಲ್ಲಿ ವಿರೋಧ ಪಕ್ಷಗಳು ಒಗ್ಗೂಡಿ ಹೋರಾಟ ನಡೆಸಲು ಸದ್ಯದ ಬೆಳವಣಿಗೆ ಇನ್ನಷ್ಟು ಇಂಬು ನೀಡಿರುವುದು, ಹುರುಪು ತುಂಬಿರುವುದು ಸ್ಪಷ್ಟ. ಬಿಹಾರದಂತಹ ಪ್ರಮುಖ ರಾಜ್ಯದ ಅಧಿಕಾರ ಕೈತಪ್ಪಿರುವುದು ಬಿಜೆಪಿಯ ಪಾಲಿಗೆ ಖಂಡಿತವಾಗಿಯೂ ಹಿನ್ನಡೆ. ಆ ಪಕ್ಷದ ರಾಜಕೀಯ ತಂತ್ರಗಾರರು ಕತ್ತಿಯನ್ನು ಮತ್ತೆ ಹರಿತಗೊಳಿಸಲು, ಹೊಸತಂತ್ರ ಹೆಣೆಯಲು ಯತ್ನಿಸುವುದರಲ್ಲಿ ಯಾವುದೇ ಅನುಮಾನವಿಲ್ಲ.

ದಿನದ ಟ್ವೀಟ್

ಕೆಡುಕು ಕಾದಿದೆ



ಇನ್ನೊಂದು ದೇಶದಲ್ಲಿ ಹಣದುಬ್ಬರ ಪ್ರಮಾಣ ಹೆಚ್ಚಿದೆ, ಹಾಗಾಗಿ ಇಲ್ಲಿ ಎಲ್ಲವೂ ಚೆನ್ನಾಗಿದೆ ಎಂದು ನಾಯಕರು ತಮ್ಮ ಬೆಂಬಲಿಗರನ್ನು ಒಪ್ಪಿಸಲು ಸಾಧ್ಯವಾಗುತ್ತದೆ ಎನ್ನುವುದು ದೇಶಕ್ಕೆ ಕೆಡುಕು ಕಾದಿರುವುದನ್ನು ಸೂಚಿಸುತ್ತದೆ.

ಕೌಶಿಕ್ ಬಸು, ಅರ್ಥಶಾಸ್ತ್ರಜ್ಞ

ಕಿಡಿನುಡಿ



ಕುಟುಂಬ ರಾಜಕಾರಣ ಮಾಡಬೇಡಿ ಎಂದರೆ ಕುಮಾರಸ್ವಾಮಿಯವರು ಮೈಮೇಲೆ ಬಂದಂತೆ ವರ್ತಿಸುವುದು ಏಕೆ? ಹೋದಲ್ಲೆಲ್ಲಾ ಕಣ್ಣೀರು ಸುರಿಸುವ ನಾಟಕವೇಕೆ? ಅಧಿಕಾರ ಸಿಗದಿದ್ದರೆ ಸಾಯುತ್ತೇನೆ ಎಂಬ ಮಾತೇಕೆ?

ಡಾ. ಸಿ.ಎನ್.ಅಶ್ವತ್ಥನಾರಾಯಣ, ಉನ್ನತ ಶಿಕ್ಷಣ ಸಚಿವ

25 ವರ್ಷಗಳ ಹಿಂದೆ

ಸೋಮವಾರ, 11-8-1997

● **ಒಳಜಗಳ: ರಾಜ್ಯದ ಎಲ್ಲರಿಗೂ ಸೋಲು**

ಕಲ್ಕತ್ತ, ಆ.10– ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಕರ್ನಾಟಕದಿಂದ ಸ್ಪರ್ಧಿಸಿದ್ದ ಎಲ್ಲಾ ಆರು ಮಂದಿ ಅಭ್ಯರ್ಥಿಗಳೂ ದಯನೀಯವಾಗಿ ಪರಾಭವಗೊಂಡಿದ್ದಾರೆ.

ಕಾಂಗ್ರೆಸ್ ಪಕ್ಷದ ನೀತಿ ರೂಪಿಸುವ ಉನ್ನತಾಧಿಕಾರ ಸಮಿತಿಯಾದ ಕಾರ್ಯಕಾರಿಣಿಗೆ ಎಐಸಿಸಿ ಪೂರ್ಣಾಧಿವೇಶನದ ಸಂದರ್ಭದಲ್ಲಿ ನಿನ್ನೆ ನಡೆದ ಚುನಾವಣೆಯ ಫಲಿತಾಂಶವನ್ನು ಇಂದು ಪ್ರಕಟಿಸಲಾಯಿತು.

ಒಟ್ಟು ಹತ್ತು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಅಂತಿಮವಾಗಿ 49 ಅಭ್ಯರ್ಥಿಗಳು ಕಣದಲ್ಲಿ ಉಳಿದಿದ್ದರು. ಕರ್ನಾಟಕದಿಂದ 9 ಮಂದಿ ಮುಖಂಡರು ನಾಮಪತ್ರ ಸಲ್ಲಿಸಿದ್ದರಾದರೂ ಕೇಂದ್ರದ ಮಾಜಿ ಸಚಿವರಾದ ಶಂಕರಾನಂದ, ಎಂ.ವಿ. ಚಂದ್ರಶೇಖರಮೂರ್ತಿ ಹಾಗೂ ಎಸ್.ಎಂ.ಕೃಷ್ಣ ಅವರು ಹಿಂತೆಗೆದುಕೊಂಡಿದ್ದರಿಂದ ಅಂತಿಮವಾಗಿ ಬಿ.ಜನಾರ್ದನ ಪೂಜಾರಿ, ಮಾರ್ಗರೆಟ್ ಆಳ್ವ, ಸಿ.ಕೆ.ಜಾಫರ್ ಷರೀಫ್, ಎಚ್. ಹನುಮಂತಪ್ಪ, ಎಸ್.ಬಂಗಾರಪ್ಪ ಹಾಗೂ ವೀರಪ್ಪ ಮೊಯಿಲಿ ಕಣದಲ್ಲಿ ಉಳಿದಿದ್ದರು. ಆದರೆ ಇಂದು ಫಲಿತಾಂಶ ಪ್ರಕಟವಾದಾಗ ಎಲ್ಲಾ ಆರು ಮಂದಿಯೂ ಬಹಳ ಕಡಿಮೆ ಪ್ರಮಾಣದಲ್ಲಿ ಮತಗಳನ್ನು ಪಡೆದಿರುವುದು ಬಹಿರಂಗವಾಯಿತು. ರಾಜ್ಯದ ಮುಖಂಡರಲ್ಲಿನ ಗುಂಪುಗಾರಿಕೆ ಹಾಗೂ ಒಳಜಗಳವೇ ಹೆಚ್ಚು ಮಂದಿ ಸ್ಪರ್ಧಿಸಲು ಕಾರಣವಾಗಿದ್ದು, ಒಮ್ಮತದ ಅಭ್ಯರ್ಥಿ ಆಯ್ಕೆಯ ಕೊರತೆಯೇ ಸೋಲಿಗೆ ಕಾರಣವೆನ್ನಲಾಗಿದೆ.

ರಾಜ್ಯದಿಂದ ಏಕ ಅಭ್ಯರ್ಥಿ ಸ್ಪರ್ಧಿಸಿದ್ದರೆ ಹೆಚ್ಚು ಕಡಿಮೆ ಗೆಲುವು ಸಾಧಿಸಬಹುದಿತ್ತು. ಆರು ಮಂದಿ ಸ್ಪರ್ಧಿಸಿ ಒಬ್ಬರೂ ಗೆಲ್ಲಲಾಗದೆ ನಗೆಪಾಟಲಿಗೆ ಒಳಗಾದಂತಾಗಿದೆ ಎಂದು ರಾಜ್ಯದ ಮುಖಂಡರು ಅಭಿಪ್ರಾಯಪಟ್ಟರು.

50 ವರ್ಷಗಳ ಹಿಂದೆ

ಶುಕ್ರವಾರ, 11-8-1972

● **ಗಗನಕ್ಕೇರುತ್ತಿರುವ ಬೆಲೆ: ಉಗ್ರ ಖಂಡನೆ**

ನವದೆಹಲಿ, ಆ.10– ಆಹಾರಧಾನ್ಯಗಳ ಬೆಲೆ ಹತೋಟಿ ಮಾಡಲು ವಿಫಲವಾಗಿರುವುದಕ್ಕಾಗಿ ಇಂದು ಲೋಕಸಭೆಯಲ್ಲಿ ಸದಸ್ಯರು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಅಗತ್ಯ ವಸ್ತುಗಳ ಬೆಲೆಗಳು ಹಿಂದೆಂದೂ ಇಲ್ಲದಷ್ಟು ಏರಿಕೆಯಾಗಿರುವ ಬಗ್ಗೆ ಚರ್ಚೆಯನ್ನು ಆರಂಭಿಸಿದ ಶ್ರೀ ಪ್ರಸನ್ನ ಬಾಯಿ ಮೆಹ್ತಾ (ಸಂಸ್ಥಾ ಕಾಂಗ್ರೆಸ್) ಅವರು 'ಗಗನಕ್ಕೇರುತ್ತಿರುವ ಬೆಲೆಗಳು ಶ್ರೀಸಾಮಾನ್ಯನಿಗೆ ತೀರಾ ಧಕ್ಕೆಯುಂಟು ಮಾಡಿವೆ' ಎಂದರು. ಈಗಿನ ಪರಿಸ್ಥಿತಿಗೆ ಸರ್ಕಾರದ ತಪ್ಪು ಆರ್ಥಿಕ ನೀತಿಗಳೇ ಕಾರಣವೆಂದೂ ಅವರು ಹೇಳಿದರು.

ಬೆಲೆ ಏರಿಕೆಗೆ ವಿಶ್ವ ಪ್ರವೃತ್ತಿ ಕಾರಣ ಎಂದು ಹೇಳುವುದರಲ್ಲಿ ಅರ್ಥವಿಲ್ಲವೆಂದ ಶ್ರೀ ಮೆಹ್ತಾ ಅವರು, ಕೈಗಾರಿಕಾ ಹಾಗೂ ಕೃಷಿ ಉತ್ಪಾದನೆ ಕಾಯ್ದುಕೊಂಡು ಬರುವುದರಲ್ಲಿ ಸರ್ಕಾರ ವಿಫಲವಾಗಿದೆ ಎಂದರು.

● **14 ನಗರ–159 ಪುರಸಭೆಗಳ ಲಕ್ಷಾಂತರ ಕಕ್ಕಸುಗಳ ಪರಿವರ್ತನೆಗೆ ಆದೇಶ**

ಬೆಂಗಳೂರು, ಆ.10– ರಾಜ್ಯದ ಹದಿನಾಲ್ಕು ನಗರ ಸಭೆಗಳು ಮತ್ತು 159 ಪುರಸಭೆಗಳ ವ್ಯಾಪ್ತಿಯಲ್ಲಿರುವ ತೋಟಿಗಳು ಕೈಯಿಂದ ನಿರ್ಮಲಗೊಳಿಸುವ ಲಕ್ಷಾಂತರ ಕಕ್ಕಸುಗಳನ್ನು ತಕ್ಷಣದಿಂದ ಪರಿವರ್ತಿಸಲು ಕ್ರಮ ಕೈಗೊಳ್ಳಬೇಕು ಎಂದು ಸರ್ಕಾರ ಆದೇಶಿಸಿದೆ.

ಇನ್ನು ಮುಂದೆ, ಕೈಹಾಕಿ ಶುದ್ಧಗೊಳಿಸುವ ಕಕ್ಕಸುಗಳ ನಿರ್ಮಾಣವನ್ನು ಸಂಪೂರ್ಣವಾಗಿ ನಿಷೇಧಿಸಲಾಗುವುದು ಎಂದು ಪೌರಾಡಳಿತ ಮಂತ್ರಿ ಶ್ರೀ ಬಸವಲಿಂಗಪ್ಪನವರು ಇಂದು ಇಲ್ಲಿ ವರದಿಗಾರರಿಗೆ ತಿಳಿಸಿದರು.

ಭಾರತೀಯ ಮೂಲದ ವಿಜ್ಞಾನಿಯಿಂದ ಜೀವಾಂಕುರದ ಹೊಸ ಸಾಧ್ಯತೆ ಪತ್ತೆ

ಜೀವಸೃಷ್ಟಿಗೆ ದೇವರೇಕೆ ಬೇಕು?



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಭೂಮಿಯ ಮೇಲೆ ಜೀವಾಂಕುರ ಹೇಗಾಯಿತು? ಕಲ್ಲುಮರಳು, ಕೆಸರುನೀರಿನ ನಿರ್ಜೀವ ಕಣಗಳು ಕೈಕೈ ಬೆಸೆದು ನಿಂತು ತನ್ನನ್ನೇ ತಾನು ನಕಲು ಮಾಡುವಂಥ ಸಜೀವ ಕಣವನ್ನು ಸೃಷ್ಟಿಸಿದ್ದು ಹೇಗೆ? ಈ ಕುರಿತು ಕಳೆದ 150 ವರ್ಷಗಳಿಂದ ವಿಜ್ಞಾನ ಲೋಕದಲ್ಲಿ ಚರ್ಚೆಗಳು ನಡೆಯುತ್ತಿವೆ. ಚರ್ಚೆಗಳಿಗೆ ತಲ್ಲಣ ಹುಟ್ಟಿಸುವಷ್ಟು ಮಟ್ಟಿಗೆ ಬಿಸಿ ವಾಗ್ವಾದಗಳೂ ನಡೆದಿವೆ. ದೇವರ ಹಸ್ತಕ್ಷೇಪವೇ ಇಲ್ಲದೆ ತಂತಾನೇ ಜೀವಸೃಷ್ಟಿ ಸಾಧ್ಯವೆಂದು ವಿಜ್ಞಾನಿಗಳು ತೋರಿಸಿಬಿಟ್ಟರೆ ಜಗತ್ತಿನ ಅನೇಕ ಮತಧರ್ಮಗಳ ಮೂಲಾಧಾರವೇ ಕುಸಿದು ಹೋಗುತ್ತದೆ ತಾನೆ? ಸದ್ಯಕ್ಕೆ ಹಾಗೆ ತಂತಾನೇ ಜೀವಸೃಷ್ಟಿಯಾಗುವುದನ್ನು ಯಾರೂ ಇದುವರೆಗೆ ಪ್ರತ್ಯಕ್ಷ ತೋರಿಸಿಲ್ಲವಾದ್ದರಿಂದ ದೇವರು ಮತ್ತು ವಿಜ್ಞಾನದ ನಡುವಣ ಜಟಾಪಟಿ ಒಳಗೊಳಗೇ ಹೊಗೆಯಾಡುತ್ತಿದೆ ಅಷ್ಟೆ.


ಈ ಮಧ್ಯೆ, ಎರಡು ವಾರಗಳ ಹಿಂದೆ, 'ಭಾರತೀಯ ಮೂಲದ ವಿಜ್ಞಾನಿಯಿಂದ ಜೀವಾಂಕುರದ ಹೊಸ ಸಾಧ್ಯತೆ ಪತ್ತೆ' ಎಂಬ ಶಿರೋನಾಮೆಯೊಂದಿಗೆ ದಿಲ್ಲಿಯ ವಿಜ್ಞಾನ ಪತ್ರಕರ್ತ ಕಲ್ಯಾಣ್ ರೇ ವರದಿ ಮಾಡಿದ್ದು 'ಡೆಕ್ಕನ್ ಹೆರಾಲ್ಡ್'ನ ಮೊದಲ ಪುಟದಲ್ಲಿ ಪ್ರಕಟವಾಯಿತು. ವಿಜ್ಞಾನಕ್ಕೆ ಇದುವರೆಗೂ ಗೊತ್ತಿರದ ಹೊಸತೊಂದನ್ನು ಅಮೆರಿಕದ ಖ್ಯಾತ ಸ್ಕ್ರಿಪ್ಸ್ ಸಂಶೋಧನಾ ಸಂಸ್ಥೆಯ ರಾಮನಾರಾಯಣನ್ ಕೃಷ್ಣಮೂರ್ತಿ ಕಂಡುಹಿಡಿದಿದ್ದರು. ಈ ಕುರಿತ ಅವರ ಪ್ರಬಂಧವೊಂದು ಪ್ರತಿಷ್ಠಿತ 'ನೇಚರ್ ಕೆಮಿಸ್ಟ್ರಿ' ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ತುಸು ಮುಂಚೆ, ಮಾರ್ಚ್ ತಿಂಗಳಲ್ಲೇ ಅವರ ಸಂಶೋಧನೆ ನ್ಯಾಶನಲ್ ಜಿಯಾಗ್ರಫಿ ಮತ್ತಿತರ ಮಾಧ್ಯಮಗಳಲ್ಲಿ ಚರ್ಚಿತವಾಗಿತ್ತು. ದೇವರನ್ನು ಸತತವಾಗಿ ನೇಪಥ್ಯಕ್ಕೆ ತಳ್ಳುತ್ತಿರುವ ವಿಜ್ಞಾನಿಗಳು ಈಗ ಆದಿಜೀವಿಯನ್ನೂ ಲ್ಯಾಬಿನಲ್ಲೇ ಸೃಷ್ಟಿಸಿದರೆ ಪಶ್ಚಿಮದ ಮತಧರ್ಮಗಳ ಜಗತ್ತಿನಲ್ಲಿ ತುಮುಲ ಎದ್ದೀತೆ?

ವಿಜ್ಞಾನಿಗಳು ವಿವರಿಸುವ ಬ್ರಹ್ಮಾಂಡದ ಸೃಷ್ಟಿಸ್ವರೂಪ ನಮಗೆಲ್ಲ ಗೊತ್ತೇ ಇದೆ: ಸುಮಾರು 1350 ಕೋಟಿ ವರ್ಷಗಳ ಹಿಂದೆ ಕಾಲವೂ ಇರಲಿಲ್ಲ, ಖಾಲಿಜಾಗವೂ (ಸ್ಪೇಸ್) ಇರಲಿಲ್ಲ. ಶೂನ್ಯ ಕೂಡ ಇರಲಿಲ್ಲ. ಆಗ ಇದ್ದಕ್ಕಿದ್ದಂತೆ ಮಹಾಸ್ಫೋಟ ಉಂಟಾಗಿ ಅಪಾರ ಶಕ್ತಿ ಮತ್ತು ದ್ರವ್ಯ ಎಲ್ಲೆಡೆ ಚೆಲ್ಲಾಡಿತು. ಹೈಡ್ರೊಜನ್ ಮತ್ತು ಹೀಲಿಯಂನ ಮೂಲಕಣಗಳು ಗೆಲಾಕ್ಸಿಗಳಾಗಿ, ತಾರಾಪುಂಜಗಳಾಗಿ ಮಹಾವೇಗದ ಗುರುತ್ವ ತರಂಗಬಲದಿಂದ ದೂರದೂರಕ್ಕೆ ಈಗಲೂ ಚದುರುತ್ತಲೇ ಇವೆ. ಕೆಲವು ನಕ್ಷತ್ರಗಳ ಸುತ್ತಲಿನ ತಾರಾಕಣಗಳು ತಂಪಾಗುತ್ತ, ಉಂಡೆಗಟ್ಟುತ್ತ ಗ್ರಹಗಳಾಗಿ, ಗಿರಕಿ ಹೊಡೆಯುತ್ತ ಕಾರ್ಬನ್, ನೈಟ್ರೊಜನ್, ಕಬ್ಬಿಣ, ಸಿಲಿಕಾನ್‌ನಂಥ ಮೂಲವಸ್ತುಗಳನ್ನು ಸೃಷ್ಟಿಸಿಕೊಳ್ಳುತ್ತ 450 ಕೋಟಿ ವರ್ಷಗಳೀಚೆಗೆ ಬುಧ, ಶುಕ್ರ, ಭೂಮಿಯಂಥ ಗಟ್ಟಿಗ್ರಹಗಳಾದವು; ಅಥವಾ ಗುರು, ಶನಿ, ನೆಪ್ಚೂನ್, ಪ್ಲುಟೋಗಳಂತೆ ಅನಿಲದ ಉಂಡೆಗಳಾದವು. ಭೂಮಿಯಲ್ಲಿ ಮಾತ್ರ 350 ಕೋಟಿ ವರ್ಷಗಳ ಹಿಂದೆ ಈ ನಿರ್ಜೀವ ಮೂಲವಸ್ತುಗಳೇ ಒಂದರೊಳಗೊಂದು ಸೇರಿಕೊಂಡು ಜೀವಾಂಕುರ ಆಯಿತು.

ಅದು ಹೇಗಾಯಿತು ಎಂಬುದಕ್ಕೆ ನಾನಾ ಥಿಯರಿಗಳು ಹುಟ್ಟಿಕೊಂಡವು. ಜೀವಿಗಳು ತಂತಾವೇ ಹುಟ್ಟುತ್ತವೆ ಎಂದು ಕೊಳೆತ ಹಣ್ಣು-ಗಿಣ್ಣು, ಮಾಂಸದ ಮುದ್ದೆಯ ಮೇಲೆ ಹುಳುಗಳು ಹುಟ್ಟುವುದನ್ನು ನೋಡಿ ಹೇಳಿದ್ದರು. ಇಲ್ಲ, ನೊಣಗಳು ಅಲ್ಲಿ ಮೊಟ್ಟೆ ಇಡುತ್ತವೆ ಎಂದು ಸೂಕ್ಷ್ಮದರ್ಶಕದ ಮೂಲಕ ಗೊತ್ತಾಯಿತು. ಬಾಹ್ಯಾಕಾಶದಿಂದ ಸದಾ ಜೀವಕಣಗಳ ಸುರಿಮಳೆ ಆಗುತ್ತಿದೆ ಎಂದು ಇನ್ನು ಕೆಲವರು ಹೇಳಿದರು. ಇಲ್ಲ, ಅಲ್ಲಿನ ಘೋರಶೀತ ಮತ್ತು ರುದ್ರ ವಿಕಿರಣಗಳ ಮಧ್ಯೆ ಜೀವಕಣ ಬದುಕಿರಲು ಸಾಧ್ಯವೇ ಇಲ್ಲ ಎಂಬುದು ಗೊತ್ತಾಯಿತು. ಮಂಗಳ ಗ್ರಹದಿಂದ ಸಿಡಿದು ಬಂದ ಶಿಲಾ ತುಣುಕಿನ ಮೂಲಕ ಜೀವಕಣ ಬಂತೆಂದು ಮತ್ತೆ ಕೆಲವರು ಹೇಳಿದರು. ಅಂಥ ಶಿಲಾತುಣುಕು ಉಲ್ಕೆಯಂತೆ ಉರಿಕೊಳ್ಳಿಯಾಗಿ ಬೀಳುವಾಗ ಜೀವಂತ ಕಣಗಳು ಉಳಿದಿರಲು ಸಾಧ್ಯವೇ ಇಲ್ಲ ಎಂಬ ವಾದ ಮುಂದಕ್ಕೆ ಬಂತು. ಆಳಸಮುದ್ರದ ತಳದ ಬಿರುಕಿನ ಕುದಿನೀರಲ್ಲೂ ಏಕಾಣುಜೀವಿಗಳು ಪತ್ತೆಯಾದ ಮೇಲೆ ಉಲ್ಕಾಜೀವಿಯೂ ಸಾಧ್ಯ ಎಂತಲೂ ತರ್ಕಿಸುವಂತಾಯಿತು.

ಬೈಬಲ್ಲಿನಂಥ ಧರ್ಮಗ್ರಂಥಗಳನ್ನು ನಂಬುವವರಿಗೆ ತಲೆಬಿಸಿಯೇ ಇಲ್ಲ. ಸರ್ವಶಕ್ತ ದೇವರು ಭೂಮಿಯ ಮೇಲೆ ಎಲ್ಲ ಜೀವಿಗಳನ್ನೂ ಸೃಷ್ಟಿಸಿ, ಅವುಗಳ ಮೇಲ್ವಿಚಾರಕನಾಗಿ ಮನುಷ್ಯನನ್ನೂ ಸೃಷ್ಟಿಸಿ ಹೋಗಿದ್ದಾನೆ ಎಂಬ ನಂಬಿಕೆ ಅವರದು. 'ಅದು ಹಾಗಲ್ಲ, ಜೀವಿಗಳು ಹಂತಹಂತವಾಗಿ ವಿಕಾಸವಾಗಿವೆ; ಶಿಲಾಪದರಗಳಲ್ಲಿ ಪಳೆಯುಳಿಕೆಗಳ ಸಾಕ್ಷ್ಯವಿದೆ' ಎಂದು ವಿಜ್ಞಾನಿಗಳು ಹೇಳಿದರೆ ಕೇಳಬೇಕಲ್ಲ? 'ಇಲ್ಲ, ಆ ಪಳೆಯುಳಿಕೆಗಳನ್ನೂ ದೇವರೇ ಸೃಷ್ಟಿಸಿ ಅಲ್ಲಿಟ್ಟಿದ್ದು' ಎಂದರು. ಇಂಥ ವಿತಂಡವಾದಕ್ಕೆ ಕ್ಯಾರೇ ಎನ್ನದೇ ವಿಜ್ಞಾನಿಗಳು ಜೀವಮೂಲವನ್ನು ಹುಡುಕುತ್ತ ಹೋದರು.

ಜೀವಸೃಷ್ಟಿ ಹೇಗಾಯಿತು ಎಂಬುದು ತೀರಾ ಗಡಚಿನ ಪ್ರಶ್ನೆಯಂತೂ ಹೌದು. ತೀರಾ ಕೆಳಹಂತದ ಬ್ಯಾಕ್ಟೀರಿಯಾದಲ್ಲೂ ಜೀವಕೋಶ ಎಂದರೇನೇ ಒಂದು ಬ್ರಹ್ಮಾಂಡ, ಅದರಲ್ಲಿ ಪ್ರೋಟೀನ್ ಇದೆ, ಲಿಪಿಡ್ ಕಣಗಳಿವೆ, ಕಿಣ್ವಗಳಿವೆ, ಪೆಪ್ಟೈಡ್ ಬಂಧಗಳಿವೆ, ಚಯಾಪಚಯ ಇದೆ, ಡಿಎನ್‌ಎ ಸುರುಳಿ ಇದೆ, ಕೋಶಪೊರೆ ಇದೆ. ಆ ಆದಿಜೀವಿ ಹೇಗಿತ್ತೊ ನೋಡೋಣವೆಂದರೆ ಯಾವ ಕುರುಹೂ ಉಳಿದಿಲ್ಲ. ಬಿಸಿನೀರ ಬುಗ್ಗೆಯಂಥ ಪುಟ್ಟ ಕೊಳದ ಆದಿರಸದಲ್ಲಿ ಮೀಥೇನ್, ಕಾರ್ಬನ್ ಡೈಆಕ್ಸೈಡ್ ಮುಂತಾದ ಅನಿಲಗಳು ಮಿಂಚಿನ ಹೊಡೆತಕ್ಕೆ ಸಿಕ್ಕು ಜೀವಕಣ ರೂಪುಗೊಂಡಿತು ಎಂದು ಡಾರ್ವಿನ್ ಹೇಳಿದ್ದನ್ನೇ ಜೆಬಿಎಸ್ ಹಾಲ್ಡೇನ್ ಮತ್ತು ಜೆ.ಡಿ. ಬರ್ನಾಲ್ ಕೂಡ ಪ್ರತಿಪಾದಿಸಿದರು. ಮುಂದೆ 1952ರಲ್ಲಿ ಷಿಕಾಗೊದಲ್ಲಿ ಸ್ಟ್ಯಾನ್ಲಿ ಮಿಲ್ಲರ್ ಮತ್ತು ಹರಾಲ್ಡ್ ಯುರೇ ಎಂಬಿಬ್ಬರು ಪ್ರಯೋಗ ಮಾಡಿದರು. ಆಮ್ಲಜನಕರಹಿತ ಗಾಜಿನ ಬುರುಡೆಯಲ್ಲಿ ಅಂಥ ಆದಿರಸದ ಆವಿಯನ್ನು ಅತಿನೇರಳೆ ಕಿರಣಕ್ಕೆ ಒಡ್ಡಿ, ವಿದ್ಯುತ್ ಆಘಾತ ಕೊಟ್ಟು, ಕೃತಕವಾಗಿ ಅಮೈನೊಆಮ್ಲವನ್ನು ಸೃಷ್ಟಿಸಿದರು. ವಿಜ್ಞಾನಲೋಕ ಉಘೇ ಎಂದಿತು. ಧರ್ಮಭೀರುಗಳು ತಂತಮ್ಮ ಆದಿಗ್ರಂಥಗಳನ್ನು, ಜಪಮಣಿಗಳನ್ನು ಅವುಚಿಕೊಂಡರು. ಕಾರನ್ನು ಸೃಷ್ಟಿಸದೆ ಬರೀ ಗಿಯರ್ ಬಾಕ್ಸ್ ತೋರಿಸಿದಿರೆಂದು ವಿಜ್ಞಾನಿಗಳನ್ನು ಟೀಕಿಸಿದರು. ಮಿಲ್ಲರ್-ಯುರೇ ಗುರುಶಿಷ್ಯರ ಪ್ರಯೋಗದಲ್ಲಿ ಜೀವ ವಿಕಾಸಕ್ಕೆ ಬೇಕಾದ ಇನ್ನೊಂದು ಘಟಕ ಮಾತ್ರ (ಸಮಯ-ಕೋಟ್ಯಂತರ ವರ್ಷ) ಇರಲಿಲ್ಲ. ಹಾಗಾಗಿ ತಮ್ಮ ಸಲಕರಣೆಗಳನ್ನು ಸೀಲ್ ಮಾಡಿ ಇಟ್ಟರು. ವಿವಾದ ಬಗೆಹರಿಯಲಿಲ್ಲ.



ಖ್ಯಾತ ಕಾದಂಬರಿಕಾರ ಡ್ಯಾನ್ ಬ್ರೌನ್ ಈ ವಿವಾದವನ್ನೇ ಇಟ್ಟುಕೊಂಡು 2017ರಲ್ಲಿ 'ಒರಿಜಿನ್' ಹೆಸರಿನ ಥ್ರಿಲ್ಲರ್ ಬರೆದ. ಪ್ರಚಂಡ ವಿಜ್ಞಾನಿಯೊಬ್ಬ ಜೀವಿಗಳನ್ನು ಸೃಷ್ಟಿಸಿದ್ದಾನೆಂಬುದು ಗೊತ್ತಾಗಿ ಜಗತ್ತಿನ ಎಲ್ಲ ಧರ್ಮಗಳ 'ಜಾಗತಿಕ ಧರ್ಮ ಸಂಸತ್ತು' ರಹಸ್ಯವಾಗಿ ಸಭೆ ಸೇರುತ್ತದೆ. ಈತನ ಪ್ರಯೋಗ ಫಲಿತಾಂಶ ಹೊರಬೀಳದಂತೆ ತಡೆಯುವುದು ಹೇಗೆಂದು ಕ್ರಿಶ್ಚಿಯನ್, ಇಸ್ಲಾಮಿಕ್ ಮತ್ತು ಯಹೂದಿ ಧರ್ಮಗುರುಗಳು ಚರ್ಚಿಸುತ್ತಾರೆ. ವಿಜ್ಞಾನಿ ತನ್ನ ಸೃಷ್ಟಿಯನ್ನು ಜಗತ್ತಿಗೆ ತೋರಿಸಲೆಂದು ಮಾಧ್ಯಮಗೋಷ್ಠಿ ಆರಂಭಿಸುತ್ತಲೇ ಆತನ ಕೊಲೆಯಾಗುತ್ತದೆ. ಹೀಗಾದೀತೆಂದು ಊಹಿಸಿದ್ದ ವಿಜ್ಞಾನಿ ತನ್ನ ಗೋಷ್ಠಿಯನ್ನು ಮೊದಲೇ ರೆಕಾರ್ಡ್ ಮಾಡಿಟ್ಟಿರುತ್ತಾನೆ, ತಾನು ಯುರೇ-ಮಿಲ್ಲರ್ ಪ್ರಯೋಗದ ಸಾವಯವ ರಸಕ್ಕೆ ಕೋಟ್ಯಂತರ ವರ್ಷಗಳ ಕಾಲವನ್ನೇ ಸಂಕುಚಿತಗೊಳಿಸಿ ಸೇರ್ಪಡೆ ಮಾಡಿ ಜೀವಸೃಷ್ಟಿ ಮಾಡಿದೆನೆಂದು ಹೇಳುತ್ತಾನೆ. ಅದು ಕಟ್ಟುಕತೆ, ಬಿಡಿ.

ಭಾರತೀಯ ಮೂಲದ ರಾಮನಾರಾಯಣನ್ ಕೃಷ್ಣಮೂರ್ತಿ ಮತ್ತು ತಂಡದವರು ಈಗ ಆದಿರಸಕ್ಕೆ ಸೈನೈಡ್ ಸೇರ್ಪಡೆ ಮಾಡಿ ಜೀವಾಂಕುರಕ್ಕೆ ಇನ್ನೊಂದು ಮಾರ್ಗವನ್ನು ಸೂಚಿಸಿದ್ದಾರೆ. ಅಮೋನಿಯಾ, ಕಾರ್ಬನ್ ಡೈಆಕ್ಸೈಡ್ ಮತ್ತು ಸೈನೈಡ್ ಸೇರಿದರೆ ಸಹಜ ತಾಪಮಾನದಲ್ಲೂ ಸಂಕೀರ್ಣ ಜೀವಕಣಗಳನ್ನು ಸೃಷ್ಟಿಸಬಹುದೆಂದು ಅವರು ತೋರಿಸಿದ್ದಾರೆ. ಲ್ಯಾಬ್ ಉಡುಗೆಯಲ್ಲೂ ಹಣೆಗೆ ಢಾಳಾಗಿ ವಿಭೂತಿ ಲೇಪಿಸಿಕೊಳ್ಳುವ ಡಾ. ಕೃಷ್ಣಮೂರ್ತಿಗೆ ಧರ್ಮ ಮತ್ತು ವಿಜ್ಞಾನದ ಮಧ್ಯೆ ತಿಕ್ಕಾಟ ಕಾಣುತ್ತಿಲ್ಲ. ನಿಸರ್ಗವೇ ದೇವರೆಂದು ಪರಿಭಾವಿಸಿದರೆ ಸಂಘರ್ಷವೇ ಬೇಕಾಗಿಲ್ಲ ಎಂದು ಅವರು ವಾದಿಸುತ್ತಾರೆ.

ಅಂತೂ ಜೀವಕ್ಕೆ ಮಾರಕವಾದ ಸೈನೈಡ್ ವಿಷವೇ ಜೀವಸೃಷ್ಟಿಗೂ ನೆರವಾಗುತ್ತದೆ ಎಂದರೆ ಅದು ಉಪನಿಷತ್ತಿನ ಅದ್ವೈತ ತತ್ತ್ವಕ್ಕೆ ಹೊಂದುವಂತೆಯೇ ಇದ್ದೀತು. ದಾರ್ಶನಿಕರು ಹೇಳಬೇಕು.

ಚುರುಮುರಿ



ಆಪರೇಷನ್‌ಗೇ ಆಪರೇಷನ್!

● ಗುರು ಪಿ.ಎಸ್.

'ಏನಿದು, ಏನ್ರೀ ಇದು' ತಲೆ ಮೇಲಿರುವ ಕೆಲವೇ ಕೂದಲನ್ನು ಜಗ್ಗಿಕೊಳ್ಳುತ್ತಾ, ಸಿಟ್ಟಿನಿಂದ ಆಸ್ಪತ್ರೆ ಒಳಗೆ ಬಂದ ಡಾ. ಮುದ್ದಣ್ಣ.

'ಆಪರೇಷನ್' ತಣ್ಣಗೆ ಉತ್ತರಿಸಿದ ಗಡ್ಡಧಾರಿ ಡಾ. ವಿಜಿ.

'ಅದು ಗೊತ್ತು, ನೀವ್ಯಾಕ್ರಿ ಆಪರೇಷನ್ ಮಾಡಿದ್ರಿ, ಅದೇನಿದ್ದರೂ ನಮ್ಮ ಕೆಲಸ ಅಂತ ಗೊತ್ತಿಲ್ವ?'

'ಗೊತ್ತು. ಆ ಕಾರಣಕ್ಕಾಗಿಯೇ ನಿಮಗಿಂತಲೂ ಮುಂಚೆ ನಾನೇ ಆಪರೇಷನ್ ಮಾಡಿದ್ದು'.

'ಇದೇ ಏನ್ರೀ ನಿಮ್ಮ ವೃತ್ತಿಧರ್ಮ?'

'ನೋಡಿ, ನೀವು ಎಲ್ಲದರಲ್ಲಿಯೂ ಧರ್ಮ ತರಬೇಡಿ'.

'ಆ ಧರ್ಮ ಅಲ್ಲ ರೀ, ಇದು ಬೇರೆ ಧರ್ಮ. ವೃತ್ತಿಯಲ್ಲಿ ನೈತಿಕತೆ ಇರಬೇಕು, ಕೊಟ್ಟ ಮಾತಿಗೆ ತಪ್ಪಿ ನಡೆಯದಂತೆ ಇರಬೇಕು ಅನ್ನೋದು ಗೊತ್ತಿಲ್ವ ನಿಮಗೆ? ಅಷ್ಟಕ್ಕೂ ಆಪರೇಷನ್ ಮಾಡೋದ್ರಲ್ಲಿ, ಆಪರೇಷನ್‌ಗೆ ಒಳಗಾಗೋದ್ರಲ್ಲಿ ನಿಮಗೇನ್ರೀ ಅನುಭವ ಇದೆ?'

ಮುದ್ದಣ್ಣನ ಮಾತಿಗೆ ಗಹಗಹಿಸಿ ನಕ್ಕ ವಿಜಿ, 'ನನಗೆ ಅನುಭವ ಇಲ್ಲವೇ? ನನ್ನಷ್ಟು ಆಪರೇಷನ್ ಮಾಡಿದವರು, ಆಪರೇಷನ್‌ಗೆ ಒಳಗಾದವರು ಈ ದೇಶದಲ್ಲಿಯೇ ಯಾರೂ ಇರಲಿಕ್ಕಿಲ್ಲ' ಸಾಧನೆ ಎನ್ನುವಂತೆ ಹೇಳಿದ.

'ನಾನು ಆಸ್ಪತ್ರೆಗೆ ಬರೋವರೆಗಾದರೂ ನೀವು ಕಾಯಬೇಕಿತ್ತು ವಿಜಿ' ಸಮಾಧಾನದಿಂದ ಹೇಳಿದ ಡಾ. ಮುದ್ದಣ್ಣ.

'ಅಷ್ಟರಲ್ಲಿ, ನೀವೇ ಪೇಶೆಂಟ್‌ಗೆ ಆಪರೇಷನ್ ಮಾಡಿ, ನಿನ್ನ ಕೈಯಲ್ಲಿ ಏನೂ ಆಗಲ್ಲ ಅಂತ ಹೇಳಿ ಬೇರೆ ಡಾಕ್ಟರ್‌ನ ತಂದು ಕೂರಿಸ್ತಿದ್ರಿ...' ಮತ್ತೆ ನಕ್ಕ ವಿಜಿ.

'ಹೌದಾ... ನೋಡ್ತಾ ಇರಿ, ನಾವೂ ಟ್ರೀಟ್‌ಮೆಂಟ್ ಮುಂದುವರಿಸ್ತೀವಿ'.

'ಗೊತ್ತು. ಸಿಬಿಐ ಅನ್ನೋ ಇಂಜೆಕ್ಷನ್, ಇ.ಡಿ. ಅನ್ನೋ ಟ್ಯಾಬ್ಲೆಟ್, ಐಟಿ ಅನ್ನೋ ಸಿರಪ್ ಕೊಡ್ತೀರಿ. ಹೈ ಡೋಸ್ ಔಷಧಿಗೆ ಪೇಶೆಂಟ್ ಪರ್ಮನೆಂಟ್ ಆಗಿ ಮೇಲೆಯೇ ಹೋಗೋ ರೀತಿ ಮಾಡ್ತೀರಿ ಅನ್ನೋದು ಗೊತ್ತಿದ್ದೇ, ಎಕ್ಸ್‌ಪರ್ಟ್ ಡಾಕ್ಟರ್‌ಗಳನ್ನೆಲ್ಲ ಅಡ್ಜಸ್ಟ್ ಮಾಡ್ಕೊಳ್ತಿದೀನಿ...' ಗಡ್ಡ ನೀವಿಕೊಳ್ಳುತ್ತಾ ವಾರ್ಡ್ ಒಳಗೆ ಹೋದ ಡಾ. ವಿಜಿ.

ಸಂಗತ

ಸ್ವಾತಂತ್ರ್ಯ: ಬೇಕು ಮರುವ್ಯಾಖ್ಯಾನ

ಸ್ವಾತಂತ್ರ್ಯ ಎಂದರೆ ಪರಕೀಯರ ಆಡಳಿತದಿಂದ ಬಿಡುಗಡೆ ಹೊಂದುವುದು ಮಾತ್ರವಲ್ಲ, ನಮ್ಮವರ ದುರಾಡಳಿತವನ್ನು ಪ್ರಶ್ನೆ ಮಾಡುವುದನ್ನೂ ಒಳಗೊಂಡಿದೆ

● ಡಾ. ಜ್ಯೋತಿ

'ಆಜಾದಿ ಕಾ ಅಮೃತ ಮಹೋತ್ಸವ' ಭಾಗವಾಗಿ ದೇಶವಾಸಿಗಳು ತಮ್ಮ ಮನೆ ಮತ್ತು ಕಚೇರಿಗಳ ಮೇಲೆ ರಾಷ್ಟ್ರಧ್ವಜವನ್ನು ಹಾರಿಸಬೇಕು ಎಂದು ಕರೆ ನೀಡಲಾಗಿದೆ. ದೇಶವು ತನ್ನ ಅಸಂಖ್ಯಾತ ಸ್ವಾತಂತ್ರ್ಯ ಹೋರಾಟಗಾರರ ನಿಸ್ವಾರ್ಥ ಹೋರಾಟ ಮತ್ತು ಬಲಿದಾನದ ಮೂಲಕ ಪಡೆದ ಮಹೋನ್ನತ ಸ್ವಾತಂತ್ರ್ಯದ ಸಾಂದರ್ಭಿಕ ಮರುವ್ಯಾಖ್ಯಾನವನ್ನು ಇಂದಿನ ಪೀಳಿಗೆಗೆ ನೀಡಬೇಕಾದ ಅಗತ್ಯವಿದೆ.

ಮೊದಲನೆಯದಾಗಿ, ಸ್ವಾತಂತ್ರ್ಯವೆಂದರೆ ಪರಕೀಯರ ಆಡಳಿತದಿಂದ ಬಿಡುಗಡೆ ಹೊಂದುವುದು ಮಾತ್ರವಲ್ಲ, ನಮ್ಮವರ ದುರಾಡಳಿತವನ್ನು ಪ್ರಶ್ನೆ ಮಾಡುವುದೂ ಅದರಲ್ಲಿ ಸೇರುತ್ತದೆ. ಇಂತಹ ಪ್ರಶ್ನೆಗಳು ರಾಜಕೀಯ ಸ್ವಾತಂತ್ರ್ಯಕ್ಕೆ ಮಾತ್ರ ಸಂಬಂಧಿಸಿರದೆ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ಬೌದ್ಧಿಕ ಮತ್ತು ವೈಯಕ್ತಿಕ ಸ್ವಾತಂತ್ರ್ಯಗಳನ್ನೂ ಒಳಗೊಂಡಿರುತ್ತವೆ. ಹಾಗಾಗಿ, ಯಾವುದೇ ದೇಶದ ಸ್ವಾತಂತ್ರ್ಯದ ಆಚರಣೆಯು ಸಾಂಕೇತಿಕವಾಗಿರದೆ, ಸ್ವಾತಂತ್ರ್ಯವು ಪ್ರತೀ ನಾಗರಿಕನ ಅನುಭವಕ್ಕೆ ಸಿಗುವಂತೆ ಮಾಡುವ ಬದ್ಧತೆ ಅಲ್ಲಿನ ವ್ಯವಸ್ಥೆಗೆ ಇರಬೇಕಾದುದು ಮುಖ್ಯವೆನಿಸುತ್ತದೆ.

ದೇಶದ ರಾಜಕೀಯ ಸ್ವಾತಂತ್ರ್ಯದ ವಿಚಾರಕ್ಕೆ ಬಂದರೆ, ಪ್ರಸಕ್ತ ರಾಜಕಾರಣದಲ್ಲಿ ಜಾತಿ, ಧರ್ಮ ಮತ್ತು ಹಣದ ಪ್ರಾಬಲ್ಯ ಹಿಂದೆಂದಿಗಿಂತ ಹೆಚ್ಚಾಗಿರುವುದನ್ನು ನಾವು ಕಾಣಬಹುದು. ಇವುಗಳ ಪ್ರಭಾವವಿಲ್ಲದೆ ತನ್ನ ವೈಯಕ್ತಿಕ ವರ್ಚಸ್ಸಿನ ಆಧಾರದ ಮೇಲಷ್ಟೆ ಚುನಾವಣೆ ಗೆದ್ದು ಗದ್ದುಗೆಯೇರುವ ಜನನಾಯಕರು ನಮ್ಮ ನಡುವೆ ಇಲ್ಲವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ರಾಜಕೀಯ ವ್ಯವಸ್ಥೆ ಹದಗೆಟ್ಟಿದೆ. ಇದನ್ನು ಸರಿಪಡಿಸಬೇಕಾದ ಸಂದರ್ಭವಿದು.

ಇನ್ನು ಆರ್ಥಿಕ ಸ್ವಾತಂತ್ರ್ಯದ ಕುರಿತು ಹೇಳುವುದಾದರೆ, ದೇಶದ ಕೃಷಿ ಆಧಾರಿತ ಆರ್ಥಿಕ ವ್ಯವಸ್ಥೆಯ ಬೆನ್ನೆಲುಬಾಗಿರುವ ರೈತನಿಂದು, ಆರ್ಥಿಕ ಸಂಕಷ್ಟದಲ್ಲಿ ಸಿಲುಕಿ ನರಳುವುದು ಹೆಚ್ಚಾಗಿದೆ. ಹಾಗೆಯೇ, ಬೃಹತ್ ಕಂಪನಿಗಳ ಅಬ್ಬರದ ಎದುರು ನಿಲ್ಲಲಾರದೆ, ನಮ್ಮ ಸಣ್ಣ ಕೈಗಾರಿಕೆಗಳು ಬಾಗಿಲು ಮುಚ್ಚುತ್ತಿವೆ. ಕೊರೊನಾ ಕಾರಣದಿಂದ ಆಗಿರುವ ಆರ್ಥಿಕ ಹೊಡೆತದಿಂದ ಉದ್ಯೋಗ ನಷ್ಟವಾಗಿದೆ. ಹೊಸ ಉದ್ಯೋಗಗಳೂ ಸೃಷ್ಟಿಯಾಗುತ್ತಿಲ್ಲ. ಇವುಗಳೊಂದಿಗೆ, ನಿರುದ್ಯೋಗ ಸಮಸ್ಯೆಯು ಯುವಜನರನ್ನು ಕಂಗಾಲಾಗಿಸಿದೆ. ಇವುಗಳ ಬಗ್ಗೆಯೂ ನಾವು ಗಮನಹರಿಸಬೇಕಿದೆ.

ಸಾಮಾಜಿಕಸ್ವಾತಂತ್ರ್ಯವೆಂದರೆ, ನಮ್ಮಸುತ್ತಮುತ್ತಲ ಜಗತ್ತಿನಲ್ಲಿರುವ ಸಾಮಾಜಿಕ ಕಟ್ಟುಪಾಡುಗಳನ್ನು ಒರೆಗೆ ಹಚ್ಚುವ ಮತ್ತು ಆಗಬೇಕಾದ ಬದಲಾವಣೆಗಳಿಗೆ ಒತ್ತಾಸೆಯಾಗಿ ನಿಲ್ಲುವ ಸ್ವಾತಂತ್ರ್ಯ. ಸಾಮಾಜಿಕ ವ್ಯವಸ್ಥೆಗಳು, ಸಾಮುದಾಯಿಕ ಸಂಪ್ರದಾಯಗಳು, ಆಚರಣೆಗಳುಕಾಲಕ್ಕೆತಕ್ಕಂತೆಬದಲಾವಣೆಗೆಒಳಗಾಗದಿದ್ದಲ್ಲಿ ಹೊಸ ಪೀಳಿಗೆಗೆ ಅವು ಅಪ್ರಸ್ತುತ ಎನಿಸುತ್ತವೆ. ಇವುಗಳ ಕುರಿತು ಅರಿವು ಮೂಡಿಸಿ, ಸಾಮಾಜಿಕ ಬಂಧನಗಳಿಂದ ಬಿಡುಗಡೆ ಹೊಂದುವುದು ಹಿಂದೆಂದಿಗಿಂತಲೂ ಇಂದು ಹೆಚ್ಚು ಪ್ರಸ್ತುತ.

ಹಾಗೆಯೇ, ವೈಜ್ಞಾನಿಕ ಆವಿಷ್ಕಾರಗಳು ಮನುಷ್ಯನನ್ನು ಕುರುಡು ನಂಬಿಕೆಗಳಿಂದ ಬಿಡುಗಡೆಗೊಳಿಸಬಹುದು ಎನ್ನುವ ನಿರೀಕ್ಷೆ ಇನ್ನೂ ನೆರವೇರಿಲ್ಲ. ಬದಲಾಗಿ, ಜಾತಿ-ಮತಗಳೇ ಜನರ ಅಸ್ಮಿತೆಯಾಗುತ್ತಿರುವುದು ಮತ್ತು ಅದು ಆಗಲೇಬೇಕೆಂಬ ಒತ್ತಾಯದ ಆಶಯದಿಂದ ವಿವಿಧ ಚಟುವಟಿಕೆಗಳಿಗೆ ಸಾರ್ವಜನಿಕ ವೇದಿಕೆಗಳು ಹೇರಳವಾಗಿ ಸಿಗುತ್ತಿರುವುದು ಕಳವಳಕಾರಿ ಅಂಶ. ಈ ಬಗೆಯ ರಾಜಕಾರಣವು ಜನಸಾಮಾನ್ಯರಿಗೆ ಅರ್ಥವಾದಲ್ಲಿ, ಜಾತಿ, ಮತ, ಧರ್ಮಗಳ ನಡುವಿನ ಗೋಡೆಗಳು ಕಣ್ಮರೆಯಾಗಿ, ನಿಜವಾದ ಸ್ವಾತಂತ್ರ್ಯವನ್ನು ನಾವು ಅನುಭವಿಸಬಹುದು.



ಅದರಂತೆಯೇ, ಬೌದ್ಧಿಕ ಸ್ವಾತಂತ್ರ್ಯವೂ ಅಷ್ಟೇ ಮುಖ್ಯ. ವಿಜ್ಞಾನಿ ಐನ್‌ಸ್ಟೀನ್ ಹೇಳಿದಂತೆ, ಹೊಸ ವಿಚಾರ ಮಂಡನೆಗೆ ಮತ್ತು ನೂತನ ಆವಿಷ್ಕಾರಗಳಿಗೆ ವಿಭಿನ್ನ ಚಿಂತನೆಗಳನ್ನು ಸಹನೆಯಿಂದ ಕೇಳಿಸಿಕೊಂಡು ಅವುಗಳಿಗೆ ಸೂಕ್ತ ಸ್ಥಾನ ಕಲ್ಪಿಸುವುದು ಬಹಳ ಮುಖ್ಯವಾಗುತ್ತದೆ. ಜಗತ್ತು ತನ್ನ ನಿರಂತರತೆಯನ್ನು ಕಾಯ್ದುಕೊಳ್ಳುವುದೇ ಬದಲಾವಣೆಯಿಂದ. ಈ ಬದಲಾವಣೆ ಸಾಧ್ಯವಾಗುವುದು ಹೊಸ ಪ್ರಶ್ನೆಗಳಿಂದ. ಹಾಗಾಗಿ, ವ್ಯವಸ್ಥೆಯನ್ನು ತಮ್ಮ ಅಧೀನದಲ್ಲಿ ಹಿಡಿದಿಟ್ಟುಕೊಳ್ಳಲು ಬಯಸಿದವರು, ಪ್ರಶ್ನಿಸುವ ಮಂದಿಯನ್ನು ಶಿಕ್ಷೆಗೆ ಒಳಪಡಿಸುತ್ತಾ ಬಂದಿರುವುದನ್ನು ನಾವು ಮನುಷ್ಯನ ಇತಿಹಾಸದುದ್ದಕ್ಕೂ ಕಾಣುತ್ತೇವೆ. ಆದರೆ, ನಾವೀಗ 'ಪ್ರಜಾ'ಪ್ರಭುತ್ವದಲ್ಲಿದ್ದೇವೆ ಮತ್ತು ವರ್ತಮಾನ ಜಗತ್ತಿನ ಅತ್ಯಂತ ಜರೂರಿನ ತುರ್ತು, ಪ್ರಜೆಗಳ ಬೌದ್ಧಿಕ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದು.

ಇನ್ನು ವೈಯಕ್ತಿಕ ಸ್ವಾತಂತ್ರ್ಯಕ್ಕೆ ಬಂದಲ್ಲಿ, ಮೂಲತಃ ನಾವು ಒಂದು ಪೂರ್ವನಿರ್ಧರಿತ ಕಟ್ಟುಪಾಡುಗಳ ವ್ಯವಸ್ಥೆಯೊಳಗೆ ಜನ್ಮ ಪಡೆಯುತ್ತೇವೆ. ಅದ್ಯಾವುದೂ ನಮ್ಮ ಆಯ್ಕೆಯದ್ದಲ್ಲ. ಆದರೆ, ಬೆಳೆಯುತ್ತಾ ಪ್ರಾಪಂಚಿಕ ಅರಿವು ಪಡೆದಂತೆ, ಈ ಸಂಕೋಲೆಗಳಿಂದ ಬಿಡುಗಡೆ ಪಡೆದು ತನ್ನಿಷ್ಟದ ಸ್ವಾತಂತ್ರ್ಯ ಅನುಭವಿಸಬೇಕೆಂದುಕೊಳ್ಳುವುದು ಸಹಜ. ಆದರೆ, ವ್ಯವಸ್ಥೆಗಳು ಅಷ್ಟು ಸುಲಭವಾಗಿ ನಮ್ಮನ್ನು ಬಿಟ್ಟುಕೊಡುವುದಿಲ್ಲ. ಇಲ್ಲಿ ದೈಹಿಕ ಬಂಧನಕ್ಕಿಂತ, ಭಾವನಾತ್ಮಕ ಮತ್ತು ಮಾನಸಿಕ ಬಂಧನಗಳೇ ಪ್ರಾಧಾನ್ಯ ಪಡೆಯುತ್ತವೆ. ಈ ದಿಸೆಯಲ್ಲಿ, ಮನುಷ್ಯ ತನ್ನ ಆಯ್ಕೆಯ ಬದುಕನ್ನು ನಿರ್ಭೀತಿಯಿಂದ ನಡೆಸುವಂತಾಗುವುದೇ ನಿಜವಾದ ಸ್ವಾತಂತ್ರ್ಯ.

ಕೊನೆಯದಾಗಿ, ಬುದ್ಧನೆಂದಂತೆ, ಬಾಹ್ಯ ವ್ಯಕ್ತಿಗಳೆಂದೂ ನಮ್ಮ ಆತ್ಮಶಕ್ತಿಯನ್ನು ಆಳಲು ಸಾಧ್ಯವಿಲ್ಲ ಎನ್ನುವ ಪ್ರಜ್ಞೆ ಮೂಡುವ ದಿನವೇ ನಿಜವಾದ ಸ್ವಾತಂತ್ರ್ಯ ಪಡೆಯುತ್ತೇವೆ.

ವಾಚಕರ ವಾಣಿ

ಪ್ರೋತ್ಸಾಹ ಮೊದಲೇ ಸಿಗಲಿ

ಪ್ರತಿಷ್ಠಿತ ಕ್ರೀಡಾಕೂಟಗಳಲ್ಲಿ ಪದಕ ಗಳಿಸಿದ ದೇಶದ ಕ್ರೀಡಾಪಟುಗಳಿಗೆ ಸರ್ಕಾರ, ಕ್ರೀಡಾ ಸಂಸ್ಥೆಗಳು ಮತ್ತು ಉದ್ಯಮಿಗಳು ನಗದು ಬಹುಮಾನ ಘೋಷಿಸುವುದು ವಾಡಿಕೆ. ಪದಕ ಗಳಿಸಿದ ನಂತರದ ಈ ಪ್ರೋತ್ಸಾಹಕ ಕ್ರಮ ಸ್ವಾಗತಾರ್ಹ. ಆದರೆ, ಪದಕ ಪಡೆಯಲು ಬೇಕಾದ ಸೌಲಭ್ಯ, ಹಣಕಾಸಿನ ನೆರವು ಇದಕ್ಕಿಂತ ಮುಖ್ಯವಾದುದು. ಭರವಸೆಯ ಕ್ರೀಡಾಪಟುಗಳಿಗೆ ಅಗತ್ಯ ಸಂದರ್ಭದಲ್ಲಿ ಸೂಕ್ತ ನೆರವು, ಪ್ರೋತ್ಸಾಹ ದೊರೆತರೆ ಪದಕ ಪಟ್ಟಿಯಲ್ಲಿ ಭಾರತ ಇನ್ನೂ ಮೇಲೇರುತ್ತದೆ.

ನಮ್ಮ ಅನೇಕ ಶಾಲಾ ಕಾಲೇಜುಗಳಿಗೆ ಸರಿಯಾಗಿ ಆಟದ ಮೈದಾನ ಇರುವುದಿಲ್ಲ. ಸರ್ಕಾರಿ ಶಾಲೆಗಳಲ್ಲಿ ಕ್ರೀಡಾ ಸಾಮಗ್ರಿಗಳು ಇರುವುದಿಲ್ಲ. ಇಂತಹ ಕೊರತೆಗಳ ನಡುವೆ ಉತ್ತಮ ಕ್ರೀಡಾಪಟುಗಳು ರೂಪುಗೊಳ್ಳುವುದು ಹೇಗೆ? ಪದಕ ಗಳಿಸುವುದಾದರೂ ಹೇಗೆ?

ಚನ್ನಕೇಶವ ಜಿ.ಕೆ., ತರೀಕೆರೆ

ದೇಶಿ ಭಾಷೆ: ಬದ್ಧತೆ ತೋರಲು ಸಕಾಲ

ವೆಂಕಯ್ಯ ನಾಯ್ಡು ಅವರು ಉಪರಾಷ್ಟ್ರಪತಿ ಅವಧಿ ಮುಗಿದ ಸಂದರ್ಭದಲ್ಲಿ ವಿದಾಯ ಭಾಷಣ ಮಾಡುವಾಗ, ಮಾತೃಭಾಷೆ ಅಥವಾ ರಾಜ್ಯ ಭಾಷೆಗಳ ಬಳಕೆಯ ಮಹತ್ವ ಕುರಿತು ಒತ್ತಿ ಹೇಳಿದರು. ಈ ಹಿಂದೆ ಕೂಡ ಅವರು ಹಲವಾರು ಸಂದರ್ಭಗಳಲ್ಲಿ ಈ ಬಗ್ಗೆ ಮಾತನಾಡಿದ್ದುಂಟು. ದೇಶಿ ಭಾಷೆಗಳ ಕುರಿತು ಅವರ ಕಳಕಳಿ ಪ್ರಶಂಸನೀಯ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ದಿಸೆಯಲ್ಲಿ ಕಾರ್ಯಪ್ರವೃತ್ತವಾಗಬೇಕಾಗಿದೆ.

ದೇಶಿ ಭಾಷೆಗಳಿಗೆ ಸಾಂವಿಧಾನಿಕ ಬಲ ನೀಡಲು ಅವು ಮೊದಲು ಮುಂದಾಗಬೇಕು. ಅದರಲ್ಲೂ ಪ್ರಾಥಮಿಕ ಹಂತದಲ್ಲಿ ಆಯಾ ರಾಜ್ಯಗಳ ಭಾಷೆಯು ಕಲಿಕಾ ಮಾಧ್ಯಮವಾಗದೆ, ದೇಶಿ ಭಾಷೆಗಳಿಗೆ ಬಲ ಬರುವುದಿಲ್ಲ. ಈ ಕುರಿತು ಇರುವ ಎಲ್ಲ ದ್ವಂದ್ವಗಳು ಮತ್ತು ಗೊಂದಲಗಳನ್ನು ಹೋಗಲಾಡಿಸಲು ಸರ್ಕಾರಗಳು ತ್ವರಿತ ಕ್ರಮ ತೆಗೆದುಕೊಳ್ಳುವ ಮೂಲಕ ದೇಶಿ ಭಾಷೆಗಳ ಕುರಿತು ತಮಗಿರುವ ಬದ್ಧತೆಯನ್ನು ತೋರಿಸಲು ಇದು ಸಕಾಲ.

ವೆಂಕಟೇಶ ಮಾಚಕನೂರ, ಧಾರವಾಡ

ಸಾಹಿತ್ಯ ಸಮ್ಮೇಳನ: ದಿನ ನಿಗದಿಯಾಗಲಿ

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಆಯೋಜನೆಗೆ ನಿರ್ದಿಷ್ಟ ದಿನ ನಿಗದಿ ಮಾಡುವುದು ಒಳ್ಳೆಯದು. ಪ್ರತಿವರ್ಷ ಅದೇ ದಿನಗಳಂದು ಸಮ್ಮೇಳನ ಆಯೋಜನೆ ಆಗಬೇಕು. ಸರ್ಕಾರ ಅಥವಾ ಇನ್ನಾವುದೋ ಬಾಹ್ಯ ಒತ್ತಡಗಳು ದಿನಾಂಕ ನಿಗದಿಯ ಮೇಲೆ ಪರಿಣಾಮ ಬೀರಬಾರದು. ರಾಜ್ಯೋತ್ಸವ ಮಾಸ ನವೆಂಬರ್‌ನಲ್ಲಿ ಮೂರು ದಿನಗಳನ್ನು ಗೊತ್ತುಪಡಿಸಲಿ. ಪ್ರತಿವರ್ಷ ಆ ನಿಗದಿತ ದಿನಗಳಂದೇ ಸಮ್ಮೇಳನ ನಡೆಯಲಿ. ಸರ್ಕಾರದ ಅನುದಾನವು ಅಕ್ಟೋಬರ್ ತಿಂಗಳಲ್ಲೇ ಬಿಡುಗಡೆ ಆಗಲಿ. ಸಮ್ಮೇಳನದಲ್ಲಿ ಭಾಗವಹಿಸಲು ಕನ್ನಡ ಮನಸ್ಸುಗಳು ಸಿದ್ಧವಾಗಿರಲು ಇದರಿಂದ ಅನುಕೂಲ ಆಗುತ್ತದೆ.

ಮಲ್ಲಿಕಾರ್ಜುನ, ಸುರಧೇನುಪುರ

ಬಿಹಾರ: ಇರುವುದು ರಾಜಕೀಯ ಮಹತ್ವ ಮಾತ್ರ

ಜೆ.ಪಿ. ಅವರ ಕರ್ಮಕ್ಷೇತ್ರ ಬಿಹಾರದಲ್ಲಿ ರಾಜಕೀಯ ಇನ್ನೊಮ್ಮೆ ಮಗ್ಗುಲು ಬದಲಿಸಿದೆ. ಒಡಿಶಾದ ಬಿಜೆಡಿಯು ಬಿಜೆಪಿ ಬಗೆಗೆ ಸ್ಥಿರ ನಿಲುವನ್ನು ತೋರುತ್ತ ಬಂದಿದೆ. ಆದರೆ ಜೆಡಿಯು ಒಮ್ಮೆ ಅದರ ಜತೆ ಇರುವುದು, ಇನ್ನೊಮ್ಮೆ ಹೊರನಡೆಯುವುದು ಮಾಡುತ್ತ ಬಂದಿದೆ. ಸಿದ್ಧಾಂತ, ವೈಚಾರಿಕ ಮತಭೇದ ಕಾರಣ ಎಂದೇನೂ ಹೇಳಲಾಗಿಲ್ಲ. ನಿತೀಶ್ ಕುಮಾರ್ ಅವರಿಗೆ ಭವಿಷ್ಯದ ಬಗೆಗೆ ಆತ್ಮವಿಶ್ವಾಸ ಇಲ್ಲದಿರುವುದು ಸ್ಪಷ್ಟ.

ಮಹಾಘಟಬಂಧನ್ 2024ರವರೆಗೆ ನಿತೀಶ್ ಅವರನ್ನೇ ಮುಖ್ಯಮಂತ್ರಿಯಾಗಿ ಉಳಿಸಬಹುದು. ಆದರೆ ಆರ್‌ಜೆಡಿಯು ಅಧಿಕಾರದಲ್ಲಿ ತನ್ನ ಪಾಲನ್ನು ಪಡೆದು, ಅದನ್ನು ಪ್ರದರ್ಶಿಸಲೂಬಹುದು. ಪೂರ್ವ ಭಾರತದಲ್ಲಿ ಮಹತ್ವದ ರಾಜ್ಯವೊಂದರಲ್ಲಿ ಏಕಾಂಗಿಯಾದುದು ಬಿಜೆಪಿಗೆ ಒಂದು ಹಿನ್ನಡೆ. 'ಸಬ್ ಕಾ ಸಾಥ್' ಘೋಷಣೆಯನ್ನು ತನ್ನ ಮಿತ್ರಪಕ್ಷಗಳ ಜತೆಗೇ ಸರಿಯಾಗಿ ಅನುಷ್ಠಾನ ಮಾಡಿಲ್ಲದಿರುವುದು ಅದರ ದೋಷ. ರಾಷ್ಟ್ರಮಟ್ಟದಲ್ಲಿ ವಿರೋಧ ಪಕ್ಷಗಳ ಏಕತೆಗೆ ಇದು ಪ್ರೇರಕ ಆದೀತೇ? ಸದ್ಯಕ್ಕೆ ಅದು ಅತಿಯಾದ ನಿರೀಕ್ಷೆ. ಬಿಹಾರದ ಸಮಸ್ಯೆಗಳು ಎರಡು-ಮೂರು ವರ್ಷಗಳಲ್ಲಿ ಬಗೆಹರಿಯುವಂತಹವಲ್ಲ. ವಿಶೇಷ ಪ್ಯಾಕೇಜ್, ಸ್ಥಾನಮಾನ ನೀಡುವುದು ಯಾವ ರಾಷ್ಟ್ರೀಯ ಪಕ್ಷ ನೇತೃತ್ವದ ಸರ್ಕಾರಕ್ಕೂ ಸಾಧ್ಯವಿಲ್ಲ. ಕೆಲವು ಯೋಜನೆಗಳನ್ನು ತ್ವರಿತಗೊಳಿಸಬಹುದಷ್ಟೆ. ಹಾಗಾಗಿ ಈಗಿನ ಬೆಳವಣಿಗೆಗೆ ರಾಜಕೀಯ ಮಹತ್ವ ಮಾತ್ರ ಇದೆ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ರಾಜಕೀಯ ಮೇಲಾಟ: ಪ್ರಜಾಪ್ರಭುತ್ವದ ಅಣಕ

ಬಿಹಾರದಲ್ಲಿ ನಡೆದಿರುವ ರಾಜಕೀಯ ಮೇಲಾಟವನ್ನು ನೋಡಿದಾಗ, ಇಂತಹ ಬೆಳವಣಿಗೆಗಳು ಪ್ರಜಾಪ್ರಭುತ್ವದ ಅಣಕವಲ್ಲದೆ ಮತ್ತೇನೂ ಅಲ್ಲ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಅಧಿಕಾರ ಹಿಡಿಯಲು ಸಂಖ್ಯೆಯೊಂದು ಮಾನದಂಡವೇ ಅಲ್ಲ ಎಂಬಂತಾಗಿದೆ. ದೊಡ್ಡ ಪಕ್ಷಗಳು ಮತ್ತೊಂದು ಪಕ್ಷವನ್ನು ಅಧಿಕಾರದಿಂದ ದೂರ ಇಡಲು ಕಡಿಮೆ ಶಾಸಕರನ್ನು ಹೊಂದಿರುವ ಪಕ್ಷಕ್ಕೆ ಅವಮಾನ ನುಂಗಿ ಬೆಂಬಲ ನೀಡುತ್ತಿರುವುದು ವಿಪರ್ಯಾಸದ ಸಂಗತಿ. ಮತ ನೀಡಿದ ಮಹನೀಯರು ಬೆಪ್ಪಾಗಿ, ರಾಜಕೀಯ ಅಟಾಟೋಪಗಳನ್ನು ನೋಡುತ್ತಾ ಕುಳಿತುಕೊಳ್ಳಬೇಕಾದ ಪರಿಸ್ಥಿತಿ.

ಇಂತಹ ವಿದ್ಯಮಾನಗಳು ಸಾಮಾನ್ಯ ಎಂಬಂತಾಗಿಹೋಗಿವೆ. ಈಗೇನಿದ್ದರೂ ಅಂಕೆ ಸಂಖ್ಯೆಗಳ (ಕು)ತಂತ್ರದ್ದೇ ಆಟ. ಇನ್ನು ನೈತಿಕತೆಗೆ ನೆಲೆ ಎಲ್ಲಿ? ನೈತಿಕತೆಯಿಲ್ಲದ ಪ್ರಜಾಪ್ರಭುತ್ವ ಇದ್ದರೂ ಹೆಸರಿಗಷ್ಟೆ. ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ಪ್ರಜಾಪ್ರತಿನಿಧಿಗಳ ನೈತಿಕತೆಯ ಮಟ್ಟವನ್ನು ಹೆಚ್ಚಿಸುವ ಕುರಿತು ವ್ಯಾಪಕ ಚರ್ಚೆ ನಡೆಯಬೇಕಾಗಿದೆ. ಪ್ರಜಾಪ್ರಭುತ್ವವು ಹಸಿದ ಹದ್ದುಗಳ ಆಹಾರವಾಗದೆ ಸರ್ವರಿಗೂ ಸಮಾನ ನ್ಯಾಯ ದೊರಕಲಿ.

ಸರೋಜಿನಿ ನಾಯಕ್, ಆಶೀಹಾಳ ತಾಂಡಾ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದೂಳು ಹಿಡಿದಿರುವ ಹಲವು ವರದಿಗಳು


ಪಶ್ಚಿಮ ಘಟ್ಟದ ರಕ್ಷಣೆಗೆ ಪರ್ಯಾಯಗಳೇನು?

ಸಲ್ಲಿಕೆಯಾದ ಪ್ರಮುಖ ವರದಿಗಳು

- ಪಶ್ಚಿಮಘಟ್ಟ ಕಾರ್ಯಪಡೆ ವರದಿ
- ಸುಸ್ಥಿರ ಅಭಿವೃದ್ಧಿ ಗುರಿ (ಎಸ್‌ಡಿಜಿ) ರಾಜ್ಯ ಯೋಜನಾ ಅಭಿವೃದ್ಧಿ ವರದಿ
- ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯ ಆಡಿಟ್ ಮತ್ತು ಹಸಿರು ಬಜೆಟ್ ವರದಿ
- ಪಶ್ಚಿಮ ಘಟ್ಟದಲ್ಲಿ ಭೂಕುಸಿತಗಳು ಕುರಿತ ಕರ್ನಾಟಕ ಸರ್ಕಾರದ ಉನ್ನತ ಮಟ್ಟದ ತಜ್ಞರ ಸಮಿತಿ ವರದಿ

ಪ್ರಜಾವಾಣಿ ಪ್ರಜಾಧ್ವನಿ – ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಸಂಸತ್ತಿನ ಮುಂಗಾರು ಅಧಿವೇಶನದ ಅವಧಿಯನ್ನು ಮೊಟಕುಗೊಳಿಸಿರುವ ಸರ್ಕಾರದ ನಿರ್ಧಾರ ಸಮರ್ಥನೀಯವೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

● ಎಸ್.ರವಿಪ್ರಕಾಶ್



ಪಶ್ಚಿಮಘಟ್ಟ ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯವೆಂದು ಗುರುತಿಸುವ ಸಂಬಂಧ ವಿಜ್ಞಾನಿ ಡಾ.ಮಾಧವ್ ಗಾಡ್ಗೀಳ್ ಮತ್ತು ಡಾ. ಕಸ್ತೂರಿರಂಗನ್ ವರದಿಗಳು ಸದಾ ತಕ್ಕೇ ಇರುವ ಮಲೆನಾಡು ಪ್ರದೇಶದಲ್ಲಿ ರಾಜಕೀಯ ಬಿರುಗಾಳಿಯನ್ನೇ ಎಬ್ಬಿಸಿದ್ದವು. ಈ ವ್ಯಾಪ್ತಿಯಲ್ಲಿ ಬರುವ ಹೆಚ್ಚಿನ ರಾಜ್ಯಗಳು ಈ ವರದಿಗಳನ್ನು ಸಾರಾಸಗಟಾಗಿ ತಿರಸ್ಕರಿಸಿವೆ. 'ಇವುಗಳ ಜಾರಿ ಸಾಧ್ಯವೇ ಇಲ್ಲ' ಎಂದೂ ಕೇಂದ್ರಕ್ಕೂ ಪದೇ ಪದೇ ಹೇಳಿವೆ. ಮತ್ತೊಂದೆಡೆ ಪಶ್ಚಿಮಘಟ್ಟ ಕಳೆದ ಕೆಲವು ವರ್ಷಗಳಿಂದ ಪ್ರಚಂಡ ಪ್ರಾಕೃತಿಕ ವಿಕೋಪದ ಮೂಲಕ ಬೇರೆಯದೇ 'ಸಂದೇಶ' ನೀಡುತ್ತಿದೆ. ನಿಸರ್ಗದ ಈ 'ಆಕ್ರೋಶ'ಕ್ಕೆ ಕಿವಿಗೊಡುವವರು ಯಾರು? ಇವೆರಡರ ತದ್ವಿರುದ್ಧ ನಡುವೆ ಸಮತೋಲನವನ್ನು ಕಾಯ್ದುಕೊಳ್ಳುವುದು ಹೇಗೆ? ಪಶ್ಚಿಮಘಟ್ಟದ ಸಂರಕ್ಷಣೆಗಾಗಿ ಸರ್ಕಾರಕ್ಕೆ ಕಾಲ ಕಾಲಕ್ಕೆ ಹಲವು ತಜ್ಞರು ವರದಿಗಳ ಮೂಲಕ ಶಿಫಾರಸುಗಳನ್ನು ನೀಡಿದ್ದಾರೆ. ಆ ವರದಿಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ? ಅವುಗಳ ಅನುಷ್ಠಾನ ಎಷ್ಟರ ಮಟ್ಟಿಗೆ ಆಗಿದೆ ಎಂಬುದನ್ನು ಪರಿಶೀಲಿಸಿದರೆ ಉತ್ತರ ಮಾತ್ರ ಶೂನ್ಯ. ಎಂದಿನಂತೆ ವರದಿಗಳು ದೂಳು ಹಿಡಿದು ಕುಳಿತಿವೆ.

ಅವುಗಳಲ್ಲಿ ಪಶ್ಚಿಮಘಟ್ಟ ಕಾರ್ಯಪಡೆ ವರದಿ, ರಾಜ್ಯ ಯೋಜನಾ ಇಲಾಖೆಯ ಸುಸ್ಥಿರ ಅಭಿವೃದ್ಧಿ ಗುರಿ (ಎಸ್‌ಡಿಜಿ) ವರದಿ, ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯ ಆಡಿಟ್ ಮತ್ತು ಹಸಿರು ಬಜೆಟ್ ವರದಿ, ಪಶ್ಚಿಮ ಘಟ್ಟದಲ್ಲಿ ಭೂಕುಸಿತಗಳ ಕುರಿತ ಕರ್ನಾಟಕ ಸರ್ಕಾರದ ಉನ್ನತ ಮಟ್ಟದ ತಜ್ಞರ ಸಮಿತಿ ವರದಿಗಳು ಉಲ್ಲೇಖಾರ್ಹವಾಗಿವೆ.

ಕಳೆದ 30-35 ವರ್ಷಗಳಲ್ಲಿ ನೆಡುತೋಪುಗಳನ್ನು ಬೆಳೆಸುವ ಆಂದೋಲನಗಳಾಗಿಯೂ ಯಶಸ್ವಿಯಾಗಿವೆ. ಇದರ ಪರಿಣಾಮ ಕರ್ನಾಟಕ ಭೂಪ್ರದೇಶದ ಉಪಗ್ರಹ ಆಧಾರಿತ ಚಿತ್ರಗಳನ್ನು ಪರಿಶೀಲಿಸಿದಾಗ ರಾಜ್ಯದಲ್ಲಿ ಹಸಿರು ಪ್ರದೇಶದ ವ್ಯಾಪ್ತಿ ಹಿಗ್ಗಿರುವುದು ಕಂಡುಬರುತ್ತದೆ. ಆದರೆ, ಪಶ್ಚಿಮಘಟ್ಟ ಪ್ರದೇಶದಲ್ಲಿ ಲಕ್ಷಾಂತರ ವರ್ಷಗಳಿಂದ ವಿಕಸನಗೊಂಡು ಬಂದಿರುವ ಅಮೂಲ್ಯ ಜೀವ ವೈವಿಧ್ಯಗಳ ಸೂಕ್ಷ್ಮ ತಾಣಗಳಿಗೆ ಘಾಸಿಯಾಗುತ್ತಿರುವುದಂತೂ ನಿಜ. ವಿಶ್ವ ಜೈವಿಕ ವೈವಿಧ್ಯಗಳ ಪ್ರಮುಖ ಎಂಟು ತಾಣಗಳಲ್ಲಿ ಪಶ್ಚಿಮಘಟ್ಟವೂ ಒಂದು ಎಂದು ಯುನೆಸ್ಕೊ ಗುರುತಿಸಿದೆ. ಸರೀಸೃಪ, ಉಭಯಚರ, ಮೀನುಗಳು, ಪಕ್ಷಿಗಳು ಮತ್ತು ಸಸ್ತನಿಗಳ ಪ್ರಭೇದಗಳ ಪೈಕಿ ದೇಶದ ಶೇ 30 ರಷ್ಟು ಪಶ್ಚಿಮಘಟ್ಟದಲ್ಲಿವೆ. ಹೀಗಾಗಿ ಅಪರೂಪದ ಜೀವ ವೈವಿಧ್ಯಗಳ ಕಣಜ ಎಂದೇ ಕರೆಯಲಾಗುತ್ತದೆ. ಇವೆಲ್ಲಾ ಕಣ್ಮರೆಯಾಗುತ್ತಿವೆ. ಈ ನಷ್ಟವನ್ನು 'ಹಸಿರೀಕರಣ ಆಂದೋಲನ'ಗಳು ಸರಿದೂಗಿಸಲು ಸಾಧ್ಯವೇ?

ಪಶ್ಚಿಮಘಟ್ಟದಲ್ಲಿನ ಪ್ರಾಕೃತಿಕ ಅವಘಡಗಳನ್ನು ತಪ್ಪಿಸಲು ಅರಣ್ಯ ಇಲಾಖೆ, ಕಂದಾಯ ಇಲಾಖೆ ಮತ್ತು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಗಳೇ ರೂಪಿಸಿರುವ ಕಾಯ್ದೆಗಳು-ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿ ಮಾಡಿ, ಪಾಲನೆ ಮಾಡಿದ್ದೇ ಆದಲ್ಲಿ ಪಶ್ಚಿಮಘಟ್ಟದ ರಕ್ಷಣೆ ಸಾಧ್ಯ ಎನ್ನುವುದು ಈವರೆಗೆ ಸಲ್ಲಿಕೆಯಾಗಿರುವ ಅಷ್ಟೂ ವರದಿಗಳ ಆಶಯ.

ಅಚ್ಚರಿ ಎಂದರೆ, ಪಶ್ಚಿಮಘಟ್ಟದಲ್ಲಿ ಮಳೆ ಪ್ರಮಾಣ, ಬೆಟ್ಟ- ಇಳಿಜಾರು ಮತ್ತು ಅರಣ್ಯ ಪ್ರದೇಶದ ಪರಿಸರ ಸೂಕ್ಷ್ಮತೆ ಸರ್ಕಾರದ ಯಾವುದೇ 'ಅಭಿವೃದ್ಧಿ'ಪರ ಯೋಜನೆಗಳಲ್ಲೂ ಬಿಂಬಿತವಾಗಿಲ್ಲ. ಅಂದರೆ, ಈ ಭಾಗವನ್ನು ಲಕ್ಷ್ಯಕ್ಕೇ ತೆಗೆದುಕೊಂಡಿಲ್ಲ. ಭೂಬಳಕೆ ವಿಚಾರದಲ್ಲಂತೂ ವೈಜ್ಞಾನಿಕ ಆಲೋಚನೆಗಳೇ ಇಲ್ಲ ಎಂಬುದಕ್ಕೆ ಹಲವು ನಿದರ್ಶನಗಳನ್ನು ನೀಡಬಹುದು. ಉದಾಹರಣೆಗೆ ಹೆದ್ದಾರಿ ನಿರ್ಮಾಣದ ವಿಚಾರವನ್ನೇ ತೆಗೆದುಕೊಂಡರೆ, ಬಯಲುಸೀಮೆ ಪ್ರದೇಶದಲ್ಲಿ ಹೆದ್ದಾರಿ ನಿರ್ಮಾಣ ಮಾಡಲು ಅನುಸರಿಸುವ ಮಾನದಂಡಗಳನ್ನೇ ಪಶ್ಚಿಮಘಟ್ಟಕ್ಕೂ ಅನ್ವಯಗೊಳಿಸುತ್ತಾರೆ. ಹೀಗಾಗಿ ಬೇಕಾಬಿಟ್ಟಿಯಾಗಿ ಮರಗಳ ಹನನ ಮಾಡುತ್ತಾರೆ, ಗುಡ್ಡಗಳನ್ನು ಕತ್ತರಿಸುತ್ತಾರೆ. ಈ ಪ್ರದೇಶಕ್ಕೆ ಪ್ರತ್ಯೇಕ ನೀತಿಯೇ ಇಲ್ಲ, ಅಷ್ಟೇ ಅಲ್ಲ ಜಲಸಂಪತ್ತು, ರಸ್ತೆ, ಗಣಿಗಾರಿಕೆ, ಪ್ರವಾಸೋದ್ಯಮ ಹೀಗೆ ಯಾವುದನ್ನೇ ತೆಗೆದುಕೊಂಡರೂ ಇಡೀ ರಾಜ್ಯಕ್ಕೆ ಒಂದೇ ಮಾನದಂಡ ಎಂಬಂತೆ ನಿರ್ಧರಿಸಲಾಗುತ್ತದೆ. ಮಲೆನಾಡು ಭಾಗಕ್ಕೆಂದೇ ಭಿನ್ನವಾಗಿ ಯೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವ ಆಸಕ್ತಿ ಅಧಿಕಾರಸ್ಥರಿಗೆ ಇಲ್ಲ. ಆರ್ಥಿಕ ಅಭಿವೃದ್ಧಿ ಕೇಂದ್ರಿತವಾದ ಯಾವುದೇ ಯೋಜನೆಗಳು ಸುಸ್ಥಿರಗೊಳ್ಳಬೇಕಿದ್ದರೆ, ಪಶ್ಚಿಮಘಟ್ಟದ ಪರಿಸರ, ಮಳೆ, ಇಳಿಜಾರು ಮತ್ತು ಅರಣ್ಯ ಹಾಗೂ ಪರಿಸರಕ್ಕೆ ಹೊಂದಿಕೊಳ್ಳುವಂತಿರಬೇಕು. ಅದಕ್ಕಾಗಿ ಭೂಬಳಕೆಯ ಬಗ್ಗೆ ಸರ್ಕಾರ ನೀತಿಯೊಂದನ್ನು (ಲ್ಯಾಂಡ್ ಯೂಸ್ ಪಾಲಿಸಿ) ರೂಪಿಸಿ ಕಾನೂನು ಬದ್ಧಗೊಳಿಸಬೇಕು.

ಪಶ್ಚಿಮಘಟ್ಟದ ನಿರ್ವಹಣೆಯು ಮೂರು ಇಲಾಖೆಗಳು ಅಥವಾ ಸರ್ಕಾರಿ ವ್ಯವಸ್ಥೆಯಲ್ಲಿ ಹಂಚಿ ಹೋಗಿದೆ. ಅರಣ್ಯ ಇಲಾಖೆ, ಕಂದಾಯ ಇಲಾಖೆ ಮತ್ತು ಸ್ಥಳೀಯ ಸಂಸ್ಥೆಗಳ ಅಡಿ ಅರಣ್ಯ ಭೂಮಿ ನಿರ್ವಹಣೆ ಆಗುತ್ತಿದೆ. ಪರಿಸರದ ಸೂಕ್ಷ್ಮತೆಗೆ ಭಂಗ ಬಾರದಂತೆ ಹೇಗೆ ನಿರ್ವಹಿಸಬೇಕು ಎಂಬ ನಿಯಮ ಮತ್ತು ಮಾರ್ಗಸೂಚಿಗಳೇನೋ ಈ ಇಲಾಖೆಗಳ ಕಾಯ್ದೆಗಳಲ್ಲಿ ಉಲ್ಲೇಖಿತವಾಗಿವೆ. ಆದರೆ, ಅವುಗಳನ್ನು ಚಾಚೂತಪ್ಪದೇ ಅನುಷ್ಠಾನ ಮಾಡುವಲ್ಲಿ ಮಾತ್ರ ವಿಫಲವಾಗಿವೆ. ಇದಕ್ಕೆ ಮತ್ತೊಂದು ಉದಾಹರಣೆ ಎಂದರೆ, ಬೆಂಗಳೂರಿನಂತಹ ನಗರಗಳಲ್ಲಿ ರಾಜಕಾಲುವೆ ಒತ್ತುವರಿ ಆದ ಪರಿಣಾಮ ನಗರದಲ್ಲಿ ಪ್ರವಾಹ ಬರುತ್ತದೆಯಲ್ಲ ಅದೇ ರೀತಿ ಮಲೆನಾಡು ಪ್ರದೇಶದಲ್ಲಿ ನದಿ, ತೊರೆ, ಹಳ್ಳಗಳು ಸಹಜವಾಗಿ ಹರಿಯುವ ಮಾರ್ಗಗಳು ಅತಿಕ್ರಮಣವಾಗಿವೆ ಅಥವಾ ನೀರು ಹರಿಯುವಿಕೆಗೆ ಅಡ್ಡಿ ಉಂಟಾಗಿದೆ. ಇತ್ತೀಚಿನ ವರ್ಷಗಳಲ್ಲಿ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಭಾರೀ ಪ್ರವಾಹಕ್ಕೆ ಇದೂ ಒಂದು ಮುಖ್ಯ ಕಾರಣ. ದೇಶಕ್ಕೆ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಹೊಳೆ, ತೊರೆಗಳಿಗೆ ಇದ್ದ ಅಡ್ಡಿಗಳನ್ನು ತೆರೆದು ನೀರು ಹರಿಯುವ ದಾರಿ ಸುಗಮಗೊಳಿಸುವ ಪರಿಪಾಠ ಇತ್ತು. ಈಗ ಆ ಪದ್ಧತಿ ಇಲ್ಲ.

ಪಶ್ಚಿಮಘಟ್ಟ ಪ್ರದೇಶದಲ್ಲಿ ಜೆಸಿಬಿ ಯಂತ್ರಗಳು ಮಾಡುತ್ತಿರುವ ಹಾನಿ ಅಷ್ಟಿಷ್ಟಲ್ಲ. ಒಂದು ಬುಟ್ಟಿ ಮಣ್ಣು ತೆಗೆಯಬೇಕಾದ ಕಡೆ ಜೆಸಿಬಿ ಯಂತ್ರ ಒಂದು ಲಾರಿಯಷ್ಟು ಮಣ್ಣು ತೆಗೆದು ಹಾಕುತ್ತದೆ. ಸೂಕ್ಷ್ಮ ಪ್ರದೇಶಗಳಲ್ಲಿ ಈ ಯಂತ್ರವನ್ನು ಹೇಗೆ ಬಳಸಬೇಕು ಎಂಬ ಪಾಠ ಹೇಳಿಕೊಡುವವರೂ ಇಲ್ಲ. ನಿಯಮಗಳ ಪ್ರಕಾರ, ಘಟ್ಟ ಪ್ರದೇಶಗಳಲ್ಲಿ ರಸ್ತೆ ಬದಿ 45 ಡಿಗ್ರಿ ಕೋನದಲ್ಲಿ ಗುಡ್ಡ ಕತ್ತರಿಸಬೇಕು. ಹೀಗೆ ಕತ್ತರಿಸಿ ಆದ ನಂತರ ಹುಲ್ಲಿನ ಬೀಜ ಹಾಕಿ ಹುಲ್ಲು ಬೆಳೆಯುವ ವ್ಯವಸ್ಥೆ ಮಾಡಿ ಸುಸ್ಥಿರಗೊಳಿಸಬೇಕು ಎಂಬ ನಿಯಮ ಇದೆ. ಆದರೆ, ಅದನ್ನು ಉಲ್ಲಂಘಿಸುವವರೇ ಹೆಚ್ಚು.

ಮಲೆನಾಡು ಭಾಗದಲ್ಲಿ 'ಅಕ್ರಮ- ಸಕ್ರಮ' ಒಂದು ರಾಜಕೀಯ ಕಾರ್ಯಸೂಚಿ ಮತ್ತು ಚುನಾವಣೆಗಳಲ್ಲಿ ಮತ ಪಡೆಯುವ ದಾಳವಾಗಿದೆ. ಬಡ ರೈತರು ಒಂದೆರಡು ಎಕರೆ ಅತಿಕ್ರಮಣ ಮಾಡಿದ್ದರೆ, ಅದನ್ನು ಅವರಿಗೆ ಸಕ್ರಮ ಮಾಡಿಕೊಡುವುದು ನ್ಯಾಯೋಚಿತ. ಆದರೆ, ಅಕ್ರಮ- ಸಕ್ರಮ ರಿಯಲ್ ಎಸ್ಟೇಟ್ ಆಗಿ ಪರಿವರ್ತನೆಗೊಂಡಿದೆ. ಈ ರೀತಿ ಭೂಮಿ ಪಡೆದವರಲ್ಲಿ ಹಲವರು ಕೆಲವು ವರ್ಷಗಳ ಕಾಲ ಶುಂಠಿ ಬೆಳೆದು ಬಳಿಕ ಭೂಮಿಯನ್ನು ಅಕ್ರಮವಾಗಿ ವಿವಿಧ ಉದ್ದೇಶಗಳಿಗೆ ಮಾರಾಟ ಮಾಡುತ್ತಿರುವ ದೂರುಗಳೂ ಇವೆ. ಇದರಿಂದ ಮಲೆನಾಡಿನ ಚಹರೆಯೇ ಕ್ಷಿಪ್ರವಾಗಿ ಬದಲಾಗುತ್ತಿದೆ. ಅರಣ್ಯ ಇರುವುದೇ ಅತಿಕ್ರಮಣಕ್ಕಾಗಿ ಎಂಬ ಭಾವನೆ ದಟ್ಟವಾಗಿ ಬೆಳೆದಿದೆ ಎಂಬ ಆರೋಪಗಳೂ ಇವೆ.

ಈ ಪ್ರದೇಶವನ್ನು ಬಹುವಾಗಿ ಕಾಡುತ್ತಿರುವ ವನ್ಯಜೀವಿ-ಮಾನವ ಸಂಘರ್ಷವನ್ನು ಹೊಸ ದೃಷ್ಟಿಕೋನದಿಂದ ನೋಡಬೇಕು. ಅರಣ್ಯ ಪ್ರದೇಶವೂ ಕಡಿಮೆ ಆಗುತ್ತಿರುವುದರಿಂದ ಸಂಘರ್ಷ ತಪ್ಪಿಸುವುದು ಸುಲಭವೂ ಅಲ್ಲ. ಆದರೆ, ವನ್ಯಜೀವಿಗಳಿಂದ ಬೆಳೆ ನಷ್ಟ ಹೊಂದಿದ ರೈತರು ಮತ್ತು ಬುಡಕಟ್ಟು ಜನರಿಗೆ ಸೂಕ್ತ ಪರಿಹಾರ ನೀಡುವ ಮೂಲಕ ಅವರ ವಿಶ್ವಾಸಗಳಿಸುವ ಪ್ರಯತ್ನ ನಡೆಸಿದರೆ, ವನ್ಯಜೀವಿಗಳ ಉಳಿವಿಗೆ ಸಹಾಯಕವಾಗುತ್ತದೆ.

ಗೋಮಾಳ, ಸಾಮಾನ್ಯ ಭೂ ನಿರ್ವಹಣೆ ಮತ್ತು ಅತಿಕ್ರಮಣ ನಡೆಯದಂತೆ ನೋಡಿಕೊಳ್ಳುವ ಜವಾಬ್ದಾರಿ ಜಿಲ್ಲಾಧಿಕಾರಿಗಳಿಗೆ ಸೇರಿದ್ದು. ಆದರೆ ಅವರು, ಇತರ ಕಾರ್ಯಗಳ ಬಾಹುಳ್ಯದಿಂದಾಗಿ ಅತ್ತ ಗಮನಹರಿಸುವುದೇ ಕಡಿಮೆ. ಇದಕ್ಕಾಗಿ ಅರಣ್ಯ, ಕಂದಾಯ ಮತ್ತು ಇತರ ಇಲಾಖೆಗಳ ಪ್ರತ್ಯೇಕ ನಿರ್ವಹಣಾ ಕೇಂದ್ರಗಳನ್ನು ರಚಿಸಿ, ಅವುಗಳ ಮೂಲಕವೇ ನಿರ್ವಹಣೆ ಮಾಡುವಂತಾಗಬೇಕು. ಇವುಗಳ ಕಾರ್ಯವನ್ನು ಕಾಲ- ಕಾಲಕ್ಕೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲೇ ಪರಾಮರ್ಶೆ ನಡೆಸಬೇಕು. ಅದರಲ್ಲೂ ವಿಶೇಷವಾಗಿ ಪಶ್ಚಿಮಘಟ್ಟದ ಪ್ರತಿ ಆರು ತಿಂಗಳ ಭೂಬಳಕೆಯ ಬಗ್ಗೆ ವರದಿ ಒಪ್ಪಿಸಬೇಕು. ಇವೆಲ್ಲ ಕ್ರಮಗಳಿಂದಾಗಿ ಈಗಿರುವ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿ ಮಾಡಿದರೆ ಪಶ್ಚಿಮ ಘಟ್ಟ ಉಳಿಸಲು ಸಾಧ್ಯ.

'ಜನರಿಗೆ ಸಂಕಷ್ಟ'

ಅತೀ ಹೆಚ್ಚು ಅರಣ್ಯ ಪ್ರದೇಶವನ್ನು ಹೊಂದಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಪಶ್ಚಿಮಘಟ್ಟದಲ್ಲಿರುವ ಜನರು ಸಹಜವಾದ ಕೃಷಿ ಚಟುವಟಿಕೆಯನ್ನು ರೂಢಿಸಿಕೊಂಡಿರುವವರು. ಜೀವ ವೈವಿಧ್ಯ ಕಾಯ್ದೆ, ಅರಣ್ಯ ಸಂರಕ್ಷಣೆ ಕಾಯ್ದೆಗಳಂತಹ ಕಾನೂನುಗಳ ಮೂಲಕ ಪಶ್ಚಿಮ ಘಟ್ಟದ ಸಂರಕ್ಷಣೆಗೆ ಈಗಾಗಲೇ ಆದ್ಯತೆ ನೀಡಲಾಗಿದೆ. ಪಶ್ಚಿಮ ಘಟ್ಟವನ್ನು ಪರಿಸರ ಸೂಕ್ಷ್ಮ ವಲಯ ಎಂದು ಘೋಷಿಸುವುದರಿಂದ, ಆ ಪ್ರದೇಶದಲ್ಲಿನ ಬಹುತೇಕ ಅಭಿವೃದ್ಧಿ ಚಟುವಟಿಕೆಗಳಿಗೆ ತಡೆ ಬೀಳುತ್ತದೆ. ಇದರಿಂದ ಅಲ್ಲಿನ ಜನರ ಅಸ್ತಿತ್ವಕ್ಕೆ ಧಕ್ಕೆಯಾಗುತ್ತದೆ. ಅಂತಿಮವಾಗಿ ಜನರು ಸಂಕಷ್ಟಕ್ಕೆ ತುತ್ತಾಗುತ್ತಾರೆ.

ಚಿದಾನಂದ ಕಟಗಿ

'ವಿರೋಧಿಗಳಿಗೆ ಸಂರಕ್ಷಣೆಯ ಮಹತ್ವ ತಿಳಿದಿಲ್ಲ'

ಜಗತ್ತಿನ ಅಪರೂಪದ ಜೀವ-ವೈವಿಧ್ಯಗಳನ್ನು ಹೊಂದಿರುವ ತಾಣಗಳಲ್ಲಿ ಪಶ್ಚಿಮಘಟ್ಟವು ಪ್ರಮುಖವಾದುದು. ಅದರ ಸಂರಕ್ಷಣೆಗೆ ಕೇಂದ್ರ ಸರ್ಕಾರವು ಹೊರಡಿಸಿರುವ ಕರಡು ಅಧಿಸೂಚನೆಯಲ್ಲಿ ಏನಿದೆ ಎಂಬುದನ್ನೂ ತಿಳಿದುಕೊಳ್ಳದೆಯೇ, ಹಲವರು ಆ ಅಧಿಸೂಚನೆಯನ್ನು ವಿರೋಧಿಸುತ್ತಿದ್ದಾರೆ. ಅಂತಹವರಿಗೆ ಪಶ್ಚಿಮ ಘಟ್ಟ ಸಂರಕ್ಷಣೆಯ ಮಹತ್ವ ತಿಳಿದಿಲ್ಲ. ವಿರೋಧಿಗಳಲ್ಲಿ, ಯಾವುದೋ ಲಾಬಿಗಳ ಸಮೂಹಸನ್ನಿಗೆ ಒಳಗಾಗಿ ಅಭಿವೃದ್ಧಿಯ ಕನಸುಕಂಡವರೇ ಹೆಚ್ಚು. ಸರ್ಕಾರವು ಸಹ ಲಾಬಿಗಳ ಸುಳಿಯಲ್ಲಿ ಸಿಲುಕಿರುವುದು ದುರಂತ. ಪರಿಸರ ಸಂರಕ್ಷಣೆ ಎಂಬುದು ಅಭಿವೃದ್ಧಿಯ ವಿರೋಧಿಯಲ್ಲ. ಸುಸ್ಥಿರ ಅಭಿವೃದ್ಧಿಯು ಪರಿಸರ ಸಂರಕ್ಷಣೆಯನ್ನೂ ಒಳಗೊಂಡಿರುತ್ತದೆ. ವಿರೋಧಿಗಳು ಆ ದೃಷ್ಟಿಕೋನದಲ್ಲೂ ನೋಡಬೇಕಿದೆ.

ಮಹೇಶ. ಪಿ., ಪುಟ್ಟೇಗೌಡನಹುಂಡಿ, ಚಾಮರಾಜನಗರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 196

ಪಾರ್ವತಿಯ ಅವತಾರಕ್ಕೆ ಪ್ರಾರ್ಥನೆ

ಹಿಮವಂತ ಮತ್ತು ಮೇನಾದೇವಿ ಮದುವೆ ನಂತರ ವಿಷ್ಣು ಮೊದಲಾದ ದೇವತೆಗಳು, ಮಹಾತ್ಮರಾದ ಮುನಿಗಳು ಹಿಮವಂತನ ಮನೆಗೆ ಬರುತ್ತಾರೆ. ತನ್ನ ಮನೆಗೆ ಬಂದ ದೇವತೆಗಳನ್ನೂ ಮುನಿಗಳನ್ನೂ ನೋಡಿ ಹಿಮವಂತನು ತನ್ನ ಅದೃಷ್ಟವೆಂದು ಅವರೆಲ್ಲರನ್ನೂ ಸತ್ಕರಿಸುತ್ತಾನೆ. ನಂತರ 'ಮಹಾತ್ಮರಾದ ನೀವೆಲ್ಲಾ ಏಕಕಾಲದಲ್ಲಿ ನನ್ನ ಮನೆಗೆ ಬಂದುದರಿಂದ ನಾನು ಧನ್ಯನಾದೆ. ನನ್ನ ರಾಜ್ಯವು ಧನ್ಯವಾಯಿತು. ನನ್ನನ್ನು ಸೇವಕನೆಂದು ತಿಳಿದು ನನ್ನಿಂದ ನಿಮಗಾಗಬೇಕಾದ ಕಾರ್ಯವನ್ನು ಪ್ರೀತಿಯಿಂದ ಅಪ್ಪಣೆಮಾಡಿ' ಎಂದು ಪ್ರಾರ್ಥಿಸುತ್ತಾನೆ.

ಹಿಮವಂತನ ಮಾತನ್ನು ಕೇಳಿದ ತಮ್ಮ ಕಾರ್ಯವು ಸಿದ್ಧಿಸಿತೆಂದು ಸಂತೋಷದಿಂದ, 'ಎಲೈ ಹಿಮವಂತನೇ, ಹಿಂದೆ ಜಗನ್ಮಾತೆಯಾದ ದೇವಿಯು ದಕ್ಷನ ಪುತ್ರಿಯಾಗಿ (ಸತೀದೇವಿ) 'ಉಮಾ' ಎಂಬ ಹೆಸರಿನಿಂದ ಜನಿಸಿ ರುದ್ರನನ್ನು ಮದುವೆಯಾಗಿ ಬಹುಕಾಲ ವಿಹರಿಸಿದಳು. ಆಮೇಲೆ ತಂದೆಯಿಂದಲೇ ಅವಮಾನಿತಳಾಗಿ ತನ್ನ ಪ್ರತಿಜ್ಞೆಯಂತೆ ಶರೀರವನ್ನು ಬಿಟ್ಟು ತನ್ನ ಸ್ವಸ್ಥಾನವನ್ನು ಸೇರಿದಳು. ಈಗ ದೇವಿಯನ್ನು ತಪಸ್ಸು ಮಾಡಿ ನೀ ಕರೆತಂದರೆ ಎಲ್ಲರಿಗೂ ಕ್ಷೇಮವಾಗುವುದು' ಎಂದರು.

ದೇವತೆಗಳ ಮಾತನ್ನು ಕೇಳಿದ ಹಿಮವಂತ ಸಂತೋಷದಿಂದ ಹಾಗೆಯೇ ಆಗಲಿ ಎಂದೊಪ್ಪಿದ. ಬಳಿಕ ಆ ದೇವತೆಗಳು ಹಿಮವಂತನಿಗೆ ತಪಸ್ಸಿನ ವಿಧಿಯನ್ನು ಉಪದೇಶಿಸಿ, ತಾವೂ ಉಮಾದೇವಿಯನ್ನು ಮೊರೆಹೊಕ್ಕರು. ಶುದ್ಧವಾದ ಸ್ಥಳದಲ್ಲಿ ನಿಂತು ಆ ಜಗನ್ಮಾತೆಯನ್ನು ಅನೇಕ ಪ್ರಕಾರವಾಗಿ ಸ್ತುತಿಸಿದರು. 'ಜಗನ್ಮಾತೆಯಾದ ಓ ಉಮಾದೇವಿ, ನೀನು ಸದಾಶಿವನ ಪ್ರಿಯಭಾರ್ಯೆಯು. ಸದಾಶಿವನ ಲೋಕದಲ್ಲಿಯೇ ಸದಾ ಇರುವವಳು. ಜನರ ದುರ್ಗತಿಯನ್ನು ಹೋಗಲಾಡಿಸುವವಳು. ನೀನು ಲಕ್ಷ್ಮೀರೂಪಳು, ಶಕ್ತಿರೂಪಳು, ಶಾಂತಳು, ಪುಷ್ಟಿಯು, ಮಹಾಪವಿತ್ರಳು, ಮಹತ್ತತ್ವ, ಪ್ರಕೃತಿರೂಪಳು. ನೀನು ಸರ್ವಮಂಗಳೆಯು, ಆತ್ಮವಿದ್ಯೆ ಮತ್ತು ಅದರಂಗವಾದ ಸುವಿದ್ಯೆಯ ಸ್ವರೂಪಳು. ಸೂರ್ಯನಲ್ಲಿರುವ ಕಿರಣಪ್ರಕಾಶವು ನೀನು, ಎಲ್ಲ ಪ್ರಾಣಿಗಳಲ್ಲಿರುವ ನಿದ್ರೆ, ಹಸಿವು, ತೃಪ್ತಿ, ಆಸೆ, ಕಾಂತಿ, ಹೊಳಪು, ಸಂತೋಷಗಳೆಲ್ಲವೂ ನೀನು. ಪುಣ್ಯವಂತರಿಗೆ ಲಕ್ಷ್ಮೀರೂಪಳು. ಪಾಪಿಗಳಿಗೆ ಜ್ಯೇಷ್ಠಾಲಕ್ಷ್ಮೀರೂಪಳು. ಬ್ರಹ್ಮಾಂಡದಲ್ಲಿರುವ ಅಖಂಡಕೋಟಿ ಜೀವರನ್ನೂ ಪೋಷಿಸುವೆ.

'ನೀನು ವೇದಮಾತೆಯಾದ ಗಾಯತ್ರಿಯು, ಸಾವಿತ್ರಿಯು ಮತ್ತು ಸರಸ್ವತಿಯು. ಜಗತ್ತಿನಲ್ಲಿ ನಡೆಯುವ ವೃತ್ತಾಂತಗಳ ಸ್ವರೂಪವು ನೀನೆ. ವೇದರೂಪಳೂ, ಅದರಲ್ಲಿ ಬೋಧಿಸುವ ಧರ್ಮದ ಸ್ವರೂಪಳೂ ನೀನೆ ಆಗಿರುವೆ. ನೀನು ತತ್ವರೂಪಳು, ಪಂಚಭೂತಗಳ ಸಾರವು, ನೀತಿವಂತರ ನೀತಿಯು, ವ್ಯವಸಾಯರೂಪಳೂ, ಸಾಮವೇದದ ಗಾನವು, ಯಜುರ್ವೇದದ ಗ್ರಂಥಿಯು, ಋಗ್ವೇದದ ಹುತಿಯು, ಅಥರ್ವಣವೇದದ ಮಾತ್ರೆ – ಎಲ್ಲವೂ ನಿನ್ನ ಸ್ವರೂಪಗಳೇ ಆಗಿವೆ. ನೀನೆ ಎಲ್ಲರಿಗೂ ಗತಿಯು, ಮತಿಯು.

'ಓ ದೇವಿ, ನೀನು ಎಲ್ಲ ದೇವಗಣಗಳ ಶಕ್ತಿಯು. ರಜೋಗುಣರೂಪಳಾಗಿ ಸಂಸಾರರೂಪವನ್ನು ಹೊಂದುವೆ. ನೀನು ಸಂಸಾರವೆಂಬ ಭಯಂಕರವಾದ ಸಾಗರವನ್ನು ದಾಟಿಸುವ ಮಹಾನೌಕೆಯು. ಅಷ್ಟಾಂಗಗಳುಳ್ಳ ಯೋಗವನ್ನು ಸದಾ ರಕ್ಷಿಸುವ ಯೋಗಿನಿಯು. ಸದಾ ವಿಂಧ್ಯಗಿರಿಯಲ್ಲಿ ಪ್ರೀತಿಯಿಂದ ವಾಸಿಸುವ ವಿಂಧ್ಯವಾಸಿನಿಯು, ಎಲ್ಲ ಪ್ರಾಣಿಗಳ ಮೂಗು, ಕಣ್ಣು, ಭುಜ, ಎದೆ, ಮನಸ್ಸು ಮುಂತಾದ ಅಂಗಗಳಿಗೆ ಆಯಾಸವನ್ನು ಪರಿಹರಿಸಿ ಸುಖವನ್ನುಂಟುಮಾಡುವ ನಿದ್ರೆಯ ಸ್ವರೂಪವೂ ನೀನೆ. ಓ ದೇವಿ, ಜಗತ್ತನ್ನು ರಕ್ಷಿಸಲು ಈಗ ಪ್ರಸನ್ನಳಾಗು' ಎಂದು ಸ್ತುತಿಸಿದರು ಎಂಬಲ್ಲಿಗೆ ಶ್ರೀಶಿವಮಹಾಪುರಾಣದಲ್ಲಿ ಎರಡನೆಯದಾದ ರುದ್ರಸಂಹಿತೆಯ ಪಾರ್ವತೀಖಂಡದಲ್ಲಿ ಮೂರನೆಯ ಅಧ್ಯಾಯ ಮುಗಿಯುತ್ತದೆ. ●

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಭಾಷಣದ ವಿಡಿಯೊ ತುಣುಕೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. 'ದೇಶದ ಸಾಂವಿಧಾನಿಕ ಸಂಸ್ಥೆಗಳ ವಿರುದ್ಧ ಕಾಂಗ್ರೆಸ್ ಹೋರಾಡುತ್ತಿದೆ' ಎಂದು ರಾಹುಲ್ ಹೇಳಿದ್ದಾರೆ. ನಾಲ್ಕು ಸೆಕೆಂಡ್‌ಗಳ ಈ ವಿಡಿಯೊ ತುಣುಕನ್ನು ಮೊದಲಿಗೆ ಬಿಜೆಪಿ ಐಟಿ ಘಟಕದ ಮುಖ್ಯಸ್ಥ ಅಮಿತ್ ಮಾಳವೀಯ ಅವರು ತಮ್ಮ ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡಿದ್ದರು. 'ರಾಹುಲ್ ಅವರ ಹೇಳಿಕೆಗಳು ಕೇವಲ ಬಾಲಿಶತನದಿಂದ ಕೂಡಿರುವುದಿಲ್ಲ. ಬದಲಾಗಿ ಅಪಾಯಕಾರಿಯೂ ಆಗಿರುತ್ತವೆ' ಎಂದು ಅವರು ವಿಡಿಯೊ ಜೊತೆ ವಿವರಣೆ ನೀಡಿದ್ದರು.



ವೈರಲ್ ಆಗಿರುವುದು ತಿರುಚಲಾಗಿರುವ ವಿಡಿಯೊ ಎಂದು 'ದಿ ಲಾಜಿಕಲ್ ಇಂಡಿಯನ್' ವೇದಿಕೆ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಮೂಲ ವಿಡಿಯೊವನ್ನು 'ಇಂಡಿಯಾ ಟುಡೆ' ಆಗಸ್ಟ್ 5ರಂದು ಪ್ರಕಟಿಸಿದೆ. ಬಿಜೆಪಿ ಮತ್ತು ಆರ್‌ಎಸ್‌ಎಸ್ ದೇಶದ ಆರ್ಥಿಕ, ಸಾಂಸ್ಥಿಕ ಮತ್ತು ಸಾಂವಿಧಾನಿಕ ಸಂಸ್ಥೆಗಳನ್ನು ಸ್ವಾಧೀನಪಡಿಸಿಕೊಂಡಿವೆ. ದೇಶದ ಎಲ್ಲಾ ಸಂಸ್ಥೆಗಳೂ ಬಿಜೆಪಿ, ಆರ್‌ಎಸ್‌ಎಸ್ ಅಣತಿಯಂತೆ ಕೆಲಸ ಮಾಡುತ್ತಿವೆ. ಆದರೆ ಯುಪಿಎ ಕಾಲದಲ್ಲಿ ಆ ಎಲ್ಲಾ ಸಂಸ್ಥೆಗಳನ್ನು ಕಾಂಗ್ರೆಸ್ ಬಳಸಿಕೊಂಡಿತ್ತು ಎಂದು ಆರೋಪಿಸಲಾಗುತ್ತಿದೆ ಎಂದು ರಾಹುಲ್ ತಮ್ಮ ಸುದೀರ್ಘ ಭಾಷಣದಲ್ಲಿ ಹೇಳಿದ್ದಾರೆ. ಮಾಳವೀಯ ಅವರು ರಾಜಕೀಯ ಕಾರಣಕ್ಕಾಗಿ ಈ ವಿಡಿಯೊವನ್ನು ತಿರುಚಿ ತಪ್ಪು ಅರ್ಥ ಬರುವಂತೆ ಬಿಂಬಿಸಿದ್ದಾರೆ ಎಂದು ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಲಾಗಿದೆ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ



ತತ್ವದ ಬದುಕು

ಸುತ್ತಿ ಸುತ್ತುವ ಖಗವ ಗೂಡ ನೆನಪೆಳೆಯುವುದು |
ಗೊತ್ತುನೂಲ್ ಪಿಡಿದಿಹುದು ದನವ ಬಯಲಿನಲಿ ||
ತತ್ತ್ವವೊಂದರ ಹಿಡಿತಕೊಗ್ಗದ ಬಾಳೇನು? |
ಕಿತ್ತ ಗಾಳಿಯ ಪಟವೊ – ಮಂಕುತಿಮ್ಮ || 691 ||

ಪದ-ಅರ್ಥ: ಖಗ = ಪಕ್ಷಿ, ನೆನಪೆಳೆಯುವುದು = ನೆನಪು + ಎಳೆಯುವುದು, ಗೊತ್ತುನೂಲ್ = ದನವನ್ನು ಕಟ್ಟಿಹಾಕಲು ನೆಲದಲ್ಲಿ ಹಾಕಿದ ಗೂಟದ ಹಗ್ಗ, ಪಿಡಿದಿಹುದು = ಹಿಡಿದಿಹುದು, ಹಿಡಿತಕೊಗ್ಗದ = - ಹಿಡಿತಕೆ + ಒಗ್ಗದ(ಸಿಕ್ಕದ)

ವಾಚ್ಯಾರ್ಥ: ಪಕ್ಷಿ ಆಕಾಶದಲ್ಲಿ ಎಷ್ಟೇ ದೂರ ಹಾರಿದರೂ ಗೂಡಿನ ನೆನಪು ಅದನ್ನು ಎಳೆಯುತ್ತದೆ. ಬಯಲಿನಲ್ಲಿದ್ದ ದನವನ್ನು ಹಿಡಿದದ್ದು ಗೂಟಕ್ಕೆ ಕಟ್ಟಿದ ಹಗ್ಗ. ಅಂತೆಯೇ ಯಾವುದೊ ಒಂದು ತತ್ವಕ್ಕೆ ತನ್ನನ್ನು ಒಡ್ಡಿಕೊಳ್ಳದ ಬಾಳು ಎಂತಹದು? ಅದೊಂದು ಕಿತ್ತುಹೋದ ಗಾಳಿಯ ಪಟ.

ವಿವರಣೆ: ನಾವು ಸ್ಟೇಶನ್ನಿಗೋ, ಬಸ್‌ಸ್ಟಾಂಡಿಗೋ ನಮ್ಮ ಸರಂಜಾಮುಗಳನ್ನು ತೆಗೆದುಕೊಂಡು ಹೋದಾಗ, ಎಲ್ಲಿಗೆ ಹೋಗಬೇಕೆನ್ನುವ ಸ್ಪಷ್ಟ ಕಲ್ಪನೆ ಇರಬೇಕು. ಎಲ್ಲಿಗೆ ಹೋಗಬೇಕೆಂಬುದು ಗೊತ್ತಿಲ್ಲದಿದ್ದರೆ ಎಲ್ಲಿಯೋ ಹೋಗಿ ಬಿಡುತ್ತೇವೆ. ಈ ವಿಷಯ ಕೇವಲ ಪ್ರವಾಸಕ್ಕೆ ಸಂಬಂಧಿಸಿದ್ದಲ್ಲ, ಬದುಕಿಗೆ ಸಂಬಂಧಿಸಿದ್ದು. ನಮ್ಮ ಬದುಕಿಗೊಂದು ಗುರಿ ಇಲ್ಲದಿದ್ದರೆ, ಅದಕ್ಕೊಂದು ತತ್ವದ ತಳಹದಿಯಿರದಿದ್ದರೆ, ಬದುಕು ದಾರ ಕಿತ್ತಿದ ಗಾಳಿಪಟದಂತೆ ಎತ್ತೆತ್ತಲೋ ಹೋಗಿ ಬೀಳುತ್ತದೆ.

ಲೇಸಿ ಹಾಲ್ ಎಂಬ ಖ್ಯಾತ ಮನಶಾಸ್ತ್ರಜ್ಞ ಹೇಳುತ್ತಾನೆ, 'ಪ್ರತಿಯೊಂದು ಜೀವ ಯಶಸ್ಸಿಗಾಗಿಯೇ ಹುಟ್ಟಿದೆ. ಅದು ಯಶಸ್ಸನ್ನು ಕಾಣದೆ ಹೋದರೆ ಅದೊಂದು ದುರ್ದೈವ'. ಅದನ್ನೇ ಸ್ವಾಮಿ ವಿವೇಕಾನಂದರು, 'Every soul is potentially divine' ಎಂದರು.

ಲೇಸಿ ಹಾಲ್ ಮುಂದುವರೆದು ಹೇಳುತ್ತಾನೆ, "ಹಾಗಾದರೆ, ಯಾಕೆ ಪ್ರತಿಯೊಂದು ಜೀವ ಶ್ರೇಷ್ಠತೆಯನ್ನು ಪಡೆಯುವುದಿಲ್ಲ? ಯಾರು ಯಾರು ತಮ್ಮ ಬದುಕಿಗೊಂದು ಗುರಿಯನ್ನು, ಆದರ್ಶವನ್ನು ಇಟ್ಟುಕೊಂಡು ನಡೆದರೋ ಅವರೆಲ್ಲ ಯಶಸ್ಸು ಪಡೆದರು. ಬದುಕಿನಲ್ಲಿ ಯಾವುದನ್ನೂ ಗಟ್ಟಿಯಾಗಿ ನಂಬದೆ ಹೇಗೆ ಬಂತೋ ಹಾಗೆ ನಡೆದವರು ನಾವಿಕನಿಲ್ಲದ ನಾವೆಯಲ್ಲಿ ಪ್ರಯಾಣಿಸುವವರಂತೆ ದಿಕ್ಕು ತಪ್ಪಿ ಮರೆಯಾದರು". ಇಂಥ ಅನೇಕ ಜನರನ್ನು ನಾವು ಕಂಡಿಲ್ಲವೆ?

ಅಸಾಧ್ಯ ಭರವಸೆಯನ್ನು ಹುಟ್ಟು ಹಾಕಿದ ತರುಣ-ತರುಣಿಯರು ಯಾವುದೋ ಧ್ಯೇಯವನ್ನು ನಂಬದೆ ಗುರಿಯಿಂದ ವಿಚಲಿತರಾಗಿ ಹೋಗಿದ್ದಾರೆ. ಅವನೊಬ್ಬ ಒಳ್ಳೆಯ ಕ್ರಿಕೆಟ್ ಆಟಗಾರ. ಬಹುದೊಡ್ಡ ಭವಿಷ್ಯವನ್ನು ಹೊಂದಿದವನು. ಕೊಂಚ ಯಶ ಬಂದೊಡನೆ ತಲೆ ತಿರುಗಿತು, ನೆಲಕಾಣದಾಯಿತು. ಚಟಗಳು ಬೆನ್ನತ್ತಿ ಬಂದವು. ಗುರಿ ಕರಗಿ ಮರೆಯಾಯಿತು. ಬದುಕು ಸೊರಗಿ ಹೋಯಿತು. ಆದರೆ ಆದರ್ಶದ ಬೆನ್ನು ಹತ್ತಿದ ಗಾಂಧೀ, ಅಂಬೇಡ್ಕರ್, ವಿವೇಕಾನಂದ, ಸುಭಾಸ್ ಚಂದ್ರ ಬೋಸ್‌ರು ಬದುಕಿನ ಬೆಂಕಿಯಲ್ಲಿ ಹಾದು ಬಂದರೂ ಶಾಶ್ವತರಾದರು. ಅದಕ್ಕೆ ಕಾರಣ ಅವರ ಬದುಕನ್ನು ನಿರ್ದೇಶಿಸಿದ ತತ್ವ, ಗುರಿ. ಕಗ್ಗ ಅದನ್ನು ಸ್ಪಷ್ಟಪಡಿಸುತ್ತದೆ.

ಆಕಾಶದಲ್ಲಿ ದೂರ ದೂರ ಹಾರುವ ಪಕ್ಷಿಯನ್ನು ಗೂಡಿನ ನೆನಪು ಎಳೆದು ತರುತ್ತದೆ. ನೆಲದಲ್ಲಿ ಹಾಕಿದ ಗೂಟಕ್ಕೆ ಕಟ್ಟಿದ ಹಗ್ಗ ದನವನ್ನು ಸಿಕ್ಕಲ್ಲಿ ಹೋಗಲು ಬಿಡುವುದಿಲ್ಲ. ಅಂತೆಯೇ ತತ್ವವನ್ನು, ಗುರಿಯನ್ನು ನಂಬಿಕೊಳ್ಳದ ಬಾಳು ದಾರ ಕಿತ್ತ ಗಾಳಿಯ ಪಟವಿದ್ದಂತೆ. ❖

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಆಗಸ್ಟ್ 11, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯಣ– ವರ್ಷ ಋತು ತಿಥಿ: (ಶ್ರಾವಣ ಶುಕ್ಲ) ಚತುರ್ದಶಿ ಗಂ. 10-39 ನಕ್ಷತ್ರ: ಉತ್ತರಾಷಾಢ ಗಂ. 06-53 ನಂತರ ಶ್ರವಣ ಗಂ. 28-08 ಯೋಗ: ಆಯುಷ್ಮಾನ್ ಗಂ. 15-32, ಕರಣ: ವಣಿಜ ಗಂ. 10-39 ಕರ್ಕಾಟಕ ಮಾಸದ 25 ನೇ ದಿನ. ರಾಹುಕಾಲ : ಮಧ್ಯಾಹ್ನ 01:30 – 03:00, ಸೂರ್ಯೋದಯ : 06-21 ಸೂರ್ಯಾಸ್ತ : 06-50 ಮುಸ್ಲಿಂ ದಿನಾಂಕ : 12 ಮೊಹರಮ್
ದಿನ ವಿಶೇಷ : ಝುಲಾಯನ ಯಾತ್ರಸಂಪನ್ನ, ರಕ್ಷಾ ಬಂಧನ, ನರೋಲೀ ಪೂರ್ಣಿಮಾ, ಅವನೀ ಅವಿಟ್ಟಮ್, ಶ್ರಾವಣ ಪೂರ್ಣಿಮಾ , ಅದೃಷ್ಟ ಸಂಖ್ಯೆ: 2, 5

ಮೇಷ: ರಾಜಕೀಯ ರಂಗದಲ್ಲಿ ಬಹಳ ದಿನಗಳ ನಂತರ ಯಶಸ್ಸು ದೊರೆಯಲಿದೆ. ಪ್ರಯತ್ನಪಟ್ಟ ಕೆಲಸಗಳು ದಿನದ ಅಂತ್ಯಕ್ಕೆ ಶುಭಫಲ ನೀಡುವುದು. ಮನೆಮದ್ದುಗಳಿಂದ ಮನೆಯವರ ಆರೋಗ್ಯ ಸುಧಾರಣೆಯಾಗುತ್ತದೆ.

ವೃಷಭ: ಕೌಟುಂಬಿಕ ಸುಖದೊಂದಿಗೆ ಸರ್ವತೋಮುಖ ಅಭಿವೃದ್ಧಿ ಪಡೆಯುವಿರಿ. ವ್ಯವಹಾರಿಕ ಲಾಭ ತರುವ ಅವಕಾಶ ನೀಡುವ ವ್ಯಕ್ತಿಗಳ ಸ್ನೇಹ ಸಂಪಾದಿಸುವಿರಿ. ಶುಭ ಕಾರ್ಯಗಳಿಗಾಗಿ ಖರ್ಚಿನ ಸಂಭವವಿರುವುದು.

ಮಿಥುನ: ಮಾರ್ಗದರ್ಶಕರ ಸಲಹೆ ಸೂಚನೆ ಪಡೆದು ಆರಂಭಿಸಿದ ಯೋಜನಾಬದ್ಧ ಕೆಲಸಗಳಲ್ಲಿ ಹೆಚ್ಚಿನ ಅನುಕೂಲ ಉಂಟಾಗಲಿದೆ. ಲೇವಾದೇವಿ ವ್ಯವಹಾರ ಲಾಭ ತರಲಿದೆ.

ಕರ್ಕಾಟಕ: ಸೇವಕ ವರ್ಗದವರಿಗೆ ನಿಮ್ಮಿಂದ ನೋವಾಗಬಹುದು ಹಾಗೂ ಹೊಸದಾಗಿ ಪ್ರಾರಂಭಿಸಿದ ನಿಯಮಗಳು ತಿರುಗಿ ನಿಮಗೆ ಮುಳ್ಳಾಗುವ ರೀತಿಯಲ್ಲಿ ಇರಲಿದೆ. ಆದ್ದರಿಂದ ಸೂಕ್ಷ್ಮತೆಯಿಂದ ವ್ಯವಹರಿಸಿ.

ಸಿಂಹ: ವೃತ್ತಿಯಲ್ಲಿ ಪರಿಸ್ಥಿತಿಯನ್ನು ಹತೋಟಿಗೆ ತರಲು ಪ್ರಯತ್ನ ಮಾಡಿ. ನಿಮಗೆ ಅಧಿಕಾರದ ಇತಿ ಮಿತಿ ತಿಳಿದಿದೆ. ಆದ್ದರಿಂದ ಆಡಳಿತಾತ್ಮಕವಾಗಿ ನಿಮಗೆ ತೊಂದರೆಗಳು ಸಂಭವಿಸುವುದಿಲ್ಲ

ಕನ್ಯಾ: ಮೊಬೈಲ್ ಫೋನ್‌ಗಳಂತಹ ಎಲೆಕ್ಟ್ರಾನಿಕ್ ವಸ್ತುಗಳ ಮಾರಾಟಗಾರರಿಗೆ ಅಥವಾ ರಿಪೇರಿ ಮಾಡುವವರಿಗೆ ಹೆಚ್ಚಿನ ಆದಾಯ ಸಂದಾಯವಾಗುವುದು. ಸಾರ್ವಜನಿಕರಲ್ಲಿ ಬೆರೆಯುವ ಅನಿವಾರ್ಯತೆ ಬರುವುದು.

ತುಲಾ: ಮಕ್ಕಳ ಓದಿಗೆ ಅಡ್ಡಿಯಾಗಿರುವ ಕಣ್ಣಿನ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಿರಿ. ಇಂದಿನ ಕೆಲಸದಲ್ಲಿ ಹಲವು ಬಾರಿ ಪ್ರಯತ್ನ ಪಡಬೇಕಾದೀತು ನಂತರದಲ್ಲಿ ವೃತ್ತಿ ಜೀವನದಲ್ಲಿ ಏಳಿಗೆಯ ಸಾಧ್ಯತೆ ಕಾಣುವುದು.

ವೃಶ್ಚಿಕ: ತುಂಬಾ ಹಿತವಾದ ವ್ಯಕ್ತಿಗಳಿಂದಲೇ ಮೋಸದ ಕೆಲಸಗಳು ನಡೆಯಬಹುದು. ಮಕ್ಕಳ ಆಸೆ ಆಕಾಂಕ್ಷೆಯನ್ನು ತೀರಿಸಲು ಹೋಗಿ ನಿಮ್ಮ ಹಣ ಕಾಸಿನ ಪರಿಸ್ಥಿತಿಯು ನಿಮ್ಮ ನಿಯಂತ್ರಣವನ್ನು ತಪ್ಪಿಹೋಗುವಂತಾಗಬಹುದು.

ಧನು: ವಿದೇಶಿ ರಫ್ತು ವ್ಯಾಪಾರಗಳಲ್ಲಿ ಹೇರಳ ಲಾಭವು ಮತ್ತು ಸಣ್ಣ-ಪುಟ್ಟ ತಲೆಬಿಸಿಯ ವಾತಾವರಣಗಳೆರಡೂ ಇರುವುದು. ಕಾರ್ಯಕ್ಷೇತ್ರದಲ್ಲಿ ಶಾಂತಚಿತ್ತದಿಂದ ಹಿಂದಿನ ದಿನಗಳ ಲೆಕ್ಕಪತ್ರಗಳ ಪರಿಶೀಲನೆ ಅತ್ಯಗತ್ಯ.

ಮಕರ: ವಿದ್ಯಾಭ್ಯಾಸದಲ್ಲಿ ಉನ್ನತ ಸ್ಥಾನವನ್ನು ಪಡೆಯುವಿರಿ. ನಿಮಗೆ ಸ್ವಂತ ಪ್ರತಿಭೆ ಇದ್ದರೂ ಇನ್ನೊಬ್ಬರ ಕೈಕೆಳಗೆ ಕೆಲಸ ನಿರ್ವಹಿಸುವ ಪರಿಸ್ಥಿತಿ ಎದುರಾಗುತ್ತದೆ. ನಿಮ್ಮ ಶ್ರಮದ ಪ್ರತಿಫಲವು ಇನ್ನೊಬ್ಬರ ಪಾಲಾಗುವುದು.


ಕುಂಭ: ಹೊಸ ವ್ಯವಹಾರದ ಪರಿಸ್ಥಿತಿಯನ್ನು ಅವಲೋಕಿಸಿದ ತಂದೆತಾಯಿ ಶುಭ ಆಶೀರ್ವಾದದೊಂದಿಗೆ ಆರ್ಥಿಕ ಸಹಾಯ ಸಹಕಾರ ಮಾಡುವರು. ಆಸಕ್ತಿಕರ ವಿಚಾರದಲ್ಲಿ ಮುಂದುವರೆಯಲು ಕೆಲವು ಆತಂಕ ಎದುರಾಗುತ್ತದೆ.

ಮೀನ: ನಿಮ್ಮ ವಾಸಸ್ಥಾನ ಅಥವಾ ಉದ್ಯೋಗ ಬದಲಾಗುವ ಸಂಭವವಿದೆ. ಈ ದಿನ ಸಮಯ ಪಾಲನೆಯ ಬಗ್ಗೆ ಅತಿಯಾದ ಗಮನವಿರಲಿ. ಶಿವ ನಾಮ ಸ್ಮರಣೆಯಿಂದಾಗಿ ಮಾನಸಿಕ ಭಯ ನಿವಾರಣೆಯಾಗುವುದು.

ಪದಬಂಧ 5046
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ನಾಲ್ಕು ವೇದಗಳಲ್ಲಿ ಮೊದಲನೆಯದು (3)
4. ಭವದಲ್ಲಿ ಕೊನೆಗೊಂಡಿರುವ ಹುಟ್ಟು (3)
6. ದಾರಿಯಲ್ಲಿ ವಹಿಸಿಕೊಂಡಿರುವ ಹೊಣೆಗಾರಿಕೆ (5)
7. ಭವನದ ಮೇಲಿಂದ ಕಾಣುತ್ತಿರುವ ಆಕಾಶ (2)
9. ಮಾನವನಲ್ಲಿ ಹೊಸತು ಕಾಣುತಿದೆಯೇ? (2)
10. ಗುರುವಿಗೆ ತಕ್ಕವನು ಈ ವಿದ್ಯಾರ್ಥಿ! (2)
11. ಸುಪ್ರಭಾತದ ಹೊತ್ತಿನಲ್ಲಿ ಬಂದಿಳಿದ ಮಗ (2)
13. ಅಳಿಯನನ್ನು ಮನೆಯಲ್ಲಿಯೇ ಇರಿಸಿಕೊಳ್ಳುವುದು (5)
16. ತಲೆಬುರುಡೆಯ ಬುದ್ಧಿಶಕ್ತಿಗೆ ಆಧಾರವಾದ ಅವಯವ (3)
17. ಪುನಃ ಪುನಃ ಬಂದ ಸ್ಮರಣೆ! (3)

ಮೇಲಿಂದ ಕೆಳಕ್ಕೆ
1. ವರ್ಷದ ಎರಡೆರಡು ತಿಂಗಳುಗಳ ಅವಧಿ (4)
2. ರಾಕ್ಷಸ ಇಲ್ಲಿ ಕಾಣುತ್ತಿದ್ದಾನೆ (3)
3. ಸಾಬೂನು ಬಳಸಲು ಹೇಳಿದ ನೆಪ! (3)
4. ಈತ ತಿರುಗಾಡುವವನು (3)
5. ಅರವತ್ತು ವರ್ಷದ ಹುಟ್ಟಿದ ಹಬ್ಬ (4)
8. ಮುಂದೆ ಬರಲಿರುವ ಕಾಲ (3)
9. ಸ್ವಪ್ನವಿಲ್ಲಿ ನಿಜವಾಗಿದೆ (3)
10. ತಲೆ ಬರಹವಿದು (4)
12. ಕನ್ನಡಿಗ ಧರಿಸಿದ ಹೆಲ್ಮೆಟ್ (4)
13. ಮರುಳನ ಕೈಯ್ಯಲ್ಲಿರುವ ಉಸುಕು (3)
14. ಕಾಲಾವಧಿಯನ್ನು ಹೀಗೆನ್ನಿ (3)
15. ಮಾದರಿ ಇಲ್ಲಿ ಕಾಣುತ್ತಿದೆ (3)



5045ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ತಡಸಲು 5.ಮಧುಕರಿ 6.ಬಿಂಕ 7.ದಸ್ತಗಿರಿ 10.ಕಟುನುಡಿ 12.ಷಷ್ಠಿ 14.ಉದಾಸೀನ 15.ಕಟಿಸೂತ್ರ

ಮೇಲಿಂದ ಕೆಳಕ್ಕೆ: 1.ಗಮಕ 2.ಮಕರಂದ 3.ತರಾತುರಿ 4.ಲುಬ್ಧಕ 6.ಬಿಂದು 8.ಗಿಲೀಟು 9.ಸೃಷ್ಟಿ 10.ಕರಪತ್ರ 11.ಡಿಕ್ರಿದಾರ 12.ಷಡ್ಡಕ 13.ಘನತೆ

ಸುಡೊಕು 5432


6		4	9		7	3		8
				4				
	7	8	2			4		6
7					8		6	
	8		4			7	3	
		5		7				
4	9		3	8		6		1
	6						8	
8		7			4	2		3

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ

5431 ಸುಡೊಕು

9	1	7	3	5	8	6	2	4
8	4	6	9	2	7	5	1	3
2	5	3	4	1	6	9	7	8
5	3	8	1	6	2	7	4	9
4	2	9	7	3	5	1	8	6
6	7	1	8	4	9	2	3	5
3	8	5	6	7	1	4	9	2
7	9	2	5	8	4	3	6	1
1	6	4	2	9	3	8	5	7

ಷೇರುಪೇಟೆ ವಹಿವಾಟು 36



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,525
ಇಂದಿನ ಅಂತ್ಯ	17,535
▲	10
ದಿನದ ಗರಿಷ್ಠ	17,566

ವಿನಿಮಯ ದರ

$ ಡಾಲರ್	79.25
£ ಪೌಂಡ್	96.16
€ ಯುರೊ	81.29
¥ ಯೆನ್ (100ಕ್ಕೆ)	60

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹410
12 ಮೊಟ್ಟೆಗೆ ₹58
ಮೈಸೂರು
100 ಮೊಟ್ಟೆಗೆ ₹410

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1640 (1640)
ಸೋಯಾ (ರಿಫೈನ್ಡ್)	₹1270 (1280)
ಸೂರ್ಯಕಾಂತಿ (ರಿಫೈನ್ಡ್)	₹1600(1600)
ಪಾಮೋಲಿನ್	₹1245 (1255)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಕಿ.ಜಿ) ₹188-590
ದ್ವಿತಳಿ (ಕಿ.ಜಿ) ₹255-785

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1000-1300
ಮಧ್ಯಮ	₹800-1000
ಸಣ್ಣ	₹400-600

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ರಾಜ್ಯಗಳ ತೆರಿಗೆ ಪಾಲು: ಹಣಕಾಸು ಸಚಿವಾಲಯದಿಂದ ಎರಡು ಕಂತು ಬಿಡುಗಡೆ

ಉತ್ತರಕ್ಕೆ ಗರಿಷ್ಠ, ರಾಜ್ಯಕ್ಕೆ ₹4,254 ಕೋಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಹಣಕಾಸು ಸಚಿವಾಲಯವು ಕರ್ನಾಟಕ ಸೇರಿದಂತೆ ರಾಜ್ಯಗಳ ತೆರಿಗೆ ಪಾಲಿನ ಎರಡು ಕಂತುಗಳನ್ನು ಬುಧವಾರ ಬಿಡುಗಡೆ ಮಾಡಿದೆ.

ರಾಜ್ಯಗಳ ಮಾಸಿಕ ಕಂತಿನ ಮೊತ್ತ ₹58,332 ಕೋಟಿ. ಎರಡು ಕಂತುಗಳ ಮೊತ್ತ ₹1.16 ಲಕ್ಷ ಕೋಟಿ ಮೊತ್ತವನ್ನು ಒಂದೇ ಸಲ ಬಿಡುಗಡೆ ಮಾಡಲಾಗಿದೆ. ರಾಜ್ಯಗಳ ಕೈ ಬಲಪಡಿಸುವ ಕೇಂದ್ರ ಸರ್ಕಾರದ ಬದ್ಧತೆಗೆ ಇದು ಅನುಗುಣವಾಗಿದ್ದು, ರಾಜ್ಯಗಳು ತಮ್ಮ ಬಂಡವಾಳ ಮತ್ತು ಅಭಿವೃದ್ಧಿ ವೆಚ್ಚವನ್ನು ತ್ವರಿತಗೊಳಿಸಲು ಇದರಿಂದ ಸಹಕಾರಿಯಾಗಲಿದೆ ಎಂದು ಹಣಕಾಸು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಉತ್ತರ ಪ್ರದೇಶಕ್ಕೆ ಗರಿಷ್ಠ ₹20,928 ಕೋಟಿ ಬಿಡುಗಡೆ ಆಗಿದ್ದರೆ, ಬಿಹಾರಕ್ಕೆ ₹11,734 ಕೋಟಿ ಬಿಡುಗಡೆ ಆಗಿದೆ. ಕರ್ನಾಟಕಕ್ಕೆ ₹4,254 ಕೋಟಿ ಬಿಡುಗಡೆ ಮಾಡಲಾಗಿದೆ. 15ನೇ ಹಣಕಾಸು ಆಯೋಗವು ರಾಜ್ಯ ಜನಸಂಖ್ಯೆ ಹಾಗೂ ತಲಾ ಆದಾಯದ ಆಧಾರದಲ್ಲಿ ರಾಜ್ಯಗಳಿಗೆ ಪಾಲನ್ನು ನಿಗದಿ ಮಾಡಿದೆ. ಇದರಿಂದಾಗಿ, ಉತ್ತರದ ರಾಜ್ಯಗಳ ಪಾಲಿನ ಪ್ರಮಾಣ ಹೆಚ್ಚಾಗಿದೆ. ದಕ್ಷಿಣದ ರಾಜ್ಯಗಳ ಪಾಲಿನ ಪ್ರಮಾಣ ಗಣನೀಯವಾಗಿ ಕಡಿಮೆ ಆಗಿದೆ.

14ನೇ ಹಣಕಾಸು ಆಯೋಗವು ಕರ್ನಾಟಕಕ್ಕೆ ಪಾಲನ್ನು ಶೇ 4.71 ನೀಡಬೇಕು ಎಂದು ಶಿಫಾರಸು ಮಾಡಿತ್ತು. 15ನೇ ಹಣಕಾಸು ಆಯೋಗವು ಕರ್ನಾಟಕಕ್ಕೆ ಶೇ 3.67 ಪಾಲು ಕೊಡಬೇಕು ಎಂದು ಶಿಫಾರಸು ಮಾಡಿತ್ತು. ಇದರಿಂದಾಗಿ, ಕರ್ನಾಟಕದ ಪಾಲು ವಾರ್ಷಿಕ ಸರಾಸರಿ ₹36 ಸಾವಿರ ಕೋಟಿಯಿಂದ ₹29 ಸಾವಿರ ಕೋಟಿಗೆ ಇಳಿದಿದೆ.

ಕಳೆದ ವರ್ಷ ಆಗಸ್ಟ್‌ನಲ್ಲಿ ಕೇಂದ್ರ ಹಣಕಾಸು ಸಚಿವ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 15ನೇ ಹಣಕಾಸು ಆಯೋಗದ ಶಿಫಾರಸಿನಿಂದ ಕರ್ನಾಟಕಕ್ಕೆ ಆಗಿರುವ ಅನ್ಯಾಯದ ಬಗ್ಗೆ ಗಮನ ಸೆಳೆದಿದ್ದರು. 'ದೇಶದಲ್ಲಿ ಅತೀ ಹೆಚ್ಚು ತೆರಿಗೆ ಸಂಗ್ರಹಿಸುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಕೋವಿಡ್‌ನಿಂದಾಗಿ ರಾಜ್ಯದ ತೆರಿಗೆ ಸಂಗ್ರಹ ಪ್ರಮಾಣ ಕಡಿಮೆ ಆಗಿದೆ. ಇದರ ನಡುವೆ, 15ನೇ ಹಣಕಾಸು ಆಯೋಗದ ಶಿಫಾರಸಿನಿಂದ ರಾಜ್ಯದ ಪಾಲು ಕಡಿಮೆ ಆಗಿದೆ. ಹೀಗಾಗಿ, ರಾಜ್ಯದ ಪಾಲನ್ನು ಹೆಚ್ಚಿಸಬೇಕು' ಎಂದು ಮನವಿ ಸಲ್ಲಿಸಿದ್ದರು. ಕರ್ನಾಟಕ ವಿಧಾನಸಭಾ ಅಧಿವೇಶನದಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯದ ಬಗ್ಗೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಶಾಸಕರಾದ ಯು.ಟಿ.ಖಾದರ್, ಕೃಷ್ಣ ಬೈರೇಗೌಡ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಸೇರಿದಂತೆ ಹಲವು ನಾಯಕರು ಧ್ವನಿ ಎತ್ತಿದ್ದರು. ಈ ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆಯಲಾಗುವುದು ಎಂದು ಮುಖ್ಯಮಂತ್ರಿ ಭರವಸೆ ನೀಡಿದ್ದರು.

ರಾಜ್ಯಗಳಿಗೆ ಬಿಡುಗಡೆಯಾದ ಮೊತ್ತ (₹ಕೋಟಿಗಳಲ್ಲಿ)

ರಾಜ್ಯ	ಮೊತ್ತ	ರಾಜ್ಯ	ಮೊತ್ತ	ರಾಜ್ಯ	ಮೊತ್ತ
ಆಂಧ್ರ ಪ್ರದೇಶ	4,721	ಹಿಮಾಚಲ ಪ್ರದೇಶ	968	ಒಡಿಶಾ	5,282
ಅರುಣಾಚಲ ಪ್ರದೇಶ	2,049	ಜಾರ್ಖಂಡ್	3,858	ಪಂಜಾಬ್	2,108
ಅಸ್ಸಾಂ	3,649	ಕರ್ನಾಟಕ	4,254	ರಾಜಸ್ಥಾನ	7,030
ಬಿಹಾರ	11,734	ಕೇರಳ	2,245	ಸಿಕ್ಕಿಂ	452
ಛತ್ತೀಸಘಡ	3,974	ಮಧ್ಯಪ್ರದೇಶ	9,158	ತಮಿಳುನಾಡು	4,758
ಗೋವಾ	450	ಮಹಾರಾಷ್ಟ್ರ	7,369	ತೆಲಂಗಾಣ	2,452
ಗುಜರಾತ್	4,057	ಮಣಿಪುರ	835	ತ್ರಿಪುರ	826
ಹರಿಯಾಣ	1,275	ಮೇಘಾಲಯ	894	ಉತ್ತರ ಪ್ರದೇಶ	20,928
		ಮಿಜೋರಾಂ	583	ಉತ್ತರಾಖಂಡ	1,304
		ನಾಗಾಲ್ಯಾಂಡ್	663	ಪ. ಬಂಗಾಳ	8,776

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	485
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-56000
ಕಾರ್ಕಳ	
ಹಳತು	46000-56000
ಹೊಸತು	40000-46000
ಕುಮಟ	
ಚಿಪ್ಪು	28999-33009
ಕೋಕ	22019-32109
ಫ್ಯಾಕ್ಟರಿ	13509-22180
ಹಳೆಚಾಲಿ	46099-47569
ಹೊಸಚಾಲಿ	37089-40799
ಪುತ್ತೂರು	
ಹೊಸತು	33000-46000
ಸಾಗರ	
ಬಿಳಿಗೋಟು	30786-30786
ಚಾಲಿ	36989-38233
ಕೆಂಪುಗೋಟು	34129-38699
ರಾಶಿ	46009-52009
ಸಿಪ್ಪೆಗೋಟು	19159-22229
ಸಿದ್ದಾಪುರ	
ಬಿಳಿಗೋಟು	26799-34044
ಚಾಲಿ	36899-40799
ಕೋಕ	23989-33899
ಕೆಂಪುಗೋಟು	31899-33599
ರಾಶಿ	48299-50799
ತಟ್ಟಿಬೆಟ್ಟೆ	46599-49299
ಶಿರಸಿ	
ಬೆಟ್ಟೆ	35199-48296
ಬಿಳಿಗೋಟು	24199-34300
ಚಾಲಿ	35599-41599
ರಾಶಿ	36211-52399

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16100	15600	15700	211.85 ಸೆಂಟ್ಸ್
ಎಸಿ	8820	8400	8750	
ಆರ್‌ಪಿ	9750	9500	9750	ಲಂಡನ್
ಆರ್‌ಸಿ	4760	4500	4625	2073 ಡಾಲರ್ಸ್

ಏಷ್ಯಾದ ಬಲಿಷ್ಠ ಅರ್ಥ ವ್ಯವಸ್ಥೆ ಆಗಲಿದೆ ಭಾರತ: ಮಾರ್ಗನ್ ಸ್ಟ್ಯಾನ್ಲಿ

ಬೆಂಗಳೂರು (ರಾಯಿಟರ್ಸ್): ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತವು ಏಷ್ಯಾದ ಅತ್ಯಂತ ಬಲಿಷ್ಠ ಅರ್ಥ ವ್ಯವಸ್ಥೆಯಾಗಿ ಹೊರಹೊಮ್ಮಬಹುದು ಎಂದು 'ಮಾರ್ಗನ್ ಸ್ಟ್ಯಾನ್ಲಿ' ಬ್ರೋಕರೇಜ್ ಸಂಸ್ಥೆ ಹೇಳಿದೆ.

ಆರ್ಥಿಕ ನೀತಿಗಳಲ್ಲಿನ ಸುಧಾರಣೆಗಳು, ಯುವ ದುಡಿಯುವ ವರ್ಗ ಮತ್ತು ಹೂಡಿಕೆಗಳ ಕಾರಣದಿಂದಾಗಿ ಭಾರತವು ದೇಶೀಯವಾಗಿ ದೊಡ್ಡ ಪ್ರಮಾಣದಲ್ಲಿ ಬೇಡಿಕೆ ಸೃಷ್ಟಿಸುವ ಸಾಮರ್ಥ್ಯ ಹೊಂದಿದೆ ಎಂದು ಅದು ಹೇಳಿದೆ.

2022-23ರಲ್ಲಿ ದೇಶದ ಸರಾಸರಿ ಬೆಳವಣಿಗೆ ದರವು ಶೇಕಡ 7ರಷ್ಟು ಆಗಬಹುದು. ಅಲ್ಲದೆ, ಭಾರತವು ಏಷ್ಯಾದ ಮತ್ತು ವಿಶ್ವದ ಬೆಳವಣಿಗೆಗೆ ಕ್ರಮವಾಗಿ ಶೇ 28ರಷ್ಟು ಹಾಗೂ ಶೇ 22ರಷ್ಟು ಕೊಡುಗೆ ನೀಡಬಹುದು ಎಂದು ಅಂದಾಜು ಮಾಡಿದೆ.

ಏಷ್ಯಾದ ಮೂರನೆಯ ಅತಿದೊಡ್ಡ ಅರ್ಥ ವ್ಯವಸ್ಥೆ ಭಾರತದ್ದು. ಇದು ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ಶೇ 8.7ರಷ್ಟು ಬೆಳವಣಿಗೆ ಸಾಧಿಸಿದೆ.

ಹಿಂದಿನ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿಯು ಕೋವಿಡ್-19 ಕಾರಣದಿಂದಾಗಿ ಶೇ (–) 6.6ರಷ್ಟು ಕುಸಿತ ಕಂಡಿತ್ತು.

'ಕಾರ್ಪೊರೇಟ್ ತೆರಿಗೆ ಪ್ರಮಾಣ ಕಡಿಮೆ ಇರುವುದು, ಉತ್ಪಾದನೆ ಆಧಾರಿತ ಉತ್ತೇಜನ (ಪಿಎಲ್‌ಐ) ಯೋಜನೆ ಜಾರಿಗೆ ತಂದಿರುವುದು ಹಾಗೂ ಇತರ ಕೆಲವು ಅಂಶಗಳ ಕಾರಣದಿಂದಾಗಿ ದೇಶಿ ಮಾರುಕಟ್ಟೆಯಲ್ಲಿ ಬೇಡಿಕೆಯು ಹೆಚ್ಚಾಗುತ್ತದೆ ಹಾಗೂ ಆ ಬೇಡಿಕೆಯು ಸುಸ್ಥಿರವಾಗಿ ಇರುತ್ತದೆ' ಎಂದು ಮಾರ್ಗನ್ ಸ್ಟ್ಯಾನ್ಲಿ ಸಂಸ್ಥೆಯ ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ.

ಅಭಿವೃದ್ಧಿ ಹೊಂದಿದ ದೇಶಗಳ ಅರ್ಥ ವ್ಯವಸ್ಥೆಯಲ್ಲಿ ಕರಿಮೋಡ ಆವರಿಸಿರುವ ಸಂದರ್ಭದಲ್ಲಿ ಈ ಅಂದಾಜು ಹೊರಬಿದ್ದಿದೆ. ಅಮೆರಿಕದಲ್ಲಿ ಮತ್ತು ಯೂರೊ ವಲಯದಲ್ಲಿ ವಾಣಿಜ್ಯ ಚಟುವಟಿಕೆಗಳು ಜುಲೈನಲ್ಲಿ ಕುಸಿದಿವೆ.

ಸುದ್ದಿ 2 ನಿಮಿಷ

ರಿಲಯನ್ಸ್ ಜುವೆಲ್ಸ್‌ನಿಂದ 'ವರಲಕ್ಷ್ಮಿ ಕಲೆಕ್ಷನ್ಸ್' ಬಿಡುಗಡೆ

ಬೆಂಗಳೂರು: ರಿಲಯನ್ಸ್ ಜುವೆಲ್ಸ್ ಕಂಪನಿಯು 'ವರಲಕ್ಷ್ಮಿ ಕಲೆಕ್ಷನ್ಸ್' ಹೆಸರಿನ ವಿಶೇಷ ಆಭರಣಗಳ ಸಂಗ್ರಹವನ್ನು ಬಿಡುಗಡೆ ಮಾಡಿದೆ.

ದಕ್ಷಿಣ ಭಾರತದ ಸಮೃದ್ಧ ಸಂಪ್ರದಾಯ ಮತ್ತು ಪರಂಪರೆಯನ್ನು ಮೈಗೂಡಿಸಿಕೊಂಡಿರುವ ಈ ಆಭರಣವು ಪ್ರಾದೇಶಿಕತೆ, ಸಾಂಸ್ಕೃತಿಕ ಅಂಶಗಳನ್ನು ಗಮನದಲ್ಲಿಟ್ಟು ಕೊಂಡು ವಿನ್ಯಾಸಗೊಂಡಿದೆ.

ಸೂಕ್ಷ್ಮವಾಗಿ ಕೆತ್ತನೆ ಮಾಡಿದ ಸಾಂಪ್ರದಾಯಿಕ ನೆಕ್‌ಲೆಸ್, ಕಿವಿಯೋಲೆ, ಬಳೆ ಮತ್ತು ರಿಂಗ್‌ಗಳು ಲಭ್ಯವಿವೆ. 22 ಕ್ಯಾರಟ್ ಹಳದಿ ಚಿನ್ನದಲ್ಲಿ ವಿನ್ಯಾಸ ಮಾಡಲಾಗಿದೆ. ಪುರಾತನ ಚಿನ್ನದ ದೇಗುಲ ವಿನ್ಯಾಸಗಳು ಮತ್ತು ವರ್ಣಮಯ ಹವಳಗಳನ್ನು ಒಳಗೊಂಡಿದೆ. ಪ್ರತಿ ಚಿನ್ನದ ಆಭರಣದ ವಿನ್ಯಾಸವೂ ವಿಭಿನ್ನವಾಗಿದೆ ಎಂದು ಕಂಪನಿ ಹೇಳಿದೆ.

ವರಲಕ್ಷ್ಮಿ ಕಲೆಕ್ಷನ್ 2022ರ ವಿಶಿಷ್ಟ ವಿನ್ಯಾಸಗಳ ಜೊತೆಗೆ, ಚಿನ್ನದ ಆಭರಣ ಮೇಕಿಂಗ್ ಮತ್ತು ವಜ್ರದ ಆಭರಣದ ಮೌಲ್ಯದ ಮೇಲೆ ಈ ತಿಂಗಳ ಅಂತ್ಯದವರೆಗೆ ಗ್ರಾಹಕರಿಗೆ ಶೇಕಡ 25ವರೆಗೆ ವಿಶೇಷ ರಿಯಾಯಿತಿ ಸಿಗಲಿದೆ ಎಂದು ರಿಲಯನ್ಸ್ ಜ್ಯುವೆಲ್ಸ್‌ನ ಸಿಇಒ ಸುನೀಲ್ ನಾಯಕ್ ಮಾಹಿತಿ ನೀಡಿದ್ದಾರೆ.



ಮಹೀಂದ್ರದಿಂದ ಬೊಲೆರೊ ಮ್ಯಾಕ್ಸ್ ಪಿಕಪ್ ಮಾರುಕಟ್ಟೆಗೆ

ಬೆಂಗಳೂರು: ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ದೇಶದ ಮಾರುಕಟ್ಟೆಗೆ ಹೊಸ ಬೊಲೆರೊ ಮ್ಯಾಕ್ಸ್ ಪಿಕಪ್ ಸಿಟಿ3000 ಬಿಡುಗಡೆ ಮಾಡಿದೆ. ಇದರ ಪರಿಚಯಾತ್ಮಕ ಬೆಲೆ ₹ 7.68 ಲಕ್ಷದಿಂದ (ಎಕ್ಸ್ ಷೋರೂಂ) ಆರಂಭ ಆಗುತ್ತದೆ.

ಈ ವಾಹನ ಖರೀದಿಗೆ ಆಕರ್ಷಕ ಹಣಕಾಸು ಯೋಜನೆ ಲಭ್ಯವಿದೆ. ₹ 25 ಸಾವಿರ ಡೌನ್‌ಪೇಮೆಂಟ್ ಮಾಡಿದರೆ ಸಾಕು ಎಂದು ಕಂಪನಿಯು ತಿಳಿಸಿದೆ.

ಹೆಚ್ಚುತ್ತಿರುವ ಸಾಗಣೆಯ ಅಗತ್ಯಗಳನ್ನು ಗಮನದಲ್ಲಿ ಇಟ್ಟುಕೊಂಡು ಪಿಕಪ್ ವಿಭಾಗದಲ್ಲಿ ಹೊಸ ಬ್ರ್ಯಾಂಡ್ ಪರಿಚಯಿಸಲಾಗಿದೆ. ಆಧುನಿಕ ವಹಿವಾಟಿನ ಅಗತ್ಯಗಳನ್ನು ಇದು ಈಡೇರಿಸಲಿದೆ. ಇದು ಐಮ್ಯಾಕ್ಸ್ ಟೆಲಿಮ್ಯಾಟಿಕ್ಸ್ ಸಲ್ಯೂಷನ್ ತಂತ್ರಜ್ಞಾನ ಒಳಗೊಂಡಿದೆ. 1,300 ಕೆ.ಜಿಗೂ ಹೆಚ್ಚು ಭಾರ ಹೊರುವ ಸಾಮರ್ಥ್ಯ ಇದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ. B. V. ಮುಕುಂದ್
ನಿವೃತ್ತ ಉಪನಿರ್ದೇಶಕರು
ಕರ್ನಾಟಕ ಸರ್ಕಾರ ವಿಮಾ ಇಲಾಖೆ (K.G.I.D)
ದಿನಾಂಕ 08.08.2022 ರಂದು
ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ದುಃಖತಪ್ತ ಕುಟುಂಬವರ್ಗದವರು

10ನೇ ವರ್ಷದ ಚಿರಸ್ಮರಣೆ



ಶ್ರೀ ಎಲ್. ಪದ್ಮನಾಭರೆಡ್ಡಿ
ನಿಧನ : 11.8.2012
ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳು, ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುವ.
ನಿಮ್ಮನ್ನು ಸದಾ ಸ್ಮರಿಸುವ.....
ದುಃಖತಪ್ತರು: ಪತ್ನಿ- ಶ್ರೀಮತಿ ಶಶಿಕಲಾ ಮತ್ತು ಮಕ್ಕಳು ಹಾಗೂ ಕುಟುಂಬದವರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹167
ಆರ್‌ಎಸ್‌ಎಸ್-5 ₹156
ಗುಡ್ ಲಾಟ್ ₹148

ಮುಂಬೈ ಧಾರಣೆ

ಶೇಂಗಾ
10–8-2022

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	10000-10050
ದಪ್ಪ ಗುಜರಾತ್(ಹೊಸ)	10700-10750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1650)
ಒಂದು ವಾರದ ಡೆಲಿವರಿ	1645 (1645)
ಸೋಯಾ ಕಚ್ಚಾ	1235 (1240)
ಪಾಮ್ ವಾರದ ಡೆಲಿವರಿ	1243 (1253)
ಸೂರ್ಯಕಾಂತಿ ಎಣ್ಣೆ ಕಚ್ಚಾ	1500 (1500)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,200 (52,300)
ಬೆಳ್ಳಿ ಕೆ.ಜಿ 58,600 (59,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸಾಲ ವಸೂಲಿಗೆ ಅಕ್ರಮ ಮಾರ್ಗ ಬಳಕೆ ತಡೆಯಲು ಆರ್‌ಬಿಐ ಕ್ರಮ

ಡಿಜಿಟಲ್ ಸಾಲ ಆ್ಯಪ್‌ಗೆ ಮಾರ್ಗಸೂಚಿ

ಮುಂಬೈ (ಪಿಟಿಐ): ದುಬಾರಿ ಬಡ್ಡಿ ದರ ವಿಧಿಸುವುದನ್ನು ತಡೆಯಲು, ಸಾಲ ವಸೂಲಿ ಸಂದರ್ಭದಲ್ಲಿ ಅಕ್ರಮ ಮಾರ್ಗ ಅನುಸರಿಸುವುದನ್ನು ನಿಯಂತ್ರಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಡಿಜಿಟಲ್ ವೇದಿಕೆಗಳ ಮೂಲಕ ಸಾಲ ನೀಡುವವರಿಗೆ ಕಠಿಣ ಮಾರ್ಗಸೂಚಿ ರೂಪಿಸಿದೆ.

ಹೊಸ ಮಾರ್ಗಸೂಚಿಗಳ ಅನ್ವಯ, ಸಾಲ ಮಂಜೂರು ಮತ್ತು ಮರುಪಾವತಿಯು ಸಾಲ ಪಡೆಯುವವರ ಹಾಗೂ ಕೊಡುವ ಸಂಸ್ಥೆಯ ಬ್ಯಾಂಕ್ ಖಾತೆಗಳ ಮೂಲಕವೇ ನಡೆಯಬೇಕಿದೆ. ಸಾಲವನ್ನು ಮೂರನೆಯ ವ್ಯಕ್ತಿಯ, ಸಂಸ್ಥೆಯ ಖಾತೆಯಿಂದ ವರ್ಗಾವಣೆ ಮಾಡುವಂತಿಲ್ಲ.

ಸಾಲದ ಸೇವೆ ಒದಗಿಸುವವರಿಗೆ ನೀಡುವ ಶುಲ್ಕಗಳನ್ನು ಸಾಲ ನೀಡುವ ಸಂಸ್ಥೆಗಳೇ ಪಾವತಿ ಮಾಡಬೇಕು. ಅದನ್ನು ಸಾಲ ಪಡೆಯುವವರಿಂದ ವಸೂಲು ಮಾಡುವಂತಿಲ್ಲ ಎಂದು ಆರ್‌ಬಿಐ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಸಾಲಕ್ಕೆ ಸಂಬಂಧಿಸಿದ ಒಪ್ಪಂದ ಪತ್ರವನ್ನು ಅಂತಿಮಗೊಳಿಸುವ ಮೊದಲು ಗ್ರಾಹಕರಿಗೆ, ಪ್ರಮುಖ ಮಾಹಿತಿಯನ್ನು ನಿರ್ದಿಷ್ಟ ನಮೂನೆಯಲ್ಲಿ ಒದಗಿಸಬೇಕು. ಸಾಲ ಪಡೆಯುವವರ ಸ್ಪಷ್ಟ ಒಪ್ಪಿಗೆ ಇಲ್ಲದೆ, ಅವರ ಸಾಲದ ಮಿತಿಯನ್ನು ಹೆಚ್ಚಿಸುವುದನ್ನು ನಿರ್ಬಂಧಿಸಲಾಗಿದೆ.

'ಸಾಲ ಪಡೆದವರು ಅಸಲು ಹಾಗೂ ಅದಕ್ಕೆ ಸಂಬಂಧಿಸಿದ ವಾರ್ಷಿಕ ಸರಾಸರಿ ದರವನ್ನು ಪಾವತಿಸಿ ಡಿಜಿಟಲ್ ಸಾಲದಿಂದ ಹೊರಬರಲು ಅವಕಾಶ ಕೊಡಬೇಕು. ಇದಕ್ಕೆ ಯಾವುದೇ ದಂಡ ವಿಧಿಸುವಂತಿಲ್ಲ. ಸಾಲ ಪಡೆದವ ದೂರು ನೀಡಿದರೆ ಅದನ್ನು ಮೂವತ್ತು ದಿನಗಳಲ್ಲಿ ಇತ್ಯರ್ಥಪಡಿಸಬೇಕು. ಇಲ್ಲವಾದಲ್ಲಿ ಆತ ಆರ್‌ಬಿಐ ಒಂಬುಡ್ಸ್‌ಮನ್ ಮೊರೆ ಹೋಗಲು ಅವಕಾಶ ಇರುತ್ತದೆ' ಎಂದು ಹೇಳಲಾಗಿದೆ.

ಗ್ರಾಹಕರ ಮಾಹಿತಿಯನ್ನು ಅಗತ್ಯ ಇರುವಷ್ಟು ಮಾತ್ರ ಸಂಗ್ರಹಿಸಬೇಕು, ಗ್ರಾಹಕರಿಂದ ಸ್ಪಷ್ಟ ಪೂರ್ವಾನುಮತಿ ಪಡೆದು ವಿವರ ಸಂಗ್ರಹಿಸಬೇಕು.

600 ಆ್ಯಪ್‌ಗಳು: ಡಿಜಿಟಲ್ ವೇದಿಕೆಗಳ ಮೂಲಕ ಸಾಲ ವಿತರಣೆ ಮಾಡುವ 600 ಅಕ್ರಮ ಆ್ಯಪ್‌ಗಳು ದೇಶದಲ್ಲಿ ಇವೆ ಎಂದು ಆರ್‌ಬಿಐ ರಚಿಸಿದ್ದ ಕಾರ್ಯಕಾರಿ ಸಮಿತಿ ಹೇಳಿತ್ತು. ಈ ಆ್ಯಪ್‌ಗಳು 81 ಬೇರೆ ಬೇರೆ ಆ್ಯಪ್ ಸ್ಟೋರ್‌ಗಳಲ್ಲಿ ಲಭ್ಯವಿವೆ ಎಂದು ಅದು ತಿಳಿಸಿತ್ತು.

ಮುಖ್ಯಾಂಶಗಳು
- ಒಪ್ಪಿಗೆ ಇಲ್ಲದ ಸಾಲ ಮಿತಿ ಹೆಚ್ಚಿಸುವಂತಿಲ್ಲ
- ಬ್ಯಾಂಕ್ ಖಾತೆ ಮೂಲಕ ಸಾಲ ವರ್ಗಾವಣೆ ಕಡ್ಡಾಯ

ದ್ವೀಪದ ಪರಮಾಧಿಕಾರ ಮೊಟಕು ನಿರ್ಧಾರಕ್ಕೆ ಷಿ ಜಿನ್‌ಪಿಂಗ್ ಸಹಿ

ತೈವಾನ್ ಸ್ವಾಧೀನಕ್ಕೆ ಸೇನೆ ಬಳಕೆ: ಚೀನಾ

ಬೀಜಿಂಗ್/ಲಂಡನ್ (ಎಪಿ/ ರಾಯಿಟರ್ಸ್/ಎಎಫ್‌ಪಿ): ಸ್ವತಂತ್ರ ಆಡಳಿತದ ದ್ವೀಪ ತೈವಾನ್ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಸೇನೆ ಬಳಸುವುದಾಗಿ ಚೀನಾ ಬುಧವಾರ ಮತ್ತೊಮ್ಮೆ ಬೆದರಿಕೆ ಹಾಕಿದೆ. ಜತೆಗೆ ತೈವಾನ್ ಪ್ರತ್ಯೇಕತಾವಾದಿಗಳಿಗೂ ಕಠಿಣ ಎಚ್ಚರಿಕೆಯನ್ನು ರವಾನಿಸಿದೆ.

ತೈವಾನ್ ದ್ವೀಪದ ನಿಯಂತ್ರಣಕ್ಕಾಗಿ ಸೇನಾಪಡೆಗಳನ್ನು ಅಥವಾ ಆಡಳಿತಗಾರರನ್ನು ಕಳುಹಿಸುವುದಿಲ್ಲವೆಂದು 1993 ಮತ್ತು 2000ರಲ್ಲಿ ಹೊರಡಿಸಿದ್ದ ಎರಡು ಶ್ವೇತಪತ್ರಗಳಲ್ಲಿ ನೀಡಿದ್ದ ಭರವಸೆಯನ್ನೂ ಚೀನಾ ಹಿಂಪಡೆದಿದೆ. ಬುಧವಾರ ಹೊಸದಾಗಿ ಬಿಡುಗಡೆ ಮಾಡಿರುವ ಶ್ವೇತಪತ್ರದಲ್ಲಿ 'ಇದು ತೈವಾನ್‌ನ ಆರ್ಥಿಕ ಪ್ರಗತಿ ಮತ್ತು ಭದ್ರತೆ ಹಾಗೂ ಘನತೆಯನ್ನು ಖಾತರಿಪಡಿಸುತ್ತದೆ' ಎಂದು ಹೇಳಿದೆ.

ತೈವಾನ್ ಸ್ವಾಯತ್ತ ಅಧಿಕಾರ ಮೊಟಕುಗೊಳಿಸುವ ನಿರ್ಧಾರಕ್ಕೆ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಸಹಿ ಹಾಕಿರುವ ಅಧಿಕೃತ ದಾಖಲೆಯನ್ನು ಬುಧವಾರ ಪ್ರದರ್ಶಿಸಲಾಗಿದೆ.

ತೈವಾನ್‌ನ ಪ್ರತ್ಯೇಕವಾದ ಸಹಿಸಲ್ಲ: 'ತೈವಾನ್‌ನಲ್ಲಿ ಪ್ರತ್ಯೇಕತಾವಾದದ ಚಟುವಟಿಕೆಗಳನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ಅಗತ್ಯಬಿದ್ದಲ್ಲಿ ಸ್ವಯಂ ಆಡಳಿತದ ದ್ವೀಪವನ್ನು ಬಲವಂತವಾಗಿ ತನ್ನ ತೆಕ್ಕೆಗೆ ತೆಗೆದುಕೊಳ್ಳಲಾಗುವುದು' ಎಂದು ಚೀನಾ ಎಚ್ಚರಿಕೆ ನೀಡಿದೆ.

'ತೈವಾನ್ ಅನ್ನು ಬೀಜಿಂಗ್ ಜತೆಗೆ ಶಾಂತಿಯುತವಾಗಿ ಒಗ್ಗೂಡಿಸಲು ಬಯಸುತ್ತೇವೆ. ಇದಕ್ಕಾಗಿ ಸೇನೆ ಬಳಸುವುದು ನಮಗೂ ಇಷ್ಟವಿಲ್ಲ. ಆದರೆ, ಅಗತ್ಯಬಿದ್ದಲ್ಲಿ ಸೇನಾ ಬಳಕೆ ಸೇರಿ ಎಲ್ಲ ಆಯ್ಕೆಗಳೂ ನಮ್ಮ ಬಳಿ ಇವೆ' ಎಂದು ಅದು ಹೇಳಿದೆ. 'ಪ್ರತ್ಯೇಕತಾವಾದಿಗಳು ಪ್ರಚೋದನೆಗೆ ಇಳಿದರೆ ಮತ್ತು ಬಾಹ್ಯಶಕ್ತಿಗಳು ತಮ್ಮ ಎಲ್ಲೆಯನ್ನು ಮೀರಿದರೆ ನಾವು ಅದಕ್ಕೆ ತಕ್ಕ ಪ್ರತ್ಯುತ್ತರವನ್ನು ನಮ್ಮ ಪಡೆಗಳ ಮೂಲಕ ನೀಡುತ್ತೇವೆ' ಎಂದು ಕಠಿಣ ಎಚ್ಚರಿಕೆ ನೀಡಿದೆ.

ತೈವಾನ್‌ಗೆ ಸೇನಾ ಮತ್ತು ರಾಜಕೀಯ ಬೆಂಬಲ ನೀಡುತ್ತಿರುವ ಅಮೆರಿಕದ ಜತೆಗೆ ಸಾಗರ ಭದ್ರತೆ, ಹವಾಮಾನ ಬದಲಾವಣೆ ಸೇರಿ ಎಲ್ಲ ರೀತಿಯ ಮಾತುಕತೆ ಸ್ಥಗಿತಗೊಳಿಸಲಾಗಿದೆ ಎಂದು ಚೀನಾ ಪುನರುಚ್ಚರಿಸಿದೆ.

ಚೀನಾದ ಯುದ್ಧನೌಕೆಗಳು ಮತ್ತು ವಾಯುಪಡೆಯ ವಿಮಾನಗಳು ತೈವಾನ್‌ನ ಜಲಪ್ರದೇಶ ಮತ್ತು ವಾಯುಪ್ರದೇಶಗಳನ್ನು ಅತಿಕ್ರಮಿಸಿ ವಾರದಿಂದಲೂ ಕ್ಷಿಪಣಿಗಳನ್ನು ಉಡಾಯಿಸಿವೆ ಎಂದು ತೈವಾನ್ ಸಂಪುಟ ವ್ಯವಹಾರಗಳ ಕಚೇರಿ ಹೇಳಿಕೆ ಬಿಡುಗಡೆ ಮಾಡಿದೆ.

ತೈವಾನ್ ಕೂಡ ತನ್ನ ಪಡೆಗಳನ್ನು ಸನ್ನದ್ಧ ಸ್ಥಿತಿಯಲ್ಲಿರಿಸಿ, ಮಂಗಳವಾರ ಪಿಂಗ್ಟಂಗ್ ಪ್ರದೇಶದ ಆಗ್ನೇಯ ಕರಾವಳಿಯಲ್ಲಿ ಫಿರಂಗಿ ದಾಳಿಯ ತಾಲೀಮು ನಡೆಸಿತು.

ಚೀನಾದ ನಡೆಯನ್ನು ಅಮೆರಿಕ, ಜಪಾನ್ ಸೇರಿ ಹಲವು ರಾಷ್ಟ್ರಗಳು ತೀವ್ರವಾಗಿ ಖಂಡಿಸಿದ್ದು, 'ಈ ಪ್ರದೇಶದಲ್ಲಿ ಹಡಗುಗಳು ಮತ್ತು ವಿಮಾನಗಳ ಸಂಚಾರಕ್ಕೆ ಅಡ್ಡಿಪಡಿಸಿ, ಜಾಗತಿಕ ಪೂರೈಕೆಯ ಸರಪಳಿಗೆ ಧಕ್ಕೆತಂದಿದೆ' ಎಂದು ಆರೋಪಿಸಿವೆ.

ಚೀನಾ ರಾಯಭಾರಿಗೆ ಸಮನ್ಸ್

ತೈವಾನ್ ಮೇಲೆ ಚೀನಾ ಇತ್ತೀಚಿನ ದಿನಗಳಲ್ಲಿ ತೋರುತ್ತಿರುವ ಆಕ್ರಮಣಕಾರಿ ವರ್ತನೆ ಮತ್ತು ಕ್ರಮಗಳ ಬಗ್ಗೆ ವಿವರಣೆ ನೀಡುವಂತೆ ಬ್ರಿಟನ್ ಬುಧವಾರ ಚೀನಾದ ರಾಯಭಾರಿಗೆ ನೋಟಿಸ್ ನೀಡಿದೆ.

ಬ್ರಿಟನ್‌ನ ಭವಿಷ್ಯದ ಪ್ರಧಾನಿ ಎನ್ನಲಾಗುತ್ತಿರುವ ವಿದೇಶಾಂಗ ಸಚಿವೆ ಲಿಜ್ ಟ್ರುಸ್, ಕ್ಷಿಪಣಿಗಳ ಉಡಾವಣೆ, ತೈವಾನ್ ವಾಯು ಪ್ರದೇಶಗಳ ಮೇಲೆ ನಡೆಸಿರುವ ಅತಿಕ್ರಮಣದ ಬಗ್ಗೆ ರಾಯಭಾರಿ ಝೆಂಗ್ ಜೆಗಾಂಗ್ ಅವರಿಂದ ವಿವರಣೆ ಕೇಳಲಾಗಿದೆ ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಉಕ್ರೇನ್ ಪ್ರತಿದಾಳಿ: ರಷ್ಯಾದ 9 ಯುದ್ಧ ವಿಮಾನಗಳು ಧ್ವಂಸ

ಕೀವ್(ಎಎಫ್‌ಪಿ/ ರಾಯಿಟರ್ಸ್/ ಎಪಿ): ಕ್ರಿಮಿಯಾ ವಾಯುನೆಲೆಯನ್ನು ಗುರಿಯಾಗಿಸಿ ನಡೆಸಿದ ಪ್ರತಿ ದಾಳಿಯಲ್ಲಿ ರಷ್ಯಾದ 9 ಯುದ್ಧ ವಿಮಾನಗಳನ್ನು ನಾಶಪಡಿಸಲಾಗಿದೆ ಎಂದು ಉಕ್ರೇನ್ ವಾಯುಪಡೆ ಬುಧವಾರ ತಿಳಿಸಿದೆ.

ಆದರೆ, ಇದನ್ನು ಅಲ್ಲಗಳೆದಿರುವ ರಷ್ಯಾ, ಯಾವುದೇ ದಾಳಿಯಾಗಿಲ್ಲ. ತನ್ನ ಯಾವುದೇ ಯುದ್ಧವಿಮಾನಗಳಿಗೆ ಹಾನಿಯಾಗಿಲ್ಲ ಎಂದು ತಿಳಿಸಿದೆ.

ಉಕ್ರೇನ್‌ನ ನಿಪ್ರೊಪೆಟ್ರೊವ್‌ಸ್ಕಾ ಹೃದಯ ಭಾಗದ ಮೇಲೆ ರಷ್ಯಾ ಪಡೆಗಳು ತಡ ರಾತ್ರಿ ನಡೆಸಿದ ಶೆಲ್ ದಾಳಿಗೆ ಸುಮಾರು 21 ನಾಗರಿಕರು ಮೃತಪಟ್ಟಿದ್ದಾರೆ ಎಂದು ಗವರ್ನರ್ ವೆಲೆಂಟಿನ್ ರೆಸ್ನಿಶೆಂಕೊ ಬುಧವಾರ ತಿಳಿಸಿದ್ದಾರೆ.

ಮಹಿಂದ ರಾಜಪಕ್ಸ ವಿದೇಶ ಪ್ರಯಾಣ ನಿರ್ಬಂಧ ವಿಸ್ತರಣೆ

ಕೊಲಂಬೊ (ಪಿಟಿಐ): ಶ್ರೀಲಂಕಾ ಮಾಜಿ ಪ್ರಧಾನಿ ಮಹಿಂದ ರಾಜಪಕ್ಸ ಮತ್ತು ಅವರ ಕಿರಿಯ ಸೋದರ, ಮಾಜಿ ಹಣಕಾಸು ಸಚಿವ ಬಸಿಲ್ ರಾಜಪಕ್ಸ ಅವರ ವಿದೇಶ ಪ್ರಯಾಣಕ್ಕೆ ಇರುವ ನಿರ್ಬಂಧವನ್ನು ಸೆಪ್ಟೆಂಬರ್ 5ರವರೆಗೆ ವಿಸ್ತರಿಸಿ ಸುಪ್ರೀಂಕೋರ್ಟ್ ಆದೇಶ ಹೊರಡಿಸಿದೆ.

ದೇಶದ ಆರ್ಥಿಕ ಬಿಕ್ಕಟ್ಟಿಗೆ ಇವರೇ ಜವಾಬ್ದಾರರೆಂದು ಆರೋಪಿಸಲಾಗಿದ್ದ ಅರ್ಜಿಯ ವಿಚಾರಣೆಯನ್ನು ಜುಲೈ 15ರಂದು ನಡೆಸಿದ ಸುಪ್ರೀಂಕೋರ್ಟ್, ಜುಲೈ 28ರವರೆಗೆ ದೇಶ ಬಿಟ್ಟು ಹೋಗದಂತೆ ನಿರ್ಬಂಧ ವಿಧಿಸಿತ್ತು. ಬಳಿಕ ಆಗಸ್ಟ್ 1 ಮತ್ತು ಆ. 3ರಂದು ಎರಡು ಬಾರಿ ವಿಸ್ತರಣೆ ಮಾಡಿತ್ತು.

ಗೊಟಬಯ ಸಿಂಗಪುರದಿಂದ ಥಾಯ್ಲೆಂಡ್‌ಗೆ

ಕೊಲಂಬೊ/ಸಿಂಗಪುರ (ರಾಯಿಟರ್ಸ್): 'ಶ್ರೀಲಂಕಾದ ಪದಚ್ಯುತ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರಿಗೆ ಮಾನವೀಯತೆಯ ಆಧಾರದ ಮೇಲೆ ದೇಶದಲ್ಲಿ ತಾತ್ಕಾಲಿಕ ಆಶ್ರಯಕ್ಕೆ ಅನುಮತಿಸಲಾಗಿದೆ. ಅವರು ಮೂರು ತಿಂಗಳು ಇಲ್ಲಿ ಉಳಿಯಲಿದ್ದಾರೆ. ಕಾಯಂ ಆಶ್ರಯಕ್ಕಾಗಿ ಗೊಟಬಯ ಮೂರನೇ ರಾಷ್ಟ್ರದ ಹುಡುಕಾಟದಲ್ಲಿದ್ದಾರೆ' ಎಂದು ಥಾಯ್ಲೆಂಡ್ ಪ್ರಧಾನಿ ಪ್ರಯುತ್ ಚಾನ್-ಒ-ಚಾ ಬುಧವಾರ ಹೇಳಿದ್ದಾರೆ.

ಆದರೆ, ಈ ಬಗ್ಗೆ ಶ್ರೀಲಂಕಾ ವಿದೇಶಾಂಗ ಸಚಿವಾಲಯ ಯಾವುದೇ ಮಾಹಿತಿ ನೀಡಿಲ್ಲ. ದೇಶದ ಆರ್ಥಿಕ ಬಿಕ್ಕಟ್ಟಿಗೆ ಗೊಟಬಯ ರಾಜಪಕ್ಸ ಅವರೇ ಕಾರಣ ಎಂದು ಜನರು ದಂಗೆ ಎದ್ದ ನಂತರ ಗೊಟಬಯ ಅವರು ದೇಶದಿಂದ ಪರಾರಿಯಾಗಿ, ಮಾಲ್ದೀವ್ಸ್‌ನಲ್ಲಿ ಆಶ್ರಯ ಪಡೆದಿದ್ದರು. ನಂತರ ಸಿಂಗಪುರಕ್ಕೆ ವಾಸ್ತವ್ಯ ಬದಲಿಸಿದ್ದರು.

ಪ್ರತಿಭಟನೆ ಅಂತ್ಯ: ಶ್ರೀಲಂಕಾ ಸರ್ಕಾರದ ವಿರುದ್ಧ ನಡೆಯುತ್ತಿದ್ದ ನಾಗರಿಕರ ದಂಗೆಯು 123 ದಿನಗಳ ಬಳಿಕ ಮಂಗಳವಾರ ಅಂತ್ಯಗೊಂಡಿದೆ. ಪ್ರತಿಭಟನಕಾರರು ಗಾಲೆ ಫೇಸ್ ಪ್ರೊಮೆನೇಡ್‌ನಿಂದ ತೆರಳಿದ್ದಾರೆ. ಏಪ್ರಿಲ್ 9ರಿಂದ 'ರಾಜಪಕ್ಸ ಮನೆಗೆ ಹೋಗಿ' ಎಂಬ ಘೋಷಣೆಯೊಂದಿಗೆ ನಾಗರಿಕರು ಪ್ರತಿಭಟಿಸುತ್ತಿದ್ದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

General

ಬೇಕಾಗಿದ್ದಾರೆ: FRESH Fruits ಅಂಗಡಿಗೆ ಬಿಲ್ಲಿಂಗ್ ಮತ್ತು ಹಲ್ಪರ್ ಕೆಲಸಕ್ಕೆ ಯುವಕ ಮತ್ತು ಯುವತಿಯರು ಬೇಕಾಗಿದ್ದಾರೆ.(ಯುವಕರಿಗೆ ವಸತಿ ಸೌಲಭ್ಯವಿದೆ). ವಯಸ್ಸು: 18ರಿಂದ 35, ವೇತನ: 12,000. ಸಮಯ : ಬೆಳಿಗ್ಗೆ 6 ರಿಂದ ಮಧ್ಯಾಹ್ನ 2 (1st Shift), ಮಧ್ಯಾಹ್ನ 2 ರಿಂದ ರಾತ್ರಿ 10 (2nd Shift) (8 ಗಂಟೆ ಡ್ಯೂಟಿ). ಶಿಕ್ಷಣ: 10ನೇ ತರಗತಿ ಕಡ್ಡಾಯ.ವಿಳಾಸ : ನಂ. 6/1ಎ, ವಿಶ್ವನೀದಂ ಅಂಚೆ, ಸುಂಕದಕಟ್ಟೆ, ಮಾಗಡಿರಸ್ತೆ, ಬೆಂಗಳೂರು - 560091.ಸಂಪರ್ಕಿಸಿ: ಪುರುಷೋತ್ತಮ್ : 8951389775.

ನೀವು ಇರುವ ಸ್ಥಳದಲ್ಲಿಯೇಕುಳಿತು ಬರವಣಿಗೆಯ ಮುಖಾಂತರ ವಾರಕ್ಕೆ-3000/- ತಿಂಗಳಿಗೆ 16,000/-ವರೆಗೂಗಳಿಸಬಹುದು (ಕೋರಿಯರ್ ಸೌಲಭ್ಯವಿದೆ). 9743217566, 9108418233

ನಿರುದ್ಯೋಗಿಗಳಿಗೆ ಸದವಕಾಶ. ನಮ್ಮ ಕಂಪನಿಯ ಅಮೃತಬಳ್ಳಿ ನೋನಿಯನ್ನು ಕಾರಿನಲ್ಲಿ ಹೋಗಿ ಪ್ರಚಾರ ಮಾಡಿ ಬಿಜಿನೆಸ್ ಮಾಡಿ ದಿನಕ್ಕೆ 800- 1200ರೂವರೆಗೆ ಪ್ರತಿ ದಿನ ಸಂಪಾದಿಸಿ. (ಉಚಿತ ವಸತಿ) ಸಂಪರ್ಕಿಸಿ: 8904379634/ 9513670249

ಪ್ರವಾಸ

Travel

ಶ್ರೇಯಸ್ ಟೂರ್ಸ್: 15.08.2022, 25.08.2022 5ದಿನಗಳು ಸಂಪೂರ್ಣ ಅಹೋಬಲಂ ನವನಾರಸಿಂಹ ಶ್ರೀಶೈಲಂ ಮಹಾನಂದಿ ಯಾಗಂಟಿ ಬೇಲಂಗುಹೆ ಮಂತ್ರಾಲಯ. 14.09.2022 10ದಿನಗಳು 6ವಿಮಾನದಲ್ಲಿ ನೇಪಾಳ ರಾಷ್ಟ್ರದ ಕಠ್ಮಂಡು ಮನೋಕಾಮನದೇವಿ ಪೋಕ್ರಾ ಮುಕ್ತಿನಾಥ ಚಿತವಾನ್ ಲೂಂಬಿನಿ ಜನಕಪುರಿ. 06.10.2022 15ದಿನಗಳು ಅಖಂಡ ಮಧ್ಯಪ್ರದೇಶರಾಜ್ಯ ಪ್ರವಾಸ(ಅಮರಕಂಟಕ ಮಯ್ಯಾರ್ ಚಿತ್ರಕೂಟ ಸಹಿತ).8073824856/ 9206979202/ 6366322639

ಪ್ರವಾಸಗಳು: 06.10.2022 27.10.2022 ರಿಂದ 11/5 ದಿನಗಳ ಸಿಂಗಾಪುರ್, ಮಲೇಶಿಯಾ ಥೈಲ್ಯಾಂ ಡ್. 06.09.2022 27.09.2022 ರಿಂದ 5 ದಿನಗಳ ದುಬೈ,ಅಬುಧಾಬಿ,ಶಾರ್ಜಾ. 02.10.2022 06.10.2022 18.10.2022 ರಿಂದ 12/8 ದಿನಗಳ ಶಿಮ್ಲಾ,ಮನಾಲಿ ವೈಷ್ಣೋದೇವಿ. 06.10.2022 19.10.2022 ರಿಂದ 8/12 ದಿನಗಳ ಕಾಶಿ,ಗಯಾ,ಹರಿದ್ವಾರ್. 13.09.2022 19.10.2022 ರಿಂದ 11 ದಿನಗಳ ಕಾಶಿ,ನೇಪಾಳ,ಮುಕ್ತಿನಾಥ್ 30.10.2022 18.11.2022 ರಿಂದ 11 ದಿನಗಳ ಮಧ್ಯಪ್ರದೇಶ. 11.10.2022 ರಿಂದ 15 ದಿನಗಳ ಚಾರ್‌ಧಾಮ್. 30.10.2022 11.11.2022 ರಿಂದ 11/ 17 ದಿನಗಳ ಗುಜರಾತ್ ರಾಜಸ್ಥಾನ್ ಪ್ರವಾಸಗಳು ಆನಂದ್ ವಿಹಾರಿ ಬೆಂಗಳೂರು-23. 8088887677 080-23385837

ಭವಿಷ್ಯ

Astrology

ಕೇರಳ ಬಂಗಾಳಿ ವಶೀಕರಣ ಮೋಡಿ ಸಿದ್ಧಿಯನ್ನು ವಶದಲ್ಲಿರಿಸಿಕೊಂಡಿರುವ, ಸ್ತ್ರೀ ಪುರುಷ ವಶೀಕರಣ ಸಂತಾನ, ಮರಣ ಭಯ, ಪ್ರೇಮ ವಿಚಾರ. 9632075984

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಜನ್ಮಾಂತರ ಸಮ್ಮೋಹಿನಿ ಚಿಕಿತ್ಸೆ
ಎಲ್ಲಾ ರೀತಿಯ ದೈಹಿಕ, ಮಾನಸಿಕ ಕಾಯಿಲೆಗಳು, ನಿಮ್ಮ ಎಲ್ಲಾ ರೀತಿಯ ಪರಿಹಾರವಾಗದ ಸಮಸ್ಯೆಗಳು, ಜನ್ಮ ಜನ್ಮಾಂತರಗಳ ದೋಷಗಳ ನಿವಾರಣೆಗಾಗಿ ಕೂಡಲೇ ಸಂಪರ್ಕಿಸಿ
7676750280

★॥ಶ್ರೀಕೇದಾರನಾಥ॥★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್‌ಕಛೇರಿ ಸಾಲಬಾಧೆ ಯಾವುದೇ ಸಮಸ್ಯೆಯಿದ್ದರೂ. 100% ಶಾಶ್ವತ_ಪರಿಹಾರ. 9148773459

★ಸಿಗಂಧೂರುಚೌಡೇಶ್ವರಿ ಜ್ಯೋತಿಷ್ಯ★ ಸ್ತ್ರೀಪುರುಷ ವಶೀಕರಣ, ದಾಂಪತ್ಯ ಕಲಹ, ಉದ್ಯೋಗ, ಹಣಕಾಸು ಇನ್ನಾವುದೇ ಸಮಸ್ಯೆಗಳಿಗೆ 100%ಪರಿಹಾರ. ಪಂಡಿತ್ ಲಕ್ಷ್ಮಣ್ ಆಚಾರ್ಯ 7019622190

★॥ಆದಿಶಕ್ತಿಹುಲಿಗೆಮ್ಮ ದೇವಿ ಜ್ಯೋತಿಷ್ಯರು॥★ ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ ಇನ್ನೂಯಾವುದೇ ಸಮಸ್ಯೆಗಳಿಗೆ 24ಗಂಟೆಗಳಲ್ಲಿ ಶಾಶ್ವತ ಪರಿಹಾರ. ಪಂಡಿತ್.ಮಂಜುನಾಥ್‌ಭಟ್. 9900222591

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ

Classifieds
EDUCATION SPECIAL
SPECIAL RATES FOR • Admission Notice, Education Success • Congratulation Ads
For More Details Contact:
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

ನಿತೀಶ್ ನಿಲುವಿಗೆ ಪ್ರಾದೇಶಿಕ ಪಕ್ಷಗಳ ಬೆಂಬಲ, ಒಗ್ಗಟ್ಟಿನ ಜಪ

ಬಿಹಾರ ವಿದ್ಯಮಾನ: ವಿಪಕ್ಷಗಳಲ್ಲಿ ಸಂಚಲನ

ನವದೆಹಲಿ (ಪಿಟಿಐ): ಬಿಹಾರದಲ್ಲಿ ಎನ್‌ಡಿಎ ಮೈತ್ರಿಕೂಟ ಬಿಟ್ಟು ಹೊರಬಂದಿರುವ ನಿತೀಶ್ ಕುಮಾರ್ ಅವರು ಜಾತ್ಯತೀತ ಪಕ್ಷಗಳ ಮಹಾಮೈತ್ರಿಕೂಟವನ್ನು ಮತ್ತೆ ಸೇರಿದ್ದಾರೆ. ಇದು ಬಿಜೆಪಿ ಮತ್ತು ಎನ್‌ಡಿಎಯೇತರ ಪಕ್ಷಗಳಲ್ಲಿ ಒಗ್ಗಟ್ಟಿಗೆ ಹುರುಪು ತುಂಬಿದೆ. ನಿತೀಶ್ ಅವರ ನಿಲುವನ್ನು ಬೆಂಬಲಿಸಿರುವ ಹಲವು ಪಕ್ಷಗಳು ಒಗ್ಗಟ್ಟಿನ ಮಂತ್ರ ಜಪಿಸಿವೆ. 2024ರಲ್ಲಿ ಎದುರಾಗಲಿರುವ ಲೋಕಸಭಾ ಚುನಾವಣೆಗೆ ಬಿಜೆಪಿಯನ್ನು ಕಟ್ಟಿಹಾಕಲು ನಿತೀಶ್ ಅವರ ಈ ನಡೆಯಿಂದ ಶಕ್ತಿ ಬಂದಿದೆ ಎಂಬುದಾಗಿ ಪ್ರಾದೇಶಿಕಪಕ್ಷಗಳುಅಭಿಪ್ರಾಯಪಟ್ಟಿವೆ.

‘ಹಿಂಬಾಗಿಲ ರಾಜಕಾರಣಕ್ಕೆ ನಿತೀಶ್ ಬೀಗ’: ‘ಹಿಂಬಾಗಿಲ ರಾಜಕಾರಣ ಯುಗ’ಕ್ಕೆ ನಿತೀಶ್ ಕುಮಾರ್ ಅವರು ಸರಿಯಾದ ಪೆಟ್ಟು ನೀಡಿದ್ದಾರೆ ಎಂದು ತೆಲಂಗಾಣದ ಟಿಆರ್‌ಎಸ್ ಶಾಸಕಿ ಕೆ.ಕವಿತಾ ಹೇಳಿದ್ದಾರೆ.

‘ಬಿಹಾರದ ರಾಜಕೀಯದಲ್ಲಿ ಆಗಿರುವ ಬೆಳವಣಿಗೆಯು ಇಡೀ ದೇಶಕ್ಕೆ ಸಕಾರಾತ್ಮಕ ಬದಲಾವಣೆಯ ಸಂದೇಶ ರವಾನಿಸಿದೆ. ಬಿಹಾರ ಮತ್ತು ನಳಂದಾ ವಿಶ್ವವಿದ್ಯಾಲಯಗಳು ಇಡೀ ಪ್ರಪಂಚಕ್ಕೆ ದಾರಿಯನ್ನು ತೋರಿದ್ದವು. ಈಗ ದೇಶಕ್ಕೆ ಅಂತಹದ್ದೇ ಮಾರ್ಗ ಲಭ್ಯವಾಗುತ್ತಿದೆ. ಹಿಂಬಾಗಿಲ ರಾಜಕಾರಣವನ್ನು ಒಬ್ಬರಾದರೂ ತಡೆಯುತ್ತಾರೆ. ಅದಕ್ಕೆ ಬಿಹಾರ ನಾಂದಿ ಹಾಡಿದೆ’ ಎಂದು ಕವಿತಾ ವಿಶ್ಲೇಷಿಸಿದ್ದಾರೆ.



ಬಿಜೆಪಿ ಮುಖಂಡರಾದ ಸುಶೀಲ್ ಕುಮಾರ್ ಮೋದಿ, ಸಂಜಯ್ ಜೈಸ್ವಾಲ್, ರವಿಶಂಕರ್ ಪ್ರಸಾದ್ ಹಾಗೂ ಇತರರು ಪಟ್ನಾದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಬಿಜೆಪಿಯಿಂದ ಪ್ರಾದೇಶಿಕ ಪಕ್ಷಗಳಿಗೆ ಕುತ್ತು: ಪವಾರ್

ಪ್ರಾದೇಶಿಕ ಮಿತ್ರಪಕ್ಷಗಳನ್ನು ನಿಧಾನವಾಗಿ ಮುಗಿಸುವುದೇ ಬಿಜೆಪಿಯ ಉದ್ದೇಶವಾಗಿದೆ ಎಂದು ಆರೋಪಿಸಿರುವ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ಬಿಜೆಪಿ ಜೊತೆಗಿನ ಸಖ್ಯ ತೊರೆದು ಬಂದ ನಿತೀಶ್ ಕುಮಾರ್ ಅವರ ನಿಲುವನ್ನು ಬೆಂಬಲಿಸಿದ್ದಾರೆ.

‘ಬಿಜೆಪಿ ರೀತಿಯ ಸಿದ್ಧಾಂತ ಆಧರಿತ ಪಕ್ಷಗಳು ಭವಿಷ್ಯದಲ್ಲಿ ಉಳಿಯಲಿದ್ದು, ಕುಟುಂಬ ಆಧರಿತ ಪಕ್ಷಗಳು ನಿರ್ನಾಮವಾಗಲಿವೆ’ ಎಂಬುದಾಗಿ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಇತ್ತೀಚೆಗೆ ಹೇಳಿದ್ದರು. ‘ಪ್ರಾದೇಶಿಕ ಪಕ್ಷಗಳಿಗೆ ಭವಿಷ್ಯವಿಲ್ಲ. ಅವು ಅಸ್ತಿತ್ವದಲ್ಲಿರಬಾರದು ಎಂಬುದು ಬಿಜೆಪಿ ಅಧ್ಯಕ್ಷರ ನಿಲುವು. ಅವರ ಪಕ್ಷ ಮಾತ್ರ ಉಳಿಯಬೇಕು ಎಂಬುದು ಅವರ ಉದ್ದೇಶವಾಗಿದೆ. ಇದರರ್ಥ ಪ್ರಾದೇಶಿಕ ಪಕ್ಷಗಳನ್ನು ನಿಧಾನವಾಗಿ ಮುಗಿಸುವುದು ಬಿಜೆಪಿ ಉದ್ದೇಶ. ನಿತೀಶ್ ಸಹ ಇದನ್ನೇ ಆರೋಪಿಸಿದ್ದರು’ ಎಂದು ಪವಾರ್ ಹೇಳಿದರು.

ಸ್ಪೀಕರ್ ವಿರುದ್ಧ ಅವಿಶ್ವಾಸ (ಪಟ್ನಾ ವರದಿ): ನೂತನ ಆಡಳಿತಾರೂಢ ಮಹಾಮೈತ್ರಿಯು ಬಿಹಾರ ವಿಧಾನಸಭೆ ಸ್ಪೀಕರ್ ವಿಜಯಕುಮಾರ್ ಸಿನ್ಹಾ ವಿರುದ್ಧ ಬುಧವಾರ ಅವಿಶ್ವಾಸ ನಿರ್ಣಯ ಮಂಡಿಸಲು ಮುಂದಾಗಿದೆ ಎಂದು ಜೆಡಿಯುನ ಹಿರಿಯ ಮುಖಂಡ ತಿಳಿಸಿದ್ದಾರೆ.

ಮುಖ್ಯಮಂತ್ರಿಯಾಗಿ ನಿತೀಶ್ ಕುಮಾರ್ ಅವರು ಪ್ರಮಾಣ ಸ್ವೀಕರಿಸಿದ ಕೆಲವೇ ಗಂಟೆಗಳ ನಂತರ ಈ ನಿರ್ಣಯ ಕೈಗೊಳ್ಳಲಾಗಿದೆ. ಮಹಾಮೈತ್ರಿಯ ಅಂಗಪಕ್ಷಗಳ ಶಾಸಕರು ಸಹಿ ಮಾಡಿರುವ ನೋಟಿಸ್‌ಅನ್ನು ವಿಧಾನಸಭೆ ಸೆಕ್ರೆಟರಿಯೇಟ್‌ಗೆ ಸಲ್ಲಿಸಲಾಗಿದೆ ಎಂದೂ ತಿಳಿಸಿದ್ದಾರೆ.

ಬಿಹಾರ ಬೆಳವಣಿಗೆಯಿಂದ ಕಾಂಗ್ರೆಸ್‌ನಲ್ಲಿ ಉತ್ಸಾಹ ಗರಿಗೆದರಿದೆ. ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ಅನ್ನು ದೂರವಿರಿಸುವ ಯತ್ನ ಮಾಡಿದ ಹಾಗೂ ಮಹಾರಾಷ್ಟ್ರದಲ್ಲಿ ಪಕ್ಷಾಂತರಕ್ಕೆ ಪ್ರೋತ್ಸಾಹಿಸಿದ ಬಿಜೆಪಿಗೆ ಬಿಹಾರದ ಬೆಳವಣಿಗೆಯಿಂದ ಶಿಕ್ಷೆಯಾಗಿದೆ ಎಂದು ಬಿಹಾರ ಕಾಂಗ್ರೆಸ್ ಘಟಕದ ಉಸ್ತುವಾರಿ ಭಕ್ತ ಚರಣ್‌ದಾಸ್ ಅವರು ಅಭಿಪ್ರಾಯಪಟ್ಟಿದ್ದಾರೆ. ‘ಬಿಜೆಪಿ ಮುಕ್ತ ಬಿಹಾರ’ ಸಂದೇಶವನ್ನು ಜನರಿಗೆ ತಲುಪಿಸಲಾಗಿದೆ ಎಂದು ಅವರು ಹೇಳಿದ್ದಾರೆ.

‘ಸಣ್ಣ ಪಕ್ಷಗಳನ್ನು ನಿರ್ನಾಮ ಮಾಡುವುದು ಬಿಜೆಪಿ ಉದ್ದೇಶ. ದೇಶದಲ್ಲಿ ಕೇವಲ ಒಂದು ಪಕ್ಷವನ್ನು (ಬಿಜೆಪಿ) ಸ್ಥಾಪಿಸುವುದು ಅದರ ಗುರಿ. ಒಂದೇ ಬಣ್ಣ, ಒಂದೇ ಧರ್ಮ ಇರಬೇಕೆಂದು ಅದು ಬಯಸುತ್ತಿದೆ’ ಎಂದು ದಾಸ್ ಆರೋಪಿಸಿದ್ದಾರೆ.

> ನಿತೀಶ್ ಸಕಾಲದಲ್ಲಿ ಮಹಾಮೈತ್ರಿಕೂಟಕ್ಕೆ ಮರಳಿದ್ದಾರೆ. ಇದು ದೇಶದ ಜಾತ್ಯತೀತ ಹಾಗೂ ಪ್ರಜಾಪ್ರಭುತ್ವವಾದಿ ಪಕ್ಷಗಳ ಒಗ್ಗಟ್ಟಿಗೆ ಬಲ ತುಂಬಿದೆ
> **ಎಂ.ಕೆ.ಸ್ಟಾಲಿನ್**
> ತಮಿಳುನಾಡು ಮುಖ್ಯಮಂತ್ರಿ

> ಇದು ಕೇವಲ ಸರ್ಕಾರ ರಚನೆಗೆ ಸೀಮಿತವಾಗಬಾರದು. ಜಾತ್ಯತೀತ ಹಾಗೂ ಪ್ರಜಾಪ್ರಭುತ್ವವಾದಿ ಪಕ್ಷಗಳನ್ನು ಒಟ್ಟುಗೂಡಿಸುವ ನೈಜ ಆರಂಭಕ್ಕೆ ಇದು ಕಾರಣವಾಗಬೇಕು
> **ಮೆಹಬೂಬಾ ಮುಫ್ತಿ,** ಪಿಡಿಪಿ ಮುಖ್ಯಸ್ಥೆ

> ‘ಬಿಜೆಪಿಗೆ ದ್ರೋಹ ಬಗೆದರೆ ಸುಮ್ಮನೆ ಬಿಡುವುದಿಲ್ಲ’ ಎಂಬುದಾಗಿ ಬಿಜೆಪಿಯ ಸುಶೀಲ್ ಮೋದಿ ನೀಡಿದ್ದ ಹೇಳಿಕೆಯಿಂದ ಬಿಜೆಪಿ ನಿಜಬಣ್ಣ ಹೊರಬಂದಿದೆ
> **ಅಂಬಾದಾಸ್ ಧನ್ವೆ**
> ಶಿವಸೇನಾ (ಠಾಕ್ರೆ ಬಣ) ನಾಯಕ

> ಬಿಜೆಪಿ ಜೊತೆಗಿನ ಮೈತ್ರಿ ಹಿತಕರವಾಗಿ ಇರದ ಕಾರಣ ನಿತೀಶ್ ಹೊರಬಂದಿದ್ದಾರೆ. ಸದ್ಯದ ಬೆಳವಣಿಗೆಯು ಬಿಹಾರಕ್ಕೆ ಮಾತ್ರ ಸೀಮಿತವಾದುದು
> **ಪ್ರಶಾಂತ್ ಕಿಶೋರ್**
> ಚುನಾವಣಾ ತಂತ್ರ ನಿಪುಣ

ಉಪರಾಷ್ಟ್ರಪತಿ ಹುದ್ದೆ ಬಯಸಿದ್ದ ನಿತೀಶ್: ಸುಶೀಲ್ ಮೋದಿ

ಬಿಹಾರದಲ್ಲಿ ಬಿಜೆಪಿ ಮುಖಂಡರಿಂದ ಪ್ರತಿಭಟನೆ

ಪಟ್ನಾ, ದೆಹಲಿ (ಪಿಟಿಐ): ಬಿಜೆಪಿ ಜತೆಗಿನ ಮೈತ್ರಿ ತೊರೆದು, ಆರ್‌ಜೆಡಿ ಜೊತೆ ಮೈತ್ರಿ ಮಾಡಿಕೊಂಡ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ವಿರುದ್ಧ ಬಿಜೆಪಿ ವಾಗ್ದಾಳಿ ನಡೆಸಿದೆ. ಪಕ್ಷದ ಮುಖಂಡರು ಬುಧವಾರ ಪ್ರತಿಭಟನೆ ನಡೆಸಿ ಆಕ್ರೋಶ ಹೊರಹಾಕಿದ್ದಾರೆ.

‘ಜೆಡಿಯು ನಾಯಕ ನಿತೀಶ್ ಕುಮಾರ್ ಅವರು ಉಪರಾಷ್ಟ್ರಪತಿ ಹುದ್ದೆಗೇರುವ ಹಂಬಲ ಹೊಂದಿದ್ದರು. ಆದರೆ ಅವರ ಬೇಡಿಕೆಯನ್ನು ಬಿಜೆಪಿ ಒಪ್ಪಿಕೊಳ್ಳದ ಕಾರಣ, ಅವರು ಮೈತ್ರಿ ತೊರೆದಿದ್ದಾರೆ’ ಎಂದು ಬಿಜೆಪಿ ಮುಖಂಡ ಸುಶೀಲ್ ಕುಮಾರ್ ಮೋದಿ ಅವರು ಬುಧವಾರ ಆರೋಪಿಸಿದ್ದಾರೆ.

ಎನ್‌ಡಿಎ ಪರವಾಗಿ ಮತ ಚಲಾಯಿಸಿದ್ದ ಬಿಹಾರದ ಮತದಾರರಿಗೆ ನಿತೀಶ್ ಕುಮಾರ್ ದ್ರೋಹ ಎಸಗಿದ್ದಾರೆ ಎಂದಿರುವ ಸುಶೀಲ್ ಮೋದಿ, 2025ಕ್ಕೆ ಮುನ್ನವೇ ಬಿಹಾರ ಸರ್ಕಾರ ಮುರಿದುಬೀಳಲಿದೆ ಎಂದು ಹೇಳಿದ್ದಾರೆ. ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸುಶೀಲ್, ‘ನಿತೀಶ್ ಕುಮಾರ್ ಅವರು ಆರ್‌ಜೆಡಿ ವರಿಷ್ಠ ಲಾಲು ಪ್ರಸಾದ್ ಅವರ ಅನಾರೋಗ್ಯವನ್ನು ಬಳಸಿಕೊಂಡು, ಆ ಪಕ್ಷವನ್ನು ಒಡೆಯಲಿದ್ದಾರೆ’ ಎಂದು ಹೇಳಿದ್ದಾರೆ.

ಆರ್‌ಸಿಪಿ ಸಿಂಗ್ ಅವರ ಮೂಲಕ ಜೆಡಿಯು ಒಡೆಯಲು ಬಿಜೆಪಿ ಯತ್ನಿಸಿತ್ತು ಎಂಬ ಆರೋಪಗಳನ್ನು ಅಲ್ಲಗಳೆದಿರುವ ಅವರು, ನಿತೀಶ್ ಅವರ ಒಪ್ಪಿಗೆಯ ನಂತರವೇ ಆರ್‌ಸಿಪಿ ಅವರನ್ನು ಕೇಂದ್ರ ಸಂಪುಟಕ್ಕೆ ಸೇರಿಸಿಕೊಳ್ಳಲಾಗಿತ್ತು ಎಂದು ಸ್ಪಷ್ಟನೆ ನೀಡಿದ್ದಾರೆ.

ನಿತೀಶ್ ವಿರುದ್ಧ ಪ್ರತಿಭಟನೆ: ಮೈತ್ರಿಗೆ ದ್ರೋಹ ಬಗೆದಿದ್ದಾರೆ ಎಂದು ಆರೋಪಿಸಿ ನಿತೀಶ್ ವಿರುದ್ಧ ಬಿಜೆಪಿ ಮುಖಂಡರು ಪ್ರತಿಭಟನೆ ನಡೆಸಿದರು. ಪಟ್ನಾದ ಬಿಜೆಪಿ ಕೇಂದ್ರ ಕಚೇರಿಯಲ್ಲಿ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಪಕ್ಷದ ಶಾಸಕರು ಹಾಗೂ ಸಂಸದರು ಭಾಗಿಯಾಗಿದ್ದರು. ಮುಂದಿನ ದಿನಗಳಲ್ಲಿ ಜಿಲ್ಲಾ ಹಾಗೂ ಬ್ಲಾಕ್ ಮಟ್ಟದಲ್ಲೂ ಪ್ರತಿಭಟನೆ ಹಮ್ಮಿಕೊಳ್ಳಲು ಬಿಜೆಪಿ ನಿರ್ಧರಿಸಿದೆ.

> ನಿತೀಶ್ ಮೊದಲು ರಾಜ್ಯದಲ್ಲಿ ಸ್ವಂತ ಬಲದ ಸರ್ಕಾರ ರಚನೆ ಮಾಡಲಿ. ನಿತೀಶ್ ಅವರನ್ನು ಹಾವು ಎಂದು ಲಾಲು ಕರೆದಿದ್ದರು. ಈಗ ಅದೇ ಹಾವು ಲಾಲು ಮನೆ ಪ್ರವೇಶಿಸಿದೆ
> **ಗಿರಿರಾಜ್ ಸಿಂಗ್,** ಕೇಂದ್ರ ಸಚಿವ

‘ಸುಶೀಲ್ ಮೋದಿ ಸುಳ್ಳುಗಾರ’

ಸುಶೀಲ್ ಕುಮಾರ್ ಮೋದಿ ಮಹಾ ಸುಳ್ಳಗಾರ ಎಂದು ಜೆಡಿಯು ರಾಷ್ಟ್ರೀಯ ಅಧ್ಯಕ್ಷ ಲಲನ್ ಸಿಂಗ್ ಆರೋಪಿಸಿದ್ದಾರೆ. ನಿತೀಶ್ ಉಪರಾಷ್ಟ್ರಪತಿಯಾಗಲು ಬಯಸಿದ್ದರು ಎಂಬ ಸುಶೀಲ್ ಆರೋಪವನ್ನು ಅವರು ತಳ್ಳಿಹಾಕಿದ್ದಾರೆ. ‘ನಿತೀಶ್ ಕುಮಾರ್ ಜತೆ ನಿಕಟ ಸಂಬಂಧ ಹೊಂದಿದ್ದರು ಎಂಬ ಕಾರಣಕ್ಕೆ ಬಿಜೆಪಿಯು ಸುಶೀಲ್ ಅವರನ್ನು ಮೂಲೆಗುಂಪು ಮಾಡಿತ್ತು. ಈಗ ನಿತೀಶ್ ವಿರುದ್ಧ ಮಾತನಾಡಿ ವರಿಷ್ಠರ ವಿಶ್ವಾಸ ಮರುಗಳಿಸಲು ಯತ್ನಿಸುತ್ತಿದ್ದಾರೆ’ ಎಂದು ಲಲನ್ ಹೇಳಿದ್ದಾರೆ. ಸುಳ್ಳು ಹೇಳುವುದು ಸುಶೀಲ್ ಮೋದಿಗೆ ಅಭ್ಯಾಸವಾಗಿಬಿಟ್ಟಿದೆ ಎಂದು ಲಲನ್ ಆರೋಪಿಸಿದ್ದಾರೆ.

‘ಲಾಲು ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಪೊಲೀಸರ ತಮ್ಮ ಮೇಲೆ ಹಲ್ಲೆ ಮಾಡಿದರು ಎಂದು ಆರೋಪಿಸಿದ್ದ ಸುಶೀಲ್ ಮೋದಿ ಅವರು ತಲೆಗೆ ಬ್ಯಾಂಡೇಜು ಕಟ್ಟಿಕೊಂಡು ಬಂದಿದ್ದರು. ಗಾಯ ಎಷ್ಟಾಗಿದೆ ನೋಡೋಣ ಎಂದು ಲಾಲು ಕೇಳಿದಾಗ, ಬ್ಯಾಂಡೇಜು ತೆಗೆಯಲು ಅವರು ಒಪ್ಪಿರಲಿಲ್ಲ. ಅಸಲಿಗೆ ಅವರಿಗೆ ಗಾಯವೇ ಆಗಿರಲಿಲ್ಲ. ಸುಳ್ಳು ಹೇಳುವುದು ಸುಶೀಲ್ ಮೋದಿಗೆ ಅಭ್ಯಾಸವಾಗಿಬಿಟ್ಟಿದೆ’ ಎಂದು ಲಲನ್ ಆರೋಪಿಸಿದ್ದಾರೆ.

ನೂತನ ಸಿಜೆಐ ಲಲಿತ್ 27ಕ್ಕೆ ಪ್ರಮಾಣ



ನವದೆಹಲಿ (ಪಿಟಿಐ): ಭಾರತದ 49ನೇ ಮುಖ್ಯ ನ್ಯಾಯಮೂರ್ತಿಯಾಗಿ ಉದಯ್ ಉಮೇಶ್ ಲಲಿತ್ ಅವರ ನೇಮಕಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬುಧವಾರ ಅಂಕಿತ ಹಾಕಿದ್ದಾರೆ.

ಅವರು ಆ. 27 ರಂದು ಅಧಿಕಾರ ವಹಿಸಿಕೊಳ್ಳುವರು. ಅವರ ಅಧಿಕಾರಾವಧಿ ನವೆಂಬರ್ 8ಕ್ಕೆ ಅಂತ್ಯಗೊಳ್ಳಲಿದೆ ಎಂದು ಮೂಲಗಳು ಹೇಳಿವೆ.

ಬಾರ್ ಕೌನ್ಸಿಲ್‌ನಿಂದ ನೇರವಾಗಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಆಯ್ಕೆ ಆದ ಹೆಗ್ಗಳಿಕೆಗೆ ಉಮೇಶ್ ಲಲಿತ್ ಅವರು ಪಾತ್ರರಾಗಿದ್ದಾರೆ. 1971ರಲ್ಲಿ ಭಾರತದ 13ನೇ ಮುಖ್ಯ ನ್ಯಾಯಮೂರ್ತಿ ಆಗಿ ಆಯ್ಕೆಯಾದ ನ್ಯಾ. ಎಸ್.ಎಮ್. ಸಿಕ್ರಿ ಅವರು ಸುಪ್ರೀಂ ಕೋರ್ಟ್‌ಗೆ ನೇರವಾಗಿ ನೇಮಕಗೊಂಡ ಮೊದಲ ನ್ಯಾಯಮೂರ್ತಿ ಆಗಿದ್ದಾರೆ. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ನಿವೃತ್ತಿಯ ವಯಸ್ಸು 65 ಆಗಿದೆ.

ಸಂಕ್ಷಿಪ್ತ ಸುದ್ದಿ

ಮೂವರು ಎಲ್‌ಇಟಿ ಉಗ್ರರ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಬಡ್ಗಾಂ ಜಿಲ್ಲೆಯಲ್ಲಿ, ರಾಹುಲ್ ಭಟ್ ಹಾಗೂ ಟಿ.ವಿ. ಕಲಾವಿದೆ ಅಮ್ರೀನ್ ಭಟ್ ಅವರ ಹತ್ಯೆಗೆ ಕಾರಣವಾಗಿದ್ದ ಲಷ್ಕರ್-ಎ-ತಯಬಾ ಸಂಘಟನೆಯ ಭಯೋತ್ಪಾದಕ ಲತೀಫ್ ರಾಥರ್ ಸೇರಿದಂತೆ ಮೂವರು ಉಗ್ರರು ಬುಧವಾರ ಎಕ್‌ಕೌಂಟರ್‌ನಲ್ಲಿ ಹತರಾಗಿದ್ದಾರೆ.

‘ಬಡ್ಗಾಂನ ಖಾನ್‌ಸಾಹಿಬ್ ಪ್ರದೇಶದ ವಾಟರ್‌ಹೇಲ್‌ನಲ್ಲಿ ಭಯೋತ್ಪಾದಕರ ಇರುವಿಕೆಯ ಬಗ್ಗೆ ಖಚಿತ ಮಾಹಿತಿ ದೊರೆತ ನಂತರ ಭದ್ರತಾ ಪಡೆಗಳು ಶೋಧ ಕಾರ್ಯಾಚರಣೆ ಪ್ರಾರಂಭಿಸಿದ್ದವು. ಈ ವೇಳೆ ಉಗ್ರರು ಪಡೆಗಳ ಮೇಲೆ ಗುಂಡು ಹಾರಿಸಿದ್ದರಿಂದ ಶೋಧ ಕಾರ್ಯಾಚರಣೆ ಎನ್‌ಕೌಂಟರ್ ಆಗಿ ಮಾರ್ಪಟ್ಟಿತು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಪ್ರಿಯಾಂಕಾ ಗಾಂಧಿಗೆ ಕೋವಿಡ್

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರಿಗೆ ಮತ್ತೊಮ್ಮೆ ಕೋವಿಡ್ ತಗುಲಿರುವುದು ಖಚಿತವಾಗಿದ್ದು, ಮನೆಯಲ್ಲಿ ಪ್ರತ್ಯೇಕ ವಾಸದಲ್ಲಿದ್ದಾರೆ.

ಪ್ರಿಯಾಂಕಾ ಸೇರಿದಂತೆ ಪಕ್ಷದ ಇತರೆ ನಾಯಕರಿಗೆ ಸೋಂಕು ತಗುಲಿರುವುದರಿಂದ ಮುನ್ನೆಚ್ಚರಿಕೆಯಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ರಾಜಸ್ಥಾನ ಪ್ರವಾಸ ರದ್ದುಗೊಳಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪುಲ್ವಾಮಾ: ಸುಧಾರಿತ ಸ್ಫೋಟಕ ಪತ್ತೆ

ಶ್ರೀನಗರ (ಪಿಟಿಐ): ಜಮ್ಮು-ಕಾಶ್ಮೀರದ ಪುಲ್ವಾಮಾ ಜಿಲ್ಲೆಯಲ್ಲಿ ಭಾರಿ ಪ್ರಮಾಣದ ಸುಧಾರಿತ ಸ್ಫೋಟಕವನ್ನು (ಐಇಡಿ) ಬುಧವಾರ ಭದ್ರತಾಪಡೆ ಪತ್ತೆ ಮಾಡಿದೆ. ಈ ಮೂಲಕ ದೊಡ್ಡ ಅನಾಹುತವೊಂದನ್ನು ತಪ್ಪಿಸಿದೆ.

‘ಇಲ್ಲಿನ ತಹಾಬ್ ಕ್ರಾಸಿಂಗ್ ಬಳಿಕ ಅಂದಾಜು 25ರಿಂದ 30 ಕೆ.ಜಿ ತೂಕದ ಸ್ಫೋಟಕವನ್ನು ಪೊಲೀಸ್ ಮತ್ತು ಭದ್ರತಾ ಪಡೆ ಪತ್ತೆ ಮಾಡಿದೆ’ ಎಂದು ಕಾಶ್ಮೀರ ವಲಯ ಪೊಲೀಸ್ ಟ್ವೀಟ್ ಮಾಡಿದೆ.

‘ಬುಧವಾರ ಮುಂಜಾನೆ ಸ್ಫೋಟಕ ಪತ್ತೆಯಾಗಿತ್ತು. ಕೂಡಲೇ ಬಾಂಬ್ ನಿಷ್ಕ್ರಿಯ ದಳ ಸ್ಥಳಕ್ಕೆ ಧಾವಿಸಿ ಸ್ಫೋಟಕವನ್ನು ನಿಷ್ಕ್ರಿಯಗೊಳಿಸಿತು. ಕೆಲ ಕಾಲ ರಸ್ತೆಯಲ್ಲಿ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿತ್ತು.’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

2024ರ ಅಂತ್ಯದವರೆಗೆ ಪಿಎಂಎವೈ–ಯು ಮುಂದುವರಿಕೆ

ನವದೆಹಲಿ: ಪ್ರಧಾನ ಮಂತ್ರಿ ಆವಾಸ್ ಯೋಜನೆ(ನಗರ)ಯನ್ನು (ಪಿಎಂಎವೈ–ಯು) 2024ರ ಡಿಸೆಂಬರ್ 31ರ ವರೆಗೆ ಮುಂದುವರಿಸಲು ಕೇಂದ್ರ ಸರ್ಕಾರ ಬುಧವಾರ ನಿರ್ಧರಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಕೈಗೊಳ್ಳಲಾಗಿದೆ. ಕಳೆದ ಮಾರ್ಚ್ 31ಕ್ಕೆ ಅಂತ್ಯಗೊಂಡ ಅವಧಿಯಲ್ಲಿ ಒಟ್ಟು 122.69 ಲಕ್ಷ ಮನೆಗಳಿಗೆ ಮಂಜೂರಾತಿ ನೀಡಲಾಗಿದೆ. ಈ ಮನೆಗಳನ್ನು ಪೂರ್ಣಗೊಳಿಸಲು ಹಣಕಾಸು ನೆರವು ನೀಡಲು ಸಹ ಸಭೆ ನಿರ್ಧರಿಸಿದೆ ಎಂದು ಕೇಂದ್ರ ವಸತಿ ಹಾಗೂ ನಗರಾಭಿವೃದ್ಧಿ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಈ ಯೋಜನೆಯ ಅವಧಿಯನ್ನು ವಿಸ್ತರಿಸುವಂತೆ ಹಲವು ರಾಜ್ಯಗಳು ಮನವಿ ಮಾಡಿದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಈ ತೀರ್ಮಾನ ಕೈಗೊಂಡಿದೆ.

ಸಿಬಿಐನಿಂದ ಇಬ್ಬರ ಬಂಧನ

ಕೋಲ್ಕತ್ತ (ಪಿಟಿಐ): ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ನೇಮಕಾತಿ ಹಗರಣಕ್ಕೆ ಸಂಬಂಧಿಸಿ ಪಶ್ಚಿಮ ಬಂಗಾಳ ಶಾಲೆ ಸೇವಾ ಆಯೋಗದ (ಎಸ್‌ಎಸ್‌ಸಿ) ಇಬ್ಬರು ಮಾಜಿ ಅಧಿಕಾರಿಗಳನ್ನು ಸಿಬಿಐ ಅಧಿಕಾರಿಗಳು ಬುಧವಾರ ಬಂಧಿಸಿದ್ದಾರೆ.

ಎಸ್‌ಎಸ್‌ಸಿಯ ಮಾಜಿ ಸಲಹೆಗಾರ ಡಾ.ಶಾಂತಿಪ್ರಸಾದ್ ಸಿನ್ಹಾ ಹಾಗೂ ಮಾಜಿ ಕಾರ್ಯದರ್ಶಿ ಅಶೋಕಕುಮಾರ್ ಸಹಾ ಬಂಧಿತರು. ಶಾಲಾ ಸಿಬ್ಬಂದಿ ನೇಮಕಾತಿ ಹಗರಣಕ್ಕೆ ಸಂಬಂಧಿಸಿ ಸಿಬಿಐ ಮಾಡಿರುವ ಮೊದಲ ಬಂಧನ ಇದಾಗಿದೆ.

ಅರೆನಿದ್ರಾವಸ್ಥೆ ಸ್ಥಿತಿ ಗುರುತಿಸಲು ವ್ಯವಸ್ಥೆ

ನವದೆಹಲಿ: ಚಾಲಕರ ತಪ್ಪಿನಿಂದಾಗಿ ಸಂಭವಿಸುವ ರಸ್ತೆ ಅಪಘಾತಗಳನ್ನು ತಗ್ಗಿಸುವ ಉದ್ದೇಶದಿಂದ, ಚಾಲಕರ ಅರೆನಿದ್ರಾವಸ್ಥೆ ಹಾಗೂ ಜಾಗರೂಕ ಸ್ಥಿತಿಯನ್ನು ಗುರುತಿಸಿ, ಪರಿಹಾರ ಕಂಡುಕೊಳ್ಳಲು ವ್ಯವಸ್ಥೆಯನ್ನು ರೂಪಿಸಲು ಕೇಂದ್ರ ಭೂಸಾರಿಗೆ ಸಚಿವಾಲಯ ಮುಂದಾಗಿದ್ದು ಸಮಿತಿ ರಚಿಸಲು ನಿರ್ಧರಿಸಿದೆ.

‘ಆಟೊಮೋಟಿವ್ ಇಂಡಸ್ಟ್ರಿ ಸ್ಟ್ಯಾಂಡರ್ಡ್ ಕಮಿಟಿ’ಯನ್ನು (ಎಐಎಸ್‌ಸಿ) ರಚಿಸಲಾಗುತ್ತಿದೆ ಎಂದು ಸಾರಿಗೆ ಮತ್ತು ಪ್ರವಾಸೋದ್ಯಮದ ಮೇಲಿನ ಸಂಸದೀಯ ಸಮಿತಿಗೆ ಸಚಿವಾಲಯ ತಿಳಿಸಿದೆ. ‘ಗುಣಮಟ್ಟದ ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸಲಾಗಿದ್ದರೂ, ಪದೇಪದೇ ಸಂಭವಿಸುತ್ತಿರುವ ಅಪಘಾತಗಳಿಂದಾಗಿ ರಸ್ತೆಗಳಿಗೆ ಕೆಟ್ಟ ಹೆಸರು ಬರುವಂತಾಗಿದೆ’ ಎಂದೂ ಸಮಿತಿ ತನ್ನ ವರದಿಯಲ್ಲಿ ವಿವರಿಸಿದೆ.

ಮಾಟ–ಮಂತ್ರದಿಂದ ವಿಶ್ವಾಸ ಗಳಿಸಲು ಸಾಧ್ಯವಿಲ್ಲ: ಮೋದಿ

ಪಾನಿಪತ್, ಹರಿಯಾಣ (ಪಿಟಿಐ): ‘ಮಾಟ–ಮಂತ್ರದಂತಹ ತಂತ್ರಗಳಲ್ಲಿ ನಂಬಿಕೆಯುಳ್ಳವರು ಎಂದಿಗೂ ಜನರ ವಿಶ್ವಾಸವನ್ನು ಗಳಿಸಲು ಸಾಧ್ಯ ಇಲ್ಲ’ ಎಂದು ಹೇಳುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ಕಾಂಗ್ರೆಸ್ ವಿರುದ್ಧ ಬುಧವಾರ ವಾಗ್ದಾಳಿ ನಡೆಸಿದರು.

₹ 900 ಕೋಟಿ ವೆಚ್ಚದಲ್ಲಿ ಇಲ್ಲಿ ನಿರ್ಮಿಸಿರುವ, ಎರಡನೇ ಎಥೆನಾಲ್ ಉತ್ಪಾದನಾ ಘಟಕವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿದರು.

ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಕಪ್ಪು ಬಟ್ಟೆ ಧರಿಸಿ ಆ.5ರಂದು ದೇಶದಾದ್ಯಂತ ಪ್ರತಿಭಟನೆ ನಡೆಸಿದ್ದರು. ಈ ಪ್ರತಿಭಟನೆಯನ್ನು ಪ್ರಸ್ತಾಪಿಸಿದ ಅವರು, ‘ಕಪ್ಪು ಬಟ್ಟೆಗಳನ್ನು ಧರಿಸಿದರೆ ಸಾಕು ತಮ್ಮ ಕೆಟ್ಟ ದಿನಗಳು ಕೊನೆಯಾಗುತ್ತವೆ ಎಂದು ಕೆಲವರು ಭಾವಿಸಿದ್ದಾರೆ. ಆದರೆ, ಮಾಟ–ಮಂತ್ರ, ವಾಮಾಚಾರದಂತಹ ಕೃತ್ಯಗಳಿಗೆ, ಮೌಢ್ಯಗಳಿಗೆ ಮೊರೆ ಹೋಗುವುದರಿಂದ ಜನರ ವಿಶ್ವಾಸವನ್ನು ಗಳಿಸಲು ಸಾಧ್ಯ ಇಲ್ಲ ಎಂಬುದು ಅವರಿಗೆ ಗೊತ್ತಿಲ್ಲ’ ಎಂದು ಹೇಳಿದರು.

ಉಚಿತ ಸೌಲಭ್ಯಗಳನ್ನು ನೀಡುತ್ತಿರುವ ವಿರೋಧ ಪಕ್ಷಗಳ ವಿರುದ್ಧ ಚಾಟಿ ಬೀಸಿದ ಅವರು, ‘ಉಚಿತವಾಗಿ ವಿವಿಧ ಸೌಲಭ್ಯಗಳನ್ನು ನೀಡುವಂತಹ ರಾಜಕಾರಣದಿಂದ ದೇಶಕ್ಕೆ ಹಾನಿಯೇ ಹೆಚ್ಚು. ಅಂಥ ಕ್ರಮಗಳು ನೂತನ ತಂತ್ರಜ್ಞಾನ ಕ್ಷೇತ್ರದಲ್ಲಿ ಹೂಡಿಕೆಗೆ ಅಡ್ಡಿಯನ್ನುಂಟು ಮಾಡುತ್ತದೆ’ ಎಂದು ಹೇಳಿದರು.

ಕೋರ್ಬೆವ್ಯಾಕ್ಸ್‌ಗೆ ಕೇಂದ್ರ ಸರ್ಕಾರ ಅನುಮೋದನೆ

ನವದೆಹಲಿ (ಪಿಟಿಐ): 18 ವರ್ಷ ಮೇಲ್ಪಟ್ಟವರ ಪೈಕಿ ಕೋವಿಶೀಲ್ಡ್ ಅಥವಾ ಕೋವ್ಯಾಕ್ಸಿನ್ ಲಸಿಕೆಯ ಎರಡು ಡೋಸ್‌ಗಳನ್ನೂ ಪಡೆದುಕೊಂಡಿರುವವರಿಗೆ ಮುನ್ನೆಚ್ಚರಿಕೆ ಡೋಸ್ ಆಗಿ ಕೋರ್ಬೆವ್ಯಾಕ್ಸ್ ನೀಡಲು ಕೇಂದ್ರ ಅನುಮೋದನೆ ನೀಡಿದೆ ಎಂದು ಬುಧವಾರ ಅಧಿಕಾರಿಗಳು ತಿಳಿಸಿದ್ದಾರೆ.

ಸದ್ಯ 12 ರಿಂದ 14 ವರ್ಷದವರಿಗೆ ಇದನ್ನು ನೀಡಲಾಗುತ್ತಿದೆ.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಮಿಸಳ್ ಹಾಪ್ಚಾ
ಹುಲಿ ವೇಷ ವೈಶಿಷ್ಟ್ಯ
ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಫುಟ್‌ಬಾಲ್: ಈಗಲ್ಸ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಈಗಲ್ಸ್ ಫುಟ್‌ಬಾಲ್ ಕ್ಲಬ್ ತಂಡವು, ಸಿ. ಪುಟ್ಟಯ್ಯ ಸ್ಮಾರಕ ಲೀಗ್ ಟ್ರೋಫಿಗಾಗಿ ನಡೆಯುತ್ತಿರುವ ಬಿಡಿಎಫ್‌ಎ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು.

ಬುಧವಾರ ನಡೆದ ‘ಎ’ ವಲಯದ ಪಂದ್ಯದಲ್ಲಿ ಬೆಂಗಳೂರು ಈಗಲ್ಸ್ 2–1ರಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ಎದುರು ಗೆದ್ದಿತು. ವಿಜೇತ ತಂಡದ ಪರ ಬ್ರಿಟ್ಟೊ ಕಾರ್ಲೋಸ್ 55ನೇ ನಿಮಿಷ ಮತ್ತು ಪರಿಕ್ರಮ ಬೋರಾ 76ನೇ ನಿಮಿಷ ಗೋಲು ದಾಖಲಿಸಿದರು. ಡ್ರೀಮ್ ಪರ ಸಚ್ಚಿದಾನಂದ ಎಸ್. (75ನೇ ನಿ.) ಗೋಲು ಹೊಡೆದರು.

ಮತ್ತೊಂದು ಪಂದ್ಯದಲ್ಲಿ ಎಎಸ್‌ಸಿ ಆ್ಯಂಡ್ ಸೆಂಟರ್ ಎಫ್‌ಸಿ 1–0ಯಿಂದ ಎಂಇಜಿ ಸೆಂಟರ್ ಎದುರು ಗೆದ್ದಿತು. ತಂಡದ ಪರ ವಾಹೆಂಗಮ್ ನೀರಜ್ ಸಿಂಗ್ (77ನೇ ನಿ.) ಕಾಲ್ಚಳಕ ತೋರಿದರು.

ಗುರುವಾರ ನಡೆಯುವ ‘ಬಿ’ ವಲಯದ ಪಂದ್ಯಗಳಲ್ಲಿ ಕಿಕ್‌ಸ್ಟಾರ್ಟ್ ಎಫ್‌ಸಿ ರೂಟ್ಸ್ ಎಫ್‌ಸಿ, ಜೆಎಸ್‌ಡಬ್ಲ್ಯು ಬೆಂಗಳೂರು– ಕೊಡಗು ಎಫ್‌ಸಿ ಸೆಣಸಲಿವೆ.



ಬೆಂಗಳೂರು ಡ್ರೀಮ್ ಯುನೈಟೆಡ್‌ನ ಸಚ್ಚಿದಾನಂದ ಎಸ್. (ಎಡ) ಮತ್ತು ಬೆಂಗಳೂರು ಈಗಲ್ಸ್ ತಂಡದ ಲಾಯಿಥೊಂಜಮ್ ಸನತೊಯಿ ಸಿಂಗ್ ನಡುವೆ ಚೆಂಡಿಗಾಗಿ ಪೈಪೋಟಿ– ಪ್ರಜಾವಾಣಿ ಚಿತ್ರ/ ಬಿ.ಎಚ್.ಶಿವಕುಮಾರ್

ಬ್ಯಾಸ್ಕೆಟ್‌ಬಾಲ್: ಮಿಂಚಿದ ಮಿಲಿಂದ್; ಪಿಪಿಸಿಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಿಲಿಂದ್ ದಾಖಲಿಸಿದ 31 ಪಾಯಿಂಟ್‌ಗಳ ಬಲದಿಂದ ಪೀಪಲ್ಸ್ ಪ್ಲೇಯರ್ಸ್ ಕ್ಲಬ್ (ಪಿಪಿಸಿ) ಜಯನಗರ ತಂಡವು ರಾಜ್ಯ 16 ವರ್ಷದೊಳಗಿನವರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಭರ್ಜರಿ ಜಯ ದಾಖಲಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಬಾಲಕರ ವಿಭಾಗದ ಪಂದ್ಯದಲ್ಲಿ ಪಿಪಿಸಿ 93–14ರಿಂದ ಎಸ್. ಬ್ಲ್ಯೂಸ್ ತಂಡವನ್ನು ಪರಾಭವಗೊಳಿಸಿತು. ವಿಜೇತ ತಂಡದ ವರುಣ್ 13 ಪಾಯಿಂಟ್ಸ್ ಕಲೆಹಾಕಿದರು.

ಬಾಲಕರ ವಿಭಾಗದ ಇನ್ನುಳಿದ ಪಂದ್ಯಗಳಲ್ಲಿ ಎಂ.ಎನ್.ಕೆ. ರಾವ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು 63–24ರಿಂದ ವಿಜಯನಗರ ಬಿ.ಸಿ. ಮೈಸೂರು ಎದುರು, ವಿಎನ್‌ಎಸ್‌ಸಿ 66–35ರಿಂದ ಸಾಯ್ ಧಾರವಾಡ ಎದುರು, ಕೋರಮಂಗಲ ಎಸ್‌ಸಿ 54–25ರಿಂದ ಮೈಸೂರು ಬಿ.ಸಿ. ವಿರುದ್ಧ, ಎಂಸಿಎಚ್‌ಎಸ್ 51–34ರಿಂದ ದೇವಾಂಗ ಯೂನಿಯನ್ ಎದುರು, ಬಿಸಿ. ಬಿಸಿ 58–31ರಿಂದ ನ್ಯಾಷನಲ್ಸ್ ಬಿ.ಸಿ. ಮೈಸೂರು ಎದುರು, ವಿವೇಕ್ ಎಸ್‌ಸಿ 59–38ರಿಂದ ಪಟ್ಟಾಭಿರಾಮ ಎಸ್‌ಸಿ ಎದುರು, ಬೀಗಲ್ಸ್ 49–14ರಿಂದ ಮರ್ಚಂಟ್ಸ್ ದಾವಣಗೆರೆ ಎದುರು ಗೆಲುವು ಸಾಧಿಸಿದವು.

ಬಾಲಕಿಯರ ವಿಭಾಗದ ಹಣಾಹಣಿಗಳಲ್ಲಿ ಆರ್ಯನ್ಸ್ ಮೈಸೂರು 34–18ರಿಂದ ಹಲಸೂರು ಎದುರು, ಜೆಎಸ್‌ಸಿ 53–39ರಿಂದ ಭಾರತ್ ಎಸ್‌ಯು ವಿರುದ್ಧ, ಎಂ.ಎನ್.ಕೆ. ರಾವ್ 28– 15ರಿಂದ ಡಿವೈಇಎಸ್ ವಿದ್ಯಾನಗರ ಎದುರು, ಡಿವೈಇಎಸ್ ವಿಜಯಪುರ 64–23ರಿಂದ ಯಂಗ್ ಆರಿಯನ್ಸ್ ಎದುರು, ಬೀಗಲ್ಸ್ 34–18ರಿಂದ ಆರಿಯನ್ಸ್ ಎಸ್‌ಸಿ ಎದುರು, ಡಿವೈಇಎಸ್ ಮಂಡ್ಯ 29–13ರಿಂದ ನ್ಯಾಷನಲ್ಸ್ ಮೈಸೂರು ಎದುರು ಜಯ ಸಾಧಿಸಿದವು.

ಗಾಲ್ಫ್: ಪ್ರಶಸ್ತಿ ಮೇಲೆ ಅದಿತಿ, ದೀಕ್ಷಾ ಕಣ್ಣು

ಗ್ಯಾಲ್ಗರ್ಮ್, ನಾರ್ದರ್ನ್ ಐರ್ಲೆಂಡ್ (ಪಿಟಿಐ): ಭಾರತದ ಅದಿತಿ ಅಶೋಕ್, ದೀಕ್ಷಾ ಡಾಗರ್ ಮತ್ತು ತ್ವೇಷಾ ಮಲಿಕ್ ಅವರು ಗುರುವಾರ ಇಲ್ಲಿ ಆರಂಭವಾಗುವ ನಾರ್ದರ್ನ್ ಐರ್ಲೆಂಡ್ ಓಪನ್ ಗಾಲ್ಫ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದು, ಉತ್ತಮ ಪ್ರದರ್ಶನ ತೋರುವ ನಿರೀಕ್ಷೆಯಲ್ಲಿದ್ದಾರೆ.

ಟೂರ್ನಿಯ ಹಾಲಿ ಚಾಂಪಿಯನ್ ಆಗಿರುವ ಥಾಯ್ಲೆಂಡ್‌ನ ಪಾಜರಿ ಅನ್ನಾನರುಕರ್ನ್ ಕೂಡ ಇಲ್ಲಿ ಆಡಲಿದ್ದು ಪ್ರಶಸ್ತಿ ಉಳಿಸಿಕೊಳ್ಳುವ ವಿಶ್ವಾಸದಲ್ಲಿದ್ದಾರೆ.

ಬೆಂಗಳೂರು ರೇಸ್

ಪಾಲಿಶ್ಡ್ ಗರ್ಲ್ ಗೆಲ್ಲುವ ನಿರೀಕ್ಷೆ

ಬೆಂಗಳೂರು ಸಮ್ಮರ್ ಮಿಲಿಯನ್ ಗುರುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪಾಲಿಶ್ಡ್ ಗರ್ಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಟೈಗರ್ ರಿಟರ್ನ್ಸ್ 2, ಏರ್ ಡಿಸ್ಪ್ಲೆ 1, ಬೆಳ್ಳಿ ದೀಪ 3
2ನೇ ರೇಸ್: ಮೈ ಸಾಲಿಟೇರ್ 10, ಮಂಡೇಲಾ 2, ಫೈರ್‌ಫಿಂಚ್ 9
3ನೇ ರೇಸ್: ಪಿಂಕ್ ಜಾಸ್ಮೈನ್ 5, ಡಿವೈನ್ ರೇ 1, ಕೇಪಬಲ್ 3
4ನೇ ರೇಸ್: ಸ್ಟಾರ್ ಅಡ್ಮಿರಲ್ 9, ಟ್ರಿಪಿಟಾಕ 12, ಎಂಪೈರ್ ಆಫ್ ಡ್ರೀಮ್ಸ್ 2
5ನೇ ರೇಸ್: ಡಿ ವಿಲ್ಲಿಯರ್ಸ್ 1, ಟ್ಯಾಕ್ಟಿಕಲ್ ಕಮಾಂಡ್ 3, ಥೌಸಂಡ್ ವರ್ಡ್ಸ್ 6
6ನೇ ರೇಸ್: ಪಾಲಿಶ್ಡ್ ಗರ್ಲ್ 2, ರಾವಿಶಿಂಗ್ ಫಾರ್ಮ್ 1, ಮಿರರ್ 5
7ನೇ ರೇಸ್: ಇನ್‌ಹೆರಿಟರ್ 5, ಅಜ್ಟೆಕ್ ಕ್ವೀನ್ 1, ಜನರಲ್ ಪ್ಯಾಟನ್ 2
8ನೇ ರೇಸ್: ಡೊಮಿನ 2, ಡೆಬೊನೇರ್ 1, ಲೇಡಿ ಸುಪ್ರೆಮೊಸ್ 6
9ನೇ ರೇಸ್: ಶೀಆಸ್ ಆಲ್ ಕ್ಲಾಸ್ 4, ಫೋವಿಯಲ್ ವಿಶನ್ 5, ಫಿನಿಕ್ಸ್ ಸಪ್ರೈಸ್ 10.

ಉತ್ತಮ ಬೆಟ್: ಮೈ ಸಾಲಿಟೇರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	1,2,3	4,5,6	4,5,6

ವುಷು: ಚಿನ್ನ ಜಯಿಸಿದ ಪ್ರಿಯಾಂಕಾ

ನವದೆಹಲಿ (ಪಿಟಿಐ): ಭಾರತದ ಪ್ರಿಯಾಂಕಾ ಕೇವಾಟ್ ಅವರು ಜಾರ್ಜಿಯಾದ ಬಾಟುಮಿಯಲ್ಲಿ ನಡೆದ 18 ವರ್ಷದೊಳಗಿನವರ ಅಂತರರಾಷ್ಟ್ರೀಯ ವುಷು ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಜಯಿಸಿದ್ದಾರೆ.

ಬಡುಕುಟುಂಬದ ಹುಡುಗಿ ಪ್ರಿಯಾಂಕಾ ಮಧ್ಯಪ್ರದೇಶದ ಸಿಧಿ ಜಿಲ್ಲೆಯವರು. ಆರಂಭದಲ್ಲಿ ಮಣಿಂದ್ ಶೇರ್ ಅಲಿಖಾನ್ ಅವರ ಬಳಿ ತರಬೇತಿ ಪಡೆದ್ದ ಪ್ರಿಯಾಂಕಾ, ಅವರಿಗೆ ಸದ್ಯ, ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ರತ್ನೇಶ್ ಠಾಕೂರ್, ಕಲ್ಯಾಣಿ ಮತ್ತು ಸಾರಿಕಾ ಗುಪ್ತಾ ಅವರು ಮಾರ್ಗದರ್ಶನ ಮಾಡುತ್ತಿದ್ದಾರೆ.

ಟಿ20: ತಂಡಗಳ ಹೆಸರು ಪ್ರಕಟ


ಮುಂಬೈ (ಪಿಟಿಐ): ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಟಿ20 ಮತ್ತು ದಕ್ಷಿಣ ಆಫ್ರಿಕಾ ಟಿ20 ಲೀಗ್‌ಗಳಿಗೆ ತನ್ನ ತಂಡಗಳ ಹೆಸರನ್ನು ಮುಂಬೈ ಇಂಡಿಯನ್ಸ್ ಫ್ರಾಂಚೈಸ್ ಪ್ರಕಟಿಸಿದೆ. ಎರಡೂ ತಂಡಗಳನ್ನು ಕ್ರಮವಾಗಿ ಎಂಐ ಎಮಿರೇಟ್ಸ್ ಮತ್ತು ಎಂಐ ಕೇಪ್‌ಟೌನ್ ಎಂದು ಹೆಸರಿಸಿದೆ.

ರಿಲಯನ್ಸ್ ಇಂಡಸ್ಟ್ರೀಸ್‌ನ ನಿರ್ದೇಶಕಿ ನೀತಾ ಎಂ. ಅಂಬಾನಿ ಅವರು ಬುಧವಾರ ಪ್ರಕಟಣೆಯಲ್ಲಿ ಈ ವಿಷಯ ತಿಳಿಸಿದ್ದಾರೆ.




ಭಾರತದ ಏರಿಳಿತಗಳು
ಕಾಮನ್‌ವೆಲ್ತ್ ಕ್ರೀಡಾಕೂಟ

ನವದೆಹಲಿಯಲ್ಲಿ 2010ರಲ್ಲಿ ನಡೆದಿದ್ದ ಕಾಮನ್‌ವೆಲ್ತ್ ಕೂಟದಲ್ಲಿ ಭಾರತದ ಕ್ರೀಡಾಪಟುಗಳು ಪದಕ ಗಳಿಕೆಯಲ್ಲಿ ಶತಕ ಸಾಧನೆ ಮಾಡಿದ್ದರು. ತವರಿನ ಅಭಿಮಾನಿಗಳ ಮುಂದೆ ಹುಮ್ಮಸ್ಸಿನಿಂದ ಸ್ಪರ್ಧಿಸಿದ್ದ ಅಥ್ಲೀಟ್‌ಗಳು ಮಿಂಚಿದ್ದರು. ಅದರ ನಂತರದ 3 ಕೂಟಗಳೂ ವಿದೇಶಗಳಲ್ಲಿಯೇ ಆಯೋಜನೆಗೊಂಡವು. ಈ ಕೂಟಗಳಲ್ಲಿ ನೂರರ ಗಡಿ ಮುಟ್ಟುವಲ್ಲಿ ಭಾರತದ ಆಟಗಾರರು ಸಫಲರಾಗಿಲ್ಲ. ಆದರೆ, ಅಲ್ಲಿಯ ವಾತಾವರಣಕ್ಕೆ ಹೊಂದಿಕೊಂಡು 60ಕ್ಕಿಂತ ಹೆಚ್ಚು ಪದಕಗಳನ್ನು ಗಳಿಸಿದ್ದಾರೆ. 2018ರಲ್ಲಿ ತಂಡ, 66 ಪದಕ ಗಳಿಸಿತ್ತು. ಆದರೆ ಈ ಬಾರಿ 61 ಗಳಿಸಿದೆ. ಇದನ್ನು ಕಡಿಮೆ ಎನ್ನಲಾಗದು. ಹೆಚ್ಚು ಪದಕಗಳ ಕಾಣಿಕೆ ನೀಡುತ್ತಿದ್ದ ಶೂಟಿಂಗ್ ಈ ಬಾರಿ ಇರಲಿಲ್ಲ. 'ಚಿನ್ನದ ಹುಡುಗ' ನೀರಜ್ ಚೋಪ್ರಾ ಕೂಡ ಸ್ಪರ್ಧೆಯಲ್ಲಿರಲಿಲ್ಲ. ಆದರೆ ಖ್ಯಾತನಾಮರಾದ ಮೇರಿ ಕೋಮ್, ವಿಕಾಸ್ ಗೌಡ, ಸೈನಾ ನೆಹ್ವಾಲ್ ಅವರ ಸ್ಥಾನವನ್ನು ತುಂಬಬಲ್ಲವರು ಯಾರು ಎಂಬ ಪ್ರಶ್ನೆಗೂ ಈ ಬಾರಿ ಉತ್ತರ ಸಿಕ್ಕಿರುವುದು ದೊಡ್ಡ ಸಾಧನೆ.


ಶರತ್ ಕಮಲ್

ಕಳೆದ ನಾಲ್ಕು ವರ್ಷಗಳಲ್ಲಿ ಭಾರತದ ಸಾಧನೆ





ಬರ್ಮಿಂಗ್‌ಹ್ಯಾಮ್ ಕೂಟದಲ್ಲಿ ಭಾರತದ ಕುಸ್ತಿಪಟುಗಳು ಪದಕಗಳ ಭರ್ಜರಿ ಬೇಟೆಯಾಡಿದರು. ಒಲಿಂಪಿಯನ್ ಬಜರಂಗ್ ಪೂನಿಯಾ, ಸಾಕ್ಷಿ ಮಲೀಕ್, ವಿನೇಶಾ ಪೋಗಟ್ ತಮ್ಮ ಮೇಲಿಟ್ಟಿದ್ದ ನರೀಕ್ಷೆ ಉಳಿಸಿಕೊಂಡರು. ಅವರು ಚಿನ್ನಕ್ಕೆ ಮುತ್ತಿಟ್ಟರು.

ಪ್ರವಾ ಗ್ರಾಫಿಕ್ಸ್: ಕಣಕಾಲಮಠ

ಕ್ರೀಡಾವಾರು ಪದಕ ಗಳಿಕೆ — 2010 (ನವದೆಹಲಿ)

ಕ್ರೀಡೆ	ಒಟ್ಟು ಪದಕ
ಶೂಟಿಂಗ್	30
ಕುಸ್ತಿ	19
ಆರ್ಚರಿ	8
ಬಾಕ್ಸಿಂಗ್	7
ಅಥ್ಲೆಟಿಕ್ಸ್	12
ವೇಟ್‌ಲಿಫ್ಟಿಂಗ್	8
ಬ್ಯಾಡ್ಮಿಂಟನ್	4
ಟೇಬಲ್ ಟೆನಿಸ್	5
ಟೆನಿಸ್	4
ಜಿಮ್ನಾಸ್ಟಿಕ್ಸ್	2
ಹಾಕಿ	1
ಈಜು	1

ಕ್ರೀಡಾವಾರು ಪದಕ ಗಳಿಕೆ — 2014 (ಗ್ಲಾಸ್ಗೊ)

ಕ್ರೀಡೆ	ಒಟ್ಟು ಪದಕ
ಶೂಟಿಂಗ್	17
ಕುಸ್ತಿ	13
ವೇಟ್‌ಲಿಫ್ಟಿಂಗ್	14
ಬ್ಯಾಡ್ಮಿಂಟನ್	4
ಅಥ್ಲೆಟಿಕ್ಸ್	3
ಸ್ಕ್ವಾಷ್	1
ಬಾಕ್ಸಿಂಗ್	5
ಜುಡೊ	4
ಹಾಕಿ	1
ಟೇಬಲ್ ಟೆನಿಸ್	1
ಜಿಮ್ನಾಸ್ಟಿಕ್ಸ್	1
ಈಜು	0

ಕ್ರೀಡಾವಾರು ಪದಕ ಗಳಿಕೆ — 2018 (ಗೋಲ್ಡ್‌ಕೋಸ್ಟ್)

ಕ್ರೀಡೆ	ಒಟ್ಟು ಪದಕ
ಶೂಟಿಂಗ್	16
ಕುಸ್ತಿ	12
ವೇಟ್‌ಲಿಫ್ಟಿಂಗ್	9
ಬಾಕ್ಸಿಂಗ್	9
ಟೇಬಲ್ ಟೆನಿಸ್	8
ಬ್ಯಾಡ್ಮಿಂಟನ್	6
ಅಥ್ಲೆಟಿಕ್ಸ್	3
ಸ್ಕ್ವಾಷ್	2
ಪವರ್‌ಲಿಫ್ಟಿಂಗ್	1

ಕ್ರೀಡಾವಾರು ಪದಕ ಗಳಿಕೆ — 2022 (ಬರ್ಮಿಂಗ್‌ಹ್ಯಾಮ್)

ಕ್ರೀಡೆ	ಒಟ್ಟು ಪದಕ
ಕುಸ್ತಿ	12
ಟೇಬಲ್‌ಟೆನಿಸ್	7
ವೇಟ್‌ಲಿಫ್ಟಿಂಗ್	10
ಬಾಕ್ಸಿಂಗ್	7
ಬ್ಯಾಡ್ಮಿಂಟನ್	6
ಅಥ್ಲೆಟಿಕ್ಸ್	8
ಲಾನ್‌ಬಾಲ್ಸ್	2
ಪ್ಯಾರಾಪವರ್ ಲಿಫ್ಟಿಂಗ್	1
ಜುಡೊ	3
ಹಾಕಿ	2
ಕ್ರಿಕೆಟ್	1
ಸ್ಕ್ವಾಷ್	2


ಅಭಿನವ್ ಬಿಂದ್ರಾ ಶೂಟಿಂಗ್ | ನೀರಜ್ ಚೋಪ್ರಾ ಜಾವೆಲಿನ್ ಥ್ರೋ | ವಿಕಾಸ್ ಗೌಡ ಡಿಸ್ಕಸ್ ಥ್ರೋ | ಸೈನಾ ನೆಹ್ವಾಲ್ ಬ್ಯಾಡ್ಮಿಂಟನ್ | ಮೇರಿಕೋಮ್ ಬಾಕ್ಸಿಂಗ್ | ನಿಕತ್ ಜರೀನ್ ಬಾಕ್ಸಿಂಗ್ | ಮೀರಾಬಾಯಿ ವೇಟ್ ಲಿಫ್ಟಿಂಗ್


ಭಾರತ ಬ್ಯಾಡ್ಮಿಂಟನ್ ತಂಡ–2022

ಟಾಟಾ ಸ್ಟೀಲ್ ಚೆಸ್‌ಗೆ ಹಂಪಿ, ಹರಿಕಾ

ಚೆನ್ನೈ (ಪಿಟಿಐ): ಟಾಟಾ ಸ್ಟೀಲ್ ಚೆಸ್ ಟೂರ್ನಿಯಲ್ಲಿ ಮೊದಲ ಬಾರಿಗೆ ಮಹಿಳಾ ವಿಭಾಗಕ್ಕೆ ಅವಕಾಶ ಮಾಡಿಕೊಡಲಾಗಿದ್ದು, ಕೊನೇರು ಹಂಪಿ, ದ್ರೋಣವಲ್ಲಿ ಹರಿಕಾ ಮತ್ತು ಉದಯೋನ್ಮುಖ ಆಟಗಾರ್ತಿ ಆರ್. ವೈಶಾಲಿ ಆಡಲಿದ್ದಾರೆ.


ಕೊನೇರು ಹಂಪಿ

ನಾಲ್ಕನೇ ಆವೃತ್ತಿಯ ಟೂರ್ನಿಯು ನವೆಂಬರ್ 29ರಿಂದ ಡಿಸೆಂಬರ್ 4ರವರೆಗೆ ಕೋಲ್ಕತ್ತಾದಲ್ಲಿ ನಡೆಯಲಿದೆ. ಇದೇ ಮೊದಲ ಬಾರಿಗೆ ಮಹಿಳೆ ಮತ್ತು ಪುರುಷರ ವಿಭಾಗದ ವಿಜೇತರಿಗೆ ಸಮನಾದ ಬಹುಮಾನ ಮೊತ್ತ ನೀಡಲಾಗುತ್ತದೆ.ಹಂಪಿ, ಹರಿಕಾ ಮತ್ತು ವೈಶಾಲಿ ಅವರು ಮಂಗಳವಾರ ಚೆಸ್ ಒಲಿಂಪಿಯಾಡ್‌ನಲ್ಲಿ ಕಂಚಿನ ಪದಕ ಗೆದ್ದ ಭಾರತ ತಂಡದಲ್ಲಿದ್ದರು.

ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್ ಅವರು ಟೂರ್ನಿಯ ಪ್ರಚಾರ ರಾಯಭಾರಿ ಮತ್ತು ಸಲಹೆಗಾರರಾಗಿದ್ದಾರೆ.



ಕಾಮನ್ ವೆಲ್ತ್ ಗೇಮ್ಸ್‌ನಲ್ಲಿ ಭಾರತಕ್ಕೆ ಟ್ರಿಪಲ್ ಜಂಪಿಂಗ್‌ನಲ್ಲಿ ಚಿನ್ನ – ಬೆಳ್ಳಿ

ಸಿಡಬ್ಲ್ಯುಜಿ: ಪಾಕ್‌ನ ಬಾಕ್ಸರ್‌ಗಳು ನಾಪತ್ತೆ

ಕರಾಚಿ (ಪಿಟಿಐ): ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ತೆರಳಿದ್ದ ಪಾಕಿಸ್ತಾನದ ಇಬ್ಬರು ಬಾಕ್ಸರ್‌ಗಳು ನಾಪತ್ತೆಯಾಗಿದ್ದಾರೆ. ರಾಷ್ಟ್ರೀಯ ಫೆಡರೇಷನ್ ಬುಧವಾರ ಈ ವಿಷಯ ತಿಳಿಸಿದೆ.

'ಬಾಕ್ಸರ್‌ಗಳಾದ ಸುಲೇಮಾನ್ ಬಲೋಚ್ ಮತ್ತು ನಜೀರುಲ್ಲಾ ಅವರು ಕೂಟ ಮುಗಿದ ಬಳಿಕ ನಾಪತ್ತೆಯಾಗಿದ್ದಾರೆ' ಎಂದು ಪಾಕಿಸ್ತಾನ ಬಾಕ್ಸಿಂಗ್ ಫೆಡರೇಷನ್ (ಪಿಬಿಎಫ್) ಕಾರ್ಯದರ್ಶಿ ನಾಸಿರ್ ತಾಂಗ್ ಖಚಿತಪಡಿಸಿದ್ದಾರೆ.

'ಬಾಕ್ಸರ್‌ಗಳ ಪಾಸ್‌ಪೋರ್ಟ್ ಸೇರಿದಂತೆ ಮತ್ತಿತರ ದಾಖಲೆಗಳು ಫೆಡರೇಷನ್‌ನ ಅಧಿಕಾರಿಗಳ ಬಳಿಯಿವೆ' ಎಂದು ನಾಸಿರ್ ಹೇಳಿದ್ದಾರೆ.

ಕಾಮನ್‌ವೆಲ್ತ್ ಗೇಮ್ಸ್ ಸೋಮವಾರ ಮುಕ್ತಾಯವಾಗಿತ್ತು.

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.
The job involves promoting sales of advertisement space in all our group of publications in liaison with advertisement agencies and advertisers. In addition they will also be responsible for follow up and collection of out standings.

MANAGER - AD SALES
Job Location: Mysore
Qualification & Experience: Graduation / MBA in Marketing / Sales with 8+ years of experience in selling advertisement space. Candidates with space selling experience in media / yellow pages will be preferred. Age: below 45 years.
Salary will be based on qualification and experience.

ASST. MANAGER / EXECUTIVES - AD SALES
Job Location: Yadgiri District.
Qualification & Experience: Graduation / MBA in Marketing / Sales with 1 to 3 years of experience in selling advertisement space. Highly passionate and motivated individuals with good communication skills with space selling experience in media / yellow pages will be preferred.
Salary will be based on qualification and experience.
Please send your application **within 7 days** for the above position mentioning the job applied for (subject of the e-mail) and along with updated Bio-data to:
Assistant Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: careers@deccanherald.co.in



ಮಹಾರಾಜ ಟ್ರೋಫಿ: ಮೈಸೂರಿಗೆ ಭರ್ಜರಿ ಜಯ; ಟೈಗರ್ಸ್‌ಗೆ ನಿರಾಸೆ

ಕರುಣ್ ಭರ್ಜರಿ ಬ್ಯಾಟಿಂಗ್

• ಮೋಹನ್ ಕುಮಾರ ಸಿ.

ಮೈಸೂರು: ಅನುಭವಿ ಆಟಗಾರ ಕರುಣ್ ನಾಯರ್ ಅಬ್ಬರದ ಬ್ಯಾಟಿಂಗ್ ಬಲದಿಂದ ಮೈಸೂರು ವಾರಿಯರ್ಸ್ ತಂಡವು ಇಲ್ಲಿ ನಡೆಯುತ್ತಿರುವ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಎರಡನೇ ಜಯ ಸಾಧಿಸಿತು.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಮೈಸೂರು ತಂಡ ಹುಬ್ಬಳ್ಳಿ ಟೈಗರ್ಸ್ ವಿರುದ್ಧ 10 ವಿಕೆಟ್‌ಗಳಿಂದ ಗೆದ್ದಿತು.

ಟಾಸ್ ಗೆದ್ದ ಕರುಣ್ ನಾಯರ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಹುಬ್ಬಳ್ಳಿ ತಂಡವು ಆರಂಭಿಕ ಬ್ಯಾಟರ್ ಲವನೀತ್ ಸಿಸೊಡಿಯಾ (38 ರನ್) ಹಾಗೂ ಎಂಟನೇ ಕ್ರಮಾಂಕದ ತುಷಾರ್ ಸಿಂಗ್ (36 ರನ್) ಅವರ ಬ್ಯಾಟಿಂಗ್‌ನಿಂದಾಗಿ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 140 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಮೈಸೂರು ತಂಡವು 15.5 ಓವರ್‌ಗಳಲ್ಲಿ 141 ರನ್ ಗಳಿಸಿತು. ಆರಂಭಿಕ ಜೋಡಿ, ನಾಯಕ ಕರುಣ್ (ಅಜೇಯ 91; 52ಎ, 4X11, 6X3) ಹಾಗೂ ನಿಹಾಲ್ ಉಳ್ಳಾಲ್ (ಅಜೇಯ 48; 43ಎ, 4X2, 6X1) ಮುರಿಯದ ಮೊದಲ ವಿಕೆಟ್ ಜೊತೆಯಾಟದಲ್ಲಿ ತಂಡವನ್ನು ಗೆಲುವಿನ ದಡ ಸೇರಿಸಿದರು.

ಹುಬ್ಬಳ್ಳಿ ತಂಡದ ನಾಯಕ, ಅನುಭವಿ ವೇಗಿ ಅಭಿಮನ್ಯು ಮಿಥುನ್ ಹಾಗೂ ವಿ. ಕೌಶಿಕ್ ಅವರ ಬೌಲಿಂಗ್ ತಂತ್ರಗಳು ಫಲ ಕೊಡಲಿಲ್ಲ. ಹುಬ್ಬಳ್ಳಿ ಬೌಲರ್‌ಗಳನ್ನು ಕರುಣ್–ನಿಹಾಲ್ ಜೋಡಿಯು ಕಾಡಿತು.

ದಿನದ ಮತ್ತೊಂದು ಪಂದ್ಯದಲ್ಲಿ ಮಂಗಳೂರು ಯುನೈಟೆಡ್ ತಂಡವು ಎಂಟು ವಿಕೆಟ್‌ಗಳಿಂದ ಶಿವಮೊಗ್ಗ ಸ್ಟ್ರೈಕರ್ಸ್ ಎದುರು ಗೆಲುವು ಸಾಧಿಸಿತು.


ಹುಬ್ಬಳ್ಳಿ ವಿರುದ್ಧ ಶತಕದ ಜೊತೆಯಾಟ ಆಡಿದ ಮೈಸೂರು ವಾರಿಯರ್ಸ್ ಗೆಲುವಿಗೆ ಕಾರಣರಾದ ಕರುಣ್ ನಾಯರ್ ಹಾಗೂ ನಿಹಾಲ್ ಉಳ್ಳಾಲ್ ಸಂಭ್ರಮ –ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಮುಖ್ಯಾಂಶಗಳು
- 52 ಎಸೆತಗಳಲ್ಲಿ 91 ರನ್ ಸಿಡಿಸಿದ ಕರುಣ್
- ಶತಕದ ಜೊತೆಯಾಟವಾಡಿದ ನಿಹಾಲ್
- ಹುಬ್ಬಳ್ಳಿಗೆ ಎರಡನೇ ಸೋಲು

ಸಂಕ್ಷಿಪ್ತ ಸ್ಕೋರ್: ಹುಬ್ಬಳ್ಳಿ ಟೈಗರ್ಸ್: 20 ಓವರ್‌ಗಳಲ್ಲಿ 6ಕ್ಕೆ 140 (ಲವ್‌ನಿತ್ ಸಿಸೋಡಿಯಾ 38, ತುಷಾರ್ ಸಿಂಗ್ 36. ಶ್ರೇಯಸ್ ಗೋಪಾಲ್ 22ಕ್ಕೆ 2) ಮೈಸೂರು ವಾರಿಯರ್ಸ್: 15 .5ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 141 (ಕರುಣ್ ನಾಯರ್ 91, ನಿಹಾಲ್ ಉಳ್ಳಾಲ್ 48)
ಫಲಿತಾಂಶ: ಮೈಸೂರು ವಾರಿಯರ್ಸ್‌ಗೆ 10 ವಿಕೆಟ್ ಜಯ. ಪಂದ್ಯ ಶ್ರೇಷ್ಠ: ಕರುಣ್ ನಾಯರ್
ಇಂದಿನ ಪಂದ್ಯಗಳು: ಬೆಂಗಳೂರು ಬ್ಲಾಸ್ಟರ್ಸ್–ಮಂಗಳೂರು ಯುನೈಟೆಡ್ (ಮಧ್ಯಾಹ್ನ 3ರಿಂದ)
ಮೈಸೂರು ವಾರಿಯರ್ಸ್–ಗುಲ್ಬರ್ಗ ಮಿಸ್ಟಿಕ್ಸ್ (ರಾತ್ರಿ 7ರಿಂದ)
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್.

ಕೊಕ್ಕೊ: ತೆಲುಗು ಯೋಧಾಸ್‌ಗೆ ಪ್ರಜ್ವಲ್ ನಾಯಕ

ನವದೆಹಲಿ (ಪಿಟಿಐ): ಅಲ್ಟಿಮೇಟ್ ಕೊಕ್ಕೊ ಲೀಗ್‌ನಲ್ಲಿ ಆಡಲಿರುವ ತೆಲುಗು ಯೋಧಾಸ್ ತಂಡಕ್ಕೆ ಪ್ರಜ್ವಲ್ ಕೆ.ಎಚ್. ಅವರು ನಾಯಕರಾಗಿ ನೇಮಕಗೊಂಡಿದ್ದಾರೆ.

ಆಲ್‌ರೌಂಡರ್ ಪ್ರತೀಕ್ ವಾಯಿಕಾರ್ ಉಪನಾಯಕರಾಗಲಿದ್ದಾರೆ.

ಚೊಚ್ಚಲ ಆವೃತ್ತಿಯ ಅಲ್ಟಿಮೇಟ್ ಕೊಕ್ಕೊ ಲೀಗ್ ಇದೇ 14ರಿಂದ ಪುಣೆ ಶಿವ ಛತ್ರಪತಿ ಕ್ರೀಡಾಂಗಣದಲ್ಲಿ ನಿಗದಿಯಾಗಿದೆ.

ಕರ್ನಾಟಕದ ಪ್ರಜ್ವಲ್ ಅವರು ಯೋಧಾಸ್ ತಂಡದ ಪ್ರಮುಖ ಅಟ್ಯಾಕರ್ ಆಗಿದ್ದಾರೆ. ಕರ್ನಾಟಕ ತಂಡವನ್ನು ಅವರು ನಾಯಕರಾಗಿ ಮುನ್ನಡೆಸಿದ್ದರು.

ತೆಲುಗು ಯೋಧಾಸ್ ತಂಡವು ದೇಶದಾದ್ಯಂತ 22 ಆಟಗಾರರನ್ನು ಸೇರಿಸಿಕೊಂಡಿದೆ.

ರ್‍ಯಾಂಕಿಂಗ್: ರವಿ, ಶ್ರೇಯಸ್‌ಗೆ ಬಡ್ತಿ

ದುಬೈ (ಪಿಟಿಐ): ಭಾರತದ ಸೂರ್ಯಕುಮಾರ್ ಯಾದವ್ ಅವರು ಐಸಿಸಿ ಟಿ20 ಬ್ಯಾಟರ್‌ಗಳ ರ್‍ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನ ಕಾಪಾಡಿಕೊಂಡಿದ್ದಾರೆ. ಶ್ರೇಯಸ್ ಅಯ್ಯರ್ ಆರು ಸ್ಥಾನ ಏರಿಕೆ ದಾಖಲಿಸಿ 19ನೇ ಸ್ಥಾನ ಪಡೆದಿದ್ದಾರೆ.

ಸೂರ್ಯಕುಮಾರ್ ಬಳಿ 805 ಪಾಯಿಂಟ್‌ಗಳಿವೆ. ಪಾಕಿಸ್ತಾನದ ಬಾಬರ್ ಆಜಂ ಅಗ್ರಸ್ಥಾನದಲ್ಲಿದ್ದಾರೆ.

ವೆಸ್ಟ್ ಇಂಡೀಸ್ ವಿರುದ್ಧ ಇತ್ತೀಚೆಗೆ ನಡೆದ ಟಿ20 ಸರಣಿಯ ಕೊನೆಯ ಪಂದ್ಯದಲ್ಲಿ ಶ್ರೇಯಸ್ 40 ಎಸೆತಗಳಲ್ಲಿ 64 ರನ್ ಸಿಡಿಸಿದ್ದರು. ಅವರ ಬಳಿ ಸದ್ಯ 578 ಪಾಯಿಂಟ್‌ಗಳಿವೆ.

ಬೌಲರ್‌ಗಳ ವಿಭಾಗದಲ್ಲಿ ಭಾರತದ ಸ್ಪಿನ್ನರ್‌ಗಳಾದ ಕುಲದೀಪ್ ಯಾದವ್ ಮತ್ತು ರವಿ ಬಿಷ್ಣೋಯಿ ಭಾರಿ ಬಡ್ತಿ ಗಳಿಸಿದ್ದಾರೆ. ರವಿ, 50 ಸ್ಥಾನಗಳ ಏರಿಕೆ ಕಂಡು 44ನೇ ಸ್ಥಾನದಲ್ಲಿದ್ದಾರೆ. ಕುಲದೀಪ್ 87ನೇ ಸ್ಥಾನಕ್ಕೆ ತಲುಪಿದ್ದಾರೆ.

ಫೆನ್ಸಿಂಗ್: ಚಿನ್ನ ಗೆದ್ದ ಭವಾನಿ

ಲಂಡನ್ (ಪಿಟಿಐ): ಭಾರತದ ಭವಾನಿದೇವಿ ಅವರು ಇಲ್ಲಿ ನಡೆಯುತ್ತಿರುವ ಕಾಮನ್‌ವೆಲ್ತ್ ಫೆನ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಜಯಿಸಿದ್ದಾರೆ. ಇದರೊಂದಿಗೆ ಕಳೆದ ಬಾರಿ ಗೆದ್ದಿದ್ದ ಪ್ರಶಸ್ತಿಯನ್ನು ಉಳಿಸಿಕೊಂಡಿದ್ದಾರೆ.

ಮಂಗಳವಾರ ನಡೆದ ಮಹಿಳೆಯರ ವೈಯಕ್ತಿಕ ಸೇಬರ್ ವಿಭಾಗದ ಫೈನಲ್ ಹಣಾಹಣಿಯಲ್ಲಿ ಅವರು 15–10ರಿಂದ ಆಸ್ಟ್ರೇಲಿಯಾದ ವೆರೋನಿಕಾ ವೇಸ್ ಲೇವಾ ಅವರನ್ನು ಸೋಲಿಸಿದರು.

ಕಳೆದ ವರ್ಷ ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ್ದ ಚೆನ್ನೈನ ಭವಾನಿ, ಈ ಶ್ರೇಯ ಗಳಿಸಿದ ಭಾರತದ ಮೊದಲ ಫೆನ್ಸರ್ ಎನಿಸಿಕೊಂಡಿದ್ದರು.

ಈ ವರ್ಷದ ಆರಂಭದಲ್ಲಿ ಇಸ್ತಾಂಬುಲ್‌ನಲ್ಲಿ ನಡೆದಿದ್ದ ವಿಶ್ವಕಪ್‌ನಲ್ಲಿ 23ನೇ ಸ್ಥಾನ ಗಳಿಸಿದ್ದ ಅವರು, ಕೈರೊದಲ್ಲಿ ನಡೆದಿದ್ದ ವಿಶ್ವಚಾಂಪಿಯನ್‌ಷಿಪ್‌ನಲ್ಲಿ ಎರಡನೇ ಸುತ್ತು ಪ್ರವೇಶಿಸಿದ್ದರು. ಕಾಮನ್‌ವೆಲ್ತ್ ಚಾಂಪಿಯನ್‌ಷಿಪ್ ಅವರು ಈ ವರ್ಷ ಭಾಗವಹಿಸುತ್ತಿರುವ 10ನೇ ಅಂತರ ರಾಷ್ಟ್ರೀಯ ಟೂರ್ನಿಯಾಗಿದೆ.

'ಇದೊಂದು ಸವಾಲಿನ ಪಂದ್ಯವಾಗಿತ್ತು. ಈ ವರ್ಷ ಮತ್ತೊಂದು ಚಿನ್ನದ ಪದಕ ಜಯಿಸಿರುವುದಕ್ಕೆ ಖುಷಿಯಿದೆ. ಮುಂದಿನ ಟೂರ್ನಿಗಳಲ್ಲೂ ಇದೇ ಲಯ ಮುಂದುವರಿಸುವೆ' ಎಂದು ಭವಾನಿ ಹೇಳಿದ್ದಾರೆ.

ಭಾರತ ಫೆನ್ಸಿಂಗ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ರಾಜೀವ್ ಮೆಹ್ತಾ, ಭವಾನಿ ಅವರನ್ನು ಅಭಿನಂದಿಸಿದ್ದಾರೆ. 'ದೇಶದ ಪ್ರತಿ ಫೆನ್ಸರ್‌ಗಳಿಗೂ ಭವಾನಿ ಅವರು ಪ್ರೇರಕಶಕ್ತಿಯಾಗಿದ್ದಾರೆ.' ಎಂದು ಹೇಳಿದ್ದಾರೆ.


ಭವಾನಿ ದೇವಿ– ಸಾಯ್ ಮೀಡಿಯಾ ಟ್ವಿಟರ್ ಚಿತ್ರ

ಹಾಕಿ: ವಿದ್ಯಾಶಿಲ್ಪ ಅಕಾಡೆಮಿಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾಶಿಲ್ಪ ಅಕಾಡೆಮಿ ತಂಡವು ಇಲ್ಲಿ ನಡೆಯುತ್ತಿರುವ ಸೆಂಟಿನರಿ ಶೀಲ್ಡ್ 17 ವರ್ಷದೊಳಗಿನವರ ಹಾಕಿ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಬುಧವಾರ ನಡೆದ ಪಂದ್ಯದಲ್ಲಿ ವಿದ್ಯಾಶಿಲ್ಪ 4–0ಯಿಂದ ಗ್ರೀನ್‌ವುಡ್ ಹೈಸ್ಕೂಲ್ ತಂಡಕ್ಕೆ ಸೋಲುಣಿಸಿತು. ವಿಜೇತ ತಂಡದ ಆಯುಷ್ ಅರವಿಂದ್ (2ನೇ ನಿಮಿಷ), ಜಿದಾನ್ (14ನೇ ನಿ.), ನಮನ್ ದಾಗ (10ನೇ ನಿ.) ಮತ್ತು ವಿಹಾನ್ ಎಸ್.ಜಿ. (37ನೇ ನಿ.) ಗೋಲು ಗಳಿಸಿದರು.

ಫಾ. ಎರಿಕ್ ವಾಜ್ ಸ್ಮಾರಕ ಅಂತರ್‌ಶಾಲಾ 14 ವರ್ಷದೊಳಗಿನವರ ಟೂರ್ನಿಯ ಪಂದ್ಯದಲ್ಲಿ ಎಸ್‌ಜೆಬಿಎಚ್‌ಎಸ್ 3–1ರಿಂದ ಚಿನ್ಮಯ ವಿದ್ಯಾಲಯ ಎದುರು ಶೂಟೌಟ್‌ನಲ್ಲಿ ಗೆದ್ದಿತು.


ಗ್ರೀನ್‌ವುಡ್ ಹೈಸ್ಕೂಲ್ ತಂಡದ ಸಚಿನ್ (ಹಸಿರು ಪೋಷಾಕು) ಮತ್ತು ವಿದ್ಯಾಶಿಲ್ಪ ಅಕಾಡೆಮಿಯ ನಮನ್ ದಾಗಾ ಚೆಂಡಿನ ಮೇಲೆ ಹತೋಟಿ ಸಾಧಿಸಲು ಯತ್ನಿಸಿದರು– ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ರೆಹಮಾನ್ ಮಿಂಚು ಬಾಂಗ್ಲಾಕ್ಕೆ ಜಯ

ಹರಾರೆ: ಮುಸ್ತಫಿಜುರ್ ರೆಹಮಾನ್ (17ಕ್ಕೆ4) ಅವರ ಅಮೋಘ ಬೌಲಿಂಗ್ ಬಲದಿಂದ ಬಾಂಗ್ಲಾದೇಶ ತಂಡವು ಜಿಂಬಾಬ್ವೆ ಎದುರಿನ ಏಕದಿನ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಹರಾರೆ ಸ್ಪೋರ್ಟ್ಸ್ ಅಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವು 105 ರನ್‌ಗಳಿಂದ ಜಯಿಸಿತು.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 50 ಓವರ್‌ಗಳಲ್ಲಿ 9ಕ್ಕೆ 256 (ಅನಾಮುಲ್ ಹಕ್ 76, ಅಫಿಫ್ ಹುಸೇನ್ ಔಟಾಗದೆ 85, ಮೆಹಮುದುಲ್ಲಾ 39, ಬ್ರಾಡ್ ಇವಾನ್ಸ್ 53ಕ್ಕೆ2, ಎಲ್. ಜಾಂಗವೆ 38ಕ್ಕೆ2), ಜಿಂಬಾಬ್ವೆ: 32.2 ಓವರ್‌ಗಳಲ್ಲಿ 151 (ಕ್ಲೈವ್ ಮದಾಂಡೆ 24, ರಿಚರ್ಡ್ ನಗರಾವಾ 34, ವಿಕ್ಟರ್ ನಯುಚಿ 26, ಮುಸ್ತಫಿಜುರ್ ರೆಹಮಾನ್17ಕ್ಕೆ4) ಫಲಿತಾಂಶ: ಬಾಂಗ್ಲಾದೇಶ ತಂಡಕ್ಕೆ 105 ರನ್‌ಗಳ ಜಯ.

